# ಕರ್ನಾಟಕ ವಿಕಾಸ
# Karnataka Vikas

ಜುಲೈ 2017

July 2017

## ಪಿಎಂಜಿಎಸ್‌ವೈ ಯೋಜನೆಯಡಿ ರಸ್ತೆ ಅಭಿವೃದ್ಧಿ ಯಶಸ್ವಿ ಅನುಷ್ಠಾನಕ್ಕೆ
## ರಾಜ್ಯಕ್ಕೆ ಸಂದ ರಾಷ್ಟ್ರೀಯ ಗೌರವ





ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಯೋಜನೆಗಳ ಪ್ರಗತಿಯ ಕುರಿತು ಮಾನ್ಯ ಗ್ರಾ.ಪಂ.ಸಚಿವರು, ಜನಪ್ರತಿನಿಧಿಗಳು ಮತ್ತು ಇಲಾಖಾ ಮುಖ್ಯಸ್ಥರುಗಳೊಂದಿಗೆ ಚರ್ಚೆ



ಗದಗ ಬೆಟಗೇರಿ ಅವಳಿ ನಗರದ ನೀರು ಸಂಗ್ರಹಣೆಗೆ ನೂತನ ಕೆರೆ ನಿರ್ಮಾಣದ ಶಂಕುಸ್ಥಾಪನೆಯ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಹಾಗೂ ಸಚಿವರು, ಶಾಸಕರುಗಳು ವಿವಿಧ ಗಣ್ಯರು ಭಾಗವಹಿಸಿರುವ ನೋಟ




ನವದೆಹಲಿಯ ವಿಜ್ಞಾನ ಭವನದ ಸಮಾರಂಭದಲ್ಲಿ ಪಿಎಂಜಿಎಸ್‌ವೈ ಯೋಜನೆಯಡಿ ರಸ್ತೆ ಅಭಿವೃದ್ಧಿ ಯಶಸ್ವಿ ಅನುಷ್ಠಾನಕ್ಕಾಗಿ ರಾಷ್ಟ್ರ ಪ್ರಶಸ್ತಿ ಲಭಿಸಿದ್ದು, ಗ್ರಾ.ಪಂ. ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಎನ್. ನಾಗಾಂಬಿಕಾದೇವಿ, ಇಲಾಖೆಯ ಸುವರ್ಣ ಗ್ರಾಮೋದಯ ಯೋಜನೆ ನಿರ್ದೇಶಕರಾದ ಡಾ.ಬೂವನಹಳ್ಳಿ ನಾಗರಾಜು, ಕರ್ನಾಟಕ ರಾಜ್ಯ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಗಮದ ಮುಖ್ಯ ಕಾರ್ಯಾಚರಣೆ ಅಧಿಕಾರಿಗಳಾದ ಶ್ರೀ ಬಿಸೇಗೌಡ, ರಾಜ್ಯ ಗುಣನಿಯಂತ್ರಣ ಸಮನ್ವಯಕಾರರಾದ ಶ್ರೀ ಕೃಷ್ಣಮೂರ್ತಿ, ಆರ್ಥಿಕ ನಿಯಂತ್ರಕರಾದ ಶ್ರೀಮತಿ ರೂಪಶ್ರೀ ಬಿ.ವಿ, ಮಾಹಿತಿ ತಂತ್ರಜ್ಞಾನ ಅಧಿಕಾರಿಗಳಾದ ಶ್ರೀಮತಿ ಕೆ.ರಾಧ ಮತ್ತು ಶ್ರೀ ವಿದ್ಯಾಶಂಕರ್ ರವರು ಈ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸುತ್ತಿರುವ ಸಂದರ್ಭ.

# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಜುಲೈ 2017 | ಸಂಪುಟ : 58 | Volume : 58
July 2017 | ಸಂಚಿಕೆ : 08 | Issue : 08

## ಈ ಸಂಚಿಕೆಯೊಳಗೆ

| | | |
|---|---|---|
| ಸಚಿವಾಲಯದಿಂದ ಸಂದೇಶ | – ಡಾ॥ ಎನ್.ನಾಗಾಂಬಿಕಾ ದೇವಿ | 5 |
| ವರದಿ | – ಕೆ.ರಾಧ | 7 |
| | – ಶ್ರೀಮತಿ ಸುನಂದಾ | 9 |
| ಲೇಖನ | – ಮಲ್ಲಿಕಾರ್ಜುನ ಪಿ.ಎಸ್ | 11 |
| | – ಡಾ. ಟಿ.ವಿ. ಮೋಹನ್‌ದಾಸ್ | 13 |
| ಯಶೋಗಾಥೆ | – ಬಿ.ಎಲ್.ಈಶ್ವರ್ ಪ್ರಸಾದ್ | 16 |
| | – ಕೆ.ಪಿ.ಸಂಜೀವಪ್ಪ | 19 |
| | – ಕೆ. ಎಂ ಶಿವಕುಮಾರಸ್ವಾಮಿ | 21 |
| | – ಕೆ. ಸೋಮಯ್ಯ | 24 |
| ಲೇಖನ | – ಮುರಳಿ.ಕೆ | 27 |
| | – ನಿಂಗೇಗೌಡ | 30 |
| ಸುತ್ತೋಲೆಗಳು | | 34 |




ಪ್ರಕಾಶಕರು
**ಎಂ.ಕೆ.ಕೆಂಪೇಗೌಡ**
ನಿರ್ದೇಶಕರು(ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಡಾ॥ ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

**ಮುಬಾರಕ್ ಅಹ್ಮದ್**
ಸಂಪಾದಕರು ಹಾಗೂ ಸಾರ್ವಜನಿಕ
ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು
**ಆಗ್ನೇಸ್ ಮೇರಿ**

### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ.100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್‌ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಚೇರಿ ವಿಳಾಸ

ಸಂಪಾದಕರು ಕರ್ನಾಟಕ ವಿಕಾಸ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಇಲಾಖೆ
ನಂ.309, 3ನೇ ಮಹಡಿ, ಗೇಟ್ ನಂ.1,
ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ: 080–22353857
www.rdpr.kar.nic.in
Email: kvrdpr@gmail.com

### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆ ಕುರಿತು ನಿಮ್ಮ ನುಡಿ




**ಮಾನ್ಯರೆ,**

ಕರ್ನಾಟಕ ವಿಕಾಸ ಜೂನ್–2017ರ ಸಂಚಿಕೆಯು ಹಸಿರುಮಯವಾಗಿ ಮೂಡಿಬಂದಿರುವುದು ಪರಿಸರ ಸಂರಕ್ಷಣೆಗೆ ಮುನ್ನುಡಿಯಂತಿದೆ. ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಪರಿಸರ ರಕ್ಷಣೆಗೆ ಆದ್ಯತೆ ನೀಡಿ, ಜನತೆಗೆ ಸಂದೇಶ ನೀಡಿರುವುದು ಬಹಳ ಸಂತೋಷವಾಗಿದೆ. ಇಂದಿಗೂ ಮಹಾತ್ಮ ಗಾಂಧಿಯವರ ಕೆಲವು ಆದರ್ಶಗಳನ್ನು ಪಾಲಿಸಬೇಕೆಂದು ಹಾಗೂ ಇಲಾಖೆಯು ಗ್ರಾಮಗಳ ಉದ್ಧಾರಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿರುವುದು ಒಳ್ಳೆಯ ವಿಷಯವಾಗಿದೆ. ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿಸಲು ಇಲಾಖೆಯು ಶ್ರಮಪಡುತ್ತಿರುವುದಕ್ಕೆ ಅಭಿನಂದನೆಗಳು.

**ಶ್ರೀಮತಿ ಕುಮಾರ್ ಆನಂದ**

ಕೋಂ ತಿಪ್ಪೇಶ ನಿಲಯ, ಬನಶಂಕರಿ 2ನೇ ಹಂತ,

ಶಾಂತಿ ನಗರ, 3ನೇ ಅಡ್ಡರಸ್ತೆ, ತುಮಕೂರು 572102.

ಪರಿಸರ ದಿನ ಅಂಗವಾಗಿ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ವರ್ಣರಂಜಿತ ಮುಖಪುಟದೊಂದಿಗೆ ಮೂಡಿಬಂದಿದೆ. ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳು, ಯಶೋಗಾಥೆ, ಕವಿಯ(ಕ್ಷ)ಪ್ರಶ್ನೆ, ಬಹಳ ಉಪಯುಕ್ತವಾಗಿವೆ. ಇಂತಹ ಬರಗಾಲದ ದಿನಗಳಲ್ಲಿ ಉದ್ಯಮಿ ಕೆ.ನಾಗರಾಜು ರವರು ದಿನನಿತ್ಯ ಕೆಲಸಕಾರ್ಯಗಳಿಗೆ ತೊಂದರೆಯಾಗದಂತೆ ತಮ್ಮ ಮನೆ ಹಾಗೂ ಫ್ಯಾಕ್ಟರಿಗಳಿಗೆ ಮಳೆ ನೀರು ಸಂಗ್ರಹಣ ಪದ್ದತಿಯನ್ನು ಅಳವಡಿಸಿಕೊಂಡಿರುವುದು ಬಹಳ ಉಪಯುಕ್ತವಾಗಿದೆ. ಇದು ನೈಸರ್ಗಿಕ ಸಂಪನ್ಮೂಲಗಳನ್ನು ಉಳಿಸಿಕೊಳ್ಳಲು ಹಾಗೂ ಮುಂದಿನ ಪೀಳಿಗೆಗೆ ಬಹಳ ಉಪಯುಕ್ತವಾಗಿದ್ದು ನಾವೆಲ್ಲರೂ ಮಾಡಲೇ ಬೇಕಾದ ವಿಷಯವಾಗಿದೆ.

**ಕುಮಾರಿ ಡಿಂಪಲ್**

ಬಿಂಡಿಗನವಿಲೆ ಹೋಬಳಿ,

ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಬಹಳ ಆಕರ್ಷಕವಾಗಿ ಮೂಡಿಬಂದಿದ್ದು, ಪತ್ರಿಕೆಯಲ್ಲಿ ಶ್ರೀ ಕೆ.ಜೆ.ಜಗದೀಶ್ ರವರು ಪಂಚಾಯತಿ ಆಸ್ತಿ ಮತ್ತು ತೆರಿಗೆ ನಿರ್ಧರಣೆ ಮತ್ತು ವಸೂಲಾತಿಗೆ ಮಾರ್ಗಸೂಚಿಗಳ ಕುರಿತ ಲೇಖನದಲ್ಲಿ ತೆರಿಗೆಗೆ ಸಂಬಂಧಿಸಿದಂತೆ ವ್ಯವಹಾರಗಳ ಬಗ್ಗೆ ಅರ್ಜಿ ನಮೂನೆಯೊಂದಿಗೆ ಮಾಹಿತಿ ನೀಡಿರುವುದು ಬಹಳ ಉಪಯುಕ್ತವಾಗಿದೆ. ಹೀಗೆ ಇಲಾಖೆಯ ಕೈಗೊಳ್ಳುವ ಕೆಲವು ಕ್ರಮಗಳ ಬಗ್ಗೆ ಸಂಕ್ಷಿಪ್ತ ವರದಿಗಳು ಪ್ರಕಟವಾಗುತ್ತಿರುವುದು ಗ್ರಾಮೀಣ ಜನರಿಗೆ ಬಹಳ ಅನುಕೂಲವಾಗಿದೆ. ಪತ್ರಿಕೆಯ ಎಲ್ಲಾ ವರ್ಗದ ಜನರಿಗೆ, ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆ.

**ಶ್ರೀ ನಮಿತಾ**

ಉದ್ಯೋಗಿ,

ಚಂದಾಪುರ ರಸ್ತೆ, ಅನೇಕಲ್ ತಾಲ್ಲೂಕು,

ಬೆಂಗಳೂರು

# ಸಚಿವಾಲಯದಿಂದ ಸಂದೇಶ



**ಡಾ|| ಎನ್.ನಾಗಾಂಬಿಕಾ ದೇವಿ**
ಭಾ.ಆ.ಸೇ.
**ಸರ್ಕಾರದ ಪ್ರಧಾನ ಕಾರ್ಯದರ್ಶಿ**

ಕರ್ನಾಟಕ ಸರ್ಕಾರ

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
**ಬಹುಮಹಡಿ ಕಟ್ಟಡ, ಬೆಂಗಳೂರು.**

**ಪ್ರಿಯ ಬಂಧುಗಳೇ,**

ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿ ಗ್ರಾಮೀಣ ಬಡ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ, ತನ್ಮೂಲಕ ದೇಶವನ್ನು ಪ್ರಗತಿಯ ಪಥದತ್ತ ಹೊತ್ತೊಯ್ಯುವ ಗುರುತರ ಜವಾಬ್ದಾರಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹೊಂದಿದೆ

ಇಲಾಖೆಯ ಕಾರ್ಯಕ್ರಮಗಳು ಸರ್ವರಿಗೂ ಚಿರಪರಿಚಿತವಾಗಿದ್ದು, ಹಲವು ವಿನೂತನ ತಂತ್ರಜ್ಞಾನ ಮತ್ತು ಗ್ರಾಮೀಣ ಜನರ ಮಟ್ಟಕ್ಕೆ ಇಳಿದು ಅವರ ಆಂತರ್ಯವನ್ನು ಅರಿತು ಕ್ರಿಯಾಯೋಜನೆಗಳನ್ನು ಗ್ರಾಮೀಣರ ಸಹಭಾಗಿತ್ವದ ಮೂಲಕ ರೂಪಿಸಿ ಅಮೂಲಾಗ್ರ ಬದಲಾವಣೆಯನ್ನು ಮಾಡಲಾಗುತ್ತಿರುವುದು ಸ್ವಯಂ ವೇದ್ಯ.

ಪಂಚಾಯತ್ ರಾಜ್ ಅನುಷ್ಠನದಲ್ಲಿ ಪಾರದರ್ಶಕತೆ, ದಕ್ಷತೆ ಹಾಗೂ ಉತ್ತರದಾಹಿತ್ವ ತರಲು ತಾಂತ್ರಿಕತೆಯ ನೆರವಿನ ಮೂಲಕ ಪಂಚತಂತ್ರ, ಪಂಚಮಿತ್ರ, ಇ–ಸ್ವತ್ತು, ಬಾಪೂಜಿ ಸೇವಾಕೇಂದ್ರ, ಇ–ಪಾವತಿ, ಡಿಜಿಟಲ್ ಲೈಬ್ರರಿ, ಗಾಂಧಿ ಸಾಕ್ಷಿ ಕಾಯಕ ತಂತ್ರ ಮುಂತಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಕೆಲವೊಂದು ವಿಶಿಷ್ಟ ಸಾಧನೆಗಳಿಗೆ ಹಲವಾರು ಪ್ರಶಸ್ತಿಗಳನ್ನು ಸಹ ತನ್ನ ಮುಡಿಗೇರಿಸಿಕೊಳ್ಳುತ್ತಿರುವುದು ಜನಪ್ರತಿನಿಧಿಗಳು ಮತ್ತು ಇಲಾಖೆಯ ಎಲ್ಲಾ ಅಧಿಕಾರಿಗಳ ಪಟ್ಟ ಶ್ರಮಕ್ಕೆ ಸಂದ ಜಯವಾಗಿದ್ದು ರಾಜ್ಯದ ಗ್ರಾಮೀಣ ಜನತೆಯ ಘನತೆಯನ್ನು ಹೆಚ್ಚಿಸುತ್ತದೆ.

## ಬಯಲು ಬಹಿರ್ದೆಸೆ ಮುಕ್ತರಾಜ್ಯದ ಕನಸು :

ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ದಿನಾಚರಣೆಯನ್ನು 2019ರ ಅಕ್ಟೋಬರ್ 02ರಂದು ನಡೆಸಲು ಸರ್ಕಾರ ತೀರ್ಮಾನಿಸಿದ್ದು, ಈ ಮಹಾ ಸಂದರ್ಭಕ್ಕೂ ಮುಂಚೆ ಮಹಾತ್ಮರು ಕನಸು ಕಂಡ ಸ್ವಚ್ಛ–ಸುಂದರ ಗ್ರಾಮೀಣ ರಾಜ್ಯ ನಿರ್ಮಿಸುವ ಕನಸನ್ನು ನನಸಾಗಿಸಲು ಶ್ರಮಿಸಬೇಕಿದೆ.

ಈ ಪ್ರಮುಖ ಉದ್ದೇಶ ಈಡೇರಿಸಲು ಸ್ವಚ್ಛ ಭಾರತ ಅಭಿಯಾನವನ್ನು ಯಶಸ್ವಿ ಅನುಷ್ಠಾನ ಮಾಡಿ ಇಡೀ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಬಯಲು ಬಹಿರ್ದೆಸೆ ಮುಕ್ತವನ್ನಾಗಿಸಿದರೆ ಜನತೆಯು ಆರೋಗ್ಯ ಮಟ್ಟ ಸುಧಾರಿಸಿ ಸಮಾಜದ ಮುಖ್ಯವಾಹಿನಿಯಲ್ಲಿ ಬದುಕಲು ಸಾಧ್ಯವಾಗುತ್ತದೆ. ಈ ಮಹೋನ್ನತ ಕಾರ್ಯಸಾಧನೆಗೆ ದಿಟ್ಟ ಸಂಕಲ್ಪದೊಂದಿಗೆ ಸತತ ಪ್ರಯತ್ನ ಮಾಡಬೇಕಿದೆ.

ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ಸಂಧರ್ಭದಲ್ಲಿ ವಾಸ್ತವ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಪಾರದರ್ಶಕ ಹಾಗೂ ಜನರ ಸಹಭಾಗಿತ್ವದಲ್ಲಿ ಗ್ರಾಮೀಣ ಜನವಸತಿಗಳು, ರಸ್ತೆ, ಚರಂಡಿ, ಸೇತುವೆ ಮುಂತಾದ ಅಭಿವೃದ್ಧಿ ಕೆಲಸ ಕಾಮಗಾರಿಗಳು ಜನಾಭಿವೃದ್ಧಿಗೋಸ್ಕರ ಮಾಡಲು ಮೂರು ಹಂತದ ಜನಪ್ರತಿನಿಧಿಗಳು, ಅಧಿಕಾರಿಗಳು ಇಚ್ಚಾಶಕ್ತಿಯಿಂದ ನಿರಂತರ ಶ್ರಮ ವಹಿಸಿ ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಮಾತ್ರ ಈ ಕನಸು ನನಸಾಗಲು ಸಾಧ್ಯವಾಗುತ್ತದೆ.

ರಾಜ್ಯದ ಎಲ್ಲಾ ಗ್ರಾಮಗಳು ಸ್ವಾವಲಂಬಿ, ಸ್ವಾಭಿಮಾನಿ, ಸ್ವಚ್ಛ, ವೈಜ್ಞಾನಿಕ ದೃಷ್ಟಿಕೋನ ಉಳ್ಳಂತಹ ಗ್ರಾಮಗಳನ್ನಾಗಿ ಪರಿವರ್ತಿಸುವುದರೊಂದಿಗೆ ವ್ಯಾಜ್ಯಮುಕ್ತ, ತ್ಯಾಜ್ಯಮುಕ್ತ ಹಾಗೂ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿ ರೂಪಿಸುವ ಗುರಿಯನ್ನು ಹೊಂದಲಾಗಿದೆ.

ವಿವಿಧ ಯೋಜನೆಗಳ ಯಶಸ್ವಿ ಅನುಷ್ಟಾನಕ್ಕಾಗಿ ರಾಜ್ಯ ಮಟ್ಟದಲ್ಲಿ ಸಭೆ ಸಮ್ಮೇಳನಗಳು, ವಿಡಿಯೋ ಕಾನ್ಫೆರೆನ್ಸ್‌ಗಳು ಮತ್ತು ಸ್ಥಳೀಯವಾಗಿ ಪಂಚಾಯತ್ ರಾಜ್ ಸಂಸ್ಥೆಗಳ ಹಂತದಲ್ಲೂ ನಡೆಯುವ ಕಾರ್ಯಾಗಾರಗಳು ಮತ್ತು ತರಬೇತಿ ಶಿಬಿರಗಳು ಆರೋಗ್ಯಪೂರ್ಣವಾಗಿ ಚರ್ಚಿಸಿ ಹೆಚ್ಚಿನ ಮಾಹಿತಿಯನ್ನು ಪಡೆದು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಅತ್ಯಂತ ಕ್ರಿಯಾಶೀಲರಾಗಿ ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯುವ ಕೆಲಸ ನಮ್ಮೆಲ್ಲರ ಪ್ರಮುಖ ಕರ್ತವ್ಯವಾಗಿದೆ.

ಅದಷ್ಟೇ ಅಲ್ಲ. ಸರ್ಕಾರದ ಯೋಜನೆ ಪ್ರಯೋಜನಗಳು, ನೀತಿ ನಿಲುವುಗಳು, ಸರ್ಕಾರದ ಆದೇಶ/ಸುತ್ತೋಲೆಗಳು, ಪಂಚಾಯತ್ ರಾಜ್ ಸಂಸ್ಥೆಗಳ ಕುರಿತ ಸುಧಾರಣೆಗಳನ್ನು ಹಾಗೂ ಅಭಿವೃದ್ಧಿ ಪರ ಮಾಹಿತಿಗಳನ್ನು ಗ್ರಾಮೀಣ ಜನರ ಅರಿವು/ಜ್ಞಾನಕ್ಕಾಗಿ ನಿರಂತರವಾಗಿ ಸ್ಥಳೀಯ ಕನ್ನಡ ಭಾಷೆಯಲ್ಲಿ ಸರಳವಾಗಿ ನಿರೂಪಿಸುವ ಪ್ರಮುಖ ಕಾರ್ಯವನ್ನು ಸಹ ಇಲಾಖೆಯು ಗ್ರಾಮೀಣಾಭಿವೃದ್ಧಿಯ ಮುಖವಾಣಿಯಾದ ಕರ್ನಾಟಕ ವಿಕಾಸದಲ್ಲಿ ಪ್ರಕಟಿಸಿ ಮಾಹಿತಿಗಳನ್ನು ಕಾಲ ಕಾಲಕ್ಕೆ ನೀಡುತ್ತಾ ಬರುತ್ತಿದೆ ಇದನ್ನು ಎಲ್ಲರೂ ಸಹ ಸದುಪಯೋಗಪಡಿಸಿಕೊಳ್ಳಬೇಕಿದೆ

## ಮುಖ್ಯಮಂತ್ರಿಗಳ ಗ್ರಾಮವಿಕಾಸ ಯೋಜನೆ :

ಮುಖ್ಯಮಂತ್ರಿಗಳ ಗ್ರಾಮವಿಕಾಸ ಯೋಜನೆಯಡಿಯಲ್ಲಿ ಆಯ್ಕೆಯಾದಂತಹ ಪ್ರತಿ ಗ್ರಾಮಕ್ಕೆ ರೂ.1.00 ಕೋಟಿ ಅನುದಾನ ಮೀಸಲಿಡಲಾಗಿದೆ. ಈ ಗ್ರಾಮಕ್ಕೆ ಪೂರಕವಾಗಿ ಅವಶ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳು ಒದಗಿಸುವುದರೊಂದಿಗೆ, ಸಮಗ್ರ ಅಭಿವೃದ್ಧಿಗೊಳಿಸಬೇಕಾಗಿರುತ್ತದೆ. ಅದರ ಜೊತೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇತರೆ ಅಭಿವೃದ್ಧಿ ಯೋಜನೆಗಳ ಅನುದಾನದಲ್ಲಿ ಅನುಷ್ಠಾನಕ್ಕೆ ತರುತ್ತಿರುವ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಸಹ ಈ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅನುಷ್ಠಾನಕ್ಕೆ ತಂದು ಗ್ರಾಮಗಳನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಿದೆ.

ಮುಖ್ಯಮಂತ್ರಿಗಳ ಗ್ರಾಮವಿಕಾಸ ಯೋಜನೆಯಡಿಯಲ್ಲಿ ಹಿಂದೆ ವಿವಿಧ ಯೋಜನೆಗಳಡಿಯಲ್ಲಿ ಆಯ್ಕೆಯಾಗಿ ಈಗಾಗಲೇ ಅಭಿವೃದ್ಧಿ ಹೊಂದಿರುವ ಗ್ರಾಮಗಳ ಪಟ್ಟಿಯನ್ನು ಮತ್ತು ಅಭಿವೃದ್ಧಿಯಿಂದ ವಂಚಿತವಾಗಿರುವ ಗ್ರಾಮಗಳ ಪಟ್ಟಿಯನ್ನು ಮಾನ್ಯ ವಿಧಾನಸಭಾ ಸದಸ್ಯರಿಗೆ /ವಿಧಾನ ಪರಿಷತ್ ಸದಸ್ಯರಿಗೆ ನೀಡಿ ಅಭಿವೃದ್ಧಿಯಿಂದ ವಂಚಿತವಾಗಿರುವ ಗ್ರಾಮಗಳನ್ನು ಆಯ್ಕೆಮಾಡಲು ಸಹಕರಿಸಿ ಪ್ರಗತಿಯ ನಿಟ್ಟಿನಲ್ಲಿ ಇಲಾಖೆಯ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮಹತ್ತರ ಜವಾಬ್ದಾರಿಯು ನಮ್ಮ ಮೇಲಿದ್ದು, ಮುತುವರ್ಜಿಯಿಂದ ಎಲ್ಲಾ ಜನಪ್ರತಿನಿಧಿಗಳು, ಅಧಿಕಾರಿಗಳು ಸಾಕಾರಗೊಳಿಸುತ್ತೀರಾ ಎಂದು ಆಶಿಸುತ್ತೇನೆ.

(ಡಾ॥ ಎನ್. ನಾಗಾಂಬಿಕಾ ದೇವಿ)

ವರದಿ

# ಗ್ರಾಮಗಳ ರಸ್ತೆ ಅಭಿವೃದ್ಧಿಗೆ ರಾಜ್ಯಕ್ಕೆ ಸಂದ ರಾಷ್ಟ್ರೀಯ ಗೌರವ


ಕೆ.ರಾಧ

ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು
ಕರ್ನಾಟಕ ರಾಜ್ಯ ಗ್ರಾಮೀಣ ರಸ್ತೆ
ಅಭಿವೃದ್ಧಿ ನಿಗಮ, ಬೆಂಗಳೂರು.


ಒಂದು ರಾಷ್ಟ್ರ ಅಭಿವೃದ್ಧಿ ಆಗಿದೆ ಅಂದರೆ ಅಲ್ಲಿನ ರಸ್ತೆಗಳು ಪ್ರಮುಖ ಪಾತ್ರ ವಹಿಸುತ್ತವೆ. ನಮ್ಮ ರಾಜ್ಯದಲ್ಲಿ ರಸ್ತೆಗಳ ಅಭಿವೃದ್ಧಿಗಾಗಿಯೇ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯು ಅಸ್ತಿತ್ವದಲ್ಲಿದ್ದು ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಯಡಿಯಲ್ಲಿ ಹೆಚ್ಚು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿ ಯಶಸ್ವಿ ಅನುಷ್ಠಾನ ಮಾಡಿದ್ದಕ್ಕಾಗಿ ಕೇಂದ್ರ ಸರ್ಕಾರವು ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಿದೆ ಇದಕ್ಕೆಲ್ಲಾ ಕಾರಣ ಇಲಾಖೆಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಸಹಭಾಗಿತ್ವದ ಶ್ರಮಕ್ಕೆ ಸಂದ ಜಯವಾಗಿದೆ.

ಗ್ರಾಮೀಣ ಸಂಪರ್ಕ ರಹಿತ ಜನವಸತಿಗಳಿಗೆ (500 ಅಥವಾ ಹೆಚ್ಚಿನ ಜನಸಂಖ್ಯೆಯುಳ್ಳ ಜನವಸತಿ) ಮುಖ್ಯ ರಸ್ತೆಯಿಂದ ಸಂಪರ್ಕ ಕಲ್ಪಿಸಲು ಭಾರತ ಸರ್ಕಾರವು 2000 ರಿಂದ ತನ್ನ ಪೂರ್ಣ ಪ್ರಮಾಣದ ಅನುದಾನದಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಸರ್ವಋತು ರಸ್ತೆ ಸಂಪರ್ಕ ಹೊಂದಿರುವ ಅರ್ಹ ಜನವಸತಿಗಳಿರುವ ಜಿಲ್ಲೆಗಳಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ.

ಈ ಯೋಜನೆಯಡಿ ನಮ್ಮ ರಾಜ್ಯದಲ್ಲಿ 2000–01 ರಿಂದ 2017–18ನೇ ಸಾಲಿನ ವರೆಗೆ 18601.02 ಕಿ.ಮೀ ಉದ್ದದ ರಸ್ತೆ/ಸೇತುವೆ ಕಾಮಗಾರಿಗಳನ್ನು ರೂ. 4381.90 ಕೋಟಿಗಳ ಮೊತ್ತಕ್ಕೆ ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದು, ಇದುವರೆವಿಗೂ ರೂ.4714.94ಕೋಟಿಗಳ ವೆಚ್ಚದಲ್ಲಿ 18540.30ಕಿ.ಮೀ ಉದ್ದದ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

**ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೈಗೊಂಡು 5 ವರ್ಷಗಳ ವಾರ್ಷಿಕ ನಿರ್ವಹಣೆ ಪೂರ್ಣಗೊಂಡಿರುವ ರಸ್ತೆಗಳಿಗೆ ನಿಯತ ಕಾಲಿಕ ನಿರ್ವಹಣೆಗಾಗಿ ಅದಕ್ಕನುಗುಣವಾಗಿ ರಾಜ್ಯ ಸರ್ಕಾರದಿಂದ ರಾಜ್ಯದ ಪಾಲಿನ ಮೊತ್ತ ರೂ.47.97ಕೋಟಿ ಅನುದಾನದಂತೆ ಒಟ್ಟಾರೆಯಾಗಿ ರೂ.119.92ಕೋಟಿಗಳ ಆರ್ಥಿಕ ಪ್ರೋತ್ಸಾಹಧನವನ್ನು ನೀಡಲಾಗಿರುತ್ತದೆ.**






ಈ ಯೋಜನೆಯಡಿ ರಾಜ್ಯದ ವಿವಿದ ಜಿಲ್ಲೆಗಳಲ್ಲಿ 17 ಬಗೆಯ ನೂತನ ತಂತ್ರಜ್ಞಾನಗಳನ್ನು (INNOVATIVE TECHNOLOGY) 528.78ಕಿ.ಮೀ ಉದ್ದ ರಸ್ತೆ ಕಾಮಗಾರಿಗಳಿಗೆ ಅಳವಡಿಸಲಾಗಿದೆ.

ಕರ್ನಾಟಕ ರಾಜ್ಯವು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಗ್ರಾಮೀಣ ರಸ್ತೆಗಳನ್ನು ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು 2016–17ನೇ ಸಾಲಿನಲ್ಲಿ ನಿಗಧಿಪಡಿಸಿದ್ದ 800 ಕಿ.ಮೀ.ಗಿಂತ 921.92ಕಿ.ಮೀ. ರಸ್ತೆಯನ್ನು ಅಭಿವೃದ್ದಿಪಡಿಸಿದ ಹಿನ್ನಲೆಯಲ್ಲಿ ಹಾಗೂ ಕೇಂದ್ರ ಸರ್ಕಾರವು ಸೂಚಿಸಿದಂತೆ ಕೆ.ಆರ್.ಆರ್.ಡಿ.ಎ. ತಾಂತ್ರಿಕ ಮತ್ತು ಲೆಕ್ಕ ಪತ್ರಶಾಖೆಯ ಅಧಿಕಾರಿ ಸಿಬ್ಬಂದಿಗಳಿಗೆ ಹೆಚ್ಚಿನ ವೈಜ್ಞಾನಿಕ ಜ್ಞಾನವನ್ನು ಮೂಡಿಸಲು ತರಬೇತಿ/ ತಾಂತ್ರಿಕ ನೈಪುಣ್ಯ ಕಾರ್ಯಾಗಾರಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಿರುವುದನ್ನು ಶ್ಲಾಘಿಸಿ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರವು ಹೆಚ್ಚುವರಿಯಾಗಿ ರೂ.71.95ಕೋಟಿ ಪ್ರೋತ್ಸಾಹಕ ಅನುದಾನವನ್ನು ನೀಡಿರುತ್ತದೆ.

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೈಗೊಂಡು 5 ವರ್ಷಗಳ ವಾರ್ಷಿಕ ನಿರ್ವಹಣೆ ಪೂರ್ಣಗೊಂಡಿರುವ ರಸ್ತೆಗಳಿಗೆ ನಿಯತ ಕಾಲಿಕ ನಿರ್ವಹಣೆಗಾಗಿ (Periodic Maintenance) ಅದಕ್ಕನುಗುಣವಾಗಿ ರಾಜ್ಯ ಸರ್ಕಾರದಿಂದ ರಾಜ್ಯದ ಪಾಲಿನ ಮೊತ್ತ ರೂ.47.97ಕೋಟಿ ಅನುದಾನದಂತೆ ಒಟ್ಟಾರೆಯಾಗಿ ರೂ.119.92ಕೋಟಿಗಳ ಆರ್ಥಿಕ ಪ್ರೋತ್ಸಾಹಧನವನ್ನು (Financial Incentive) ನೀಡಲಾಗಿರುತ್ತದೆ. ಈ ಅನುದಾನವನ್ನು ರಸ್ತೆಗಳ ನಿಯತಕಾಲಿಕ ನಿರ್ವಹಣೆ (Periodic Maintenance) ಮಾಡಲು ಬಿಡುಗಡೆಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯವನ್ನು Outstanding Performing state in PMGSY I and II for the year 2016–17 ಎಂದು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆಮಾಡಿದ್ದಾರೆ. ಈ ರಾಷ್ಟ್ರ ಪ್ರಶಸ್ತಿಯ ಸಮಾರಂಭವನ್ನು ದಿನಾಂಕ: 19.06.2017 ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದು ಇಲಾಖೆಯ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೈಗೊಂಡ ಅಪರಿಮಿತ ಸಾಧನೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರದ ರಾಷ್ಟ್ರ ಪ್ರಶಸ್ತಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಎನ್. ನಾಗಾಂಬಿಕಾದೇವಿ, ಇಲಾಖೆಯ ಸುವರ್ಣ ಗ್ರಾಮೋದಯ ಯೋಜನೆ ನಿರ್ದೇಶಕರಾದ ಡಾ.ಬೂವನಹಳ್ಳಿ ನಾಗರಾಜು, ಕರ್ನಾಟಕ ರಾಜ್ಯ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಗಮದ ಮುಖ್ಯ ಕಾರ್ಯಾಚರಣೆ ಅಧಿಕಾರಿಗಳಾದ ಶ್ರೀ ಬಿಸೇಗೌಡ, ರಾಜ್ಯ ಗುಣನಿಯಂತ್ರಣ ಸಮನ್ವಯಕಾರರಾದ ಶ್ರೀ ಕೃಷ್ಣಮೂರ್ತಿ, ಆರ್ಥಿಕ ನಿಯಂತ್ರಕರಾದ ಶ್ರೀಮತಿ ರೂಪಶ್ರೀ ಬಿ.ವಿ, ಮಾಹಿತಿ ತಂತ್ರಜ್ಞಾನ ಅಧಿಕಾರಿಗಳಾದ ಶ್ರೀಮತಿ ಕೆ.ರಾಧ ಮತ್ತು ಶ್ರೀ ವಿದ್ಯಾಶಂಕರ್ ರವರು ಈ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿದರು. ■

ವರದಿ




ಶ್ರೀಮತಿ ಸುನಂದಾ

ಸಹಾಯಕ ವ್ಯವಸ್ಥಾಪಕರು
(ಜೀವನೋಪಾಯ)
ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್,
ಬೆಂಗಳೂರು



**ಪ್ರಾರಂಭದ ಅವಧಿಯಿಂದ ಈ ವರೆಗೆ ಈ ಯೋಜನೆಯ ಮೂಲಕ ರಾಜ್ಯದಲ್ಲಿ 2,21,385 ಗ್ರಾಮೀಣ ಯುವಜನರಿಗೆ ಸ್ವ ಉದ್ದಿಮೆ ಕುರಿತು ತರಬೇತಿ ನೀಡಲಾಗಿದ್ದು, ಅದರಲ್ಲಿ 1,38,852 ಮಹಿಳಾ ಅಭ್ಯರ್ಥಿಗಳಿಗೆ (ಶೇ 62ಕ್ಕೂ ಅಧಿಕ) 1,43,906 ಬಿಪಿಎಲ್ ಕುಟುಂಬದ ಅಭ್ಯರ್ಥಿಗಳಿಗೆ (ಶೇ 65ರಷ್ಟು) ತರಬೇತಿಯನ್ನು ನೀಡಲಾಗಿರುತ್ತದೆ.**


# ಗ್ರಾಮೀಣ ಸ್ವ ಉದ್ಯೋಗದಲ್ಲಿ ಕರ್ನಾಟಕದ ಹ್ಯಾಟ್ರಿಕ್ ಸಾಧನೆ

ಗ್ರಾಮೀಣಾಭಿವೃದ್ಧಿ ರಂಗದಲ್ಲಿ ರೂಡ್‌ಸೆಟಿ ಮತ್ತು ಆರ್‌ಸೆಟಿ ಸಂಸ್ಥೆಗಳ ಅನುಷ್ಠಾನವು ಒಂದು ಪ್ರಮುಖವಾದ ಮೈಲುಗಲ್ಲಾಗಿದ್ದು ಇದರ ಪ್ರಾರಂಭವನ್ನು ಕರ್ನಾಟಕ ರಾಜ್ಯ 1998ನೇ ಇಸವಿಯಲ್ಲಿ ಪ್ರಾರಂಭಿಸಲಾಯಿತು. ಗ್ರಾಮೀಣ ಯುವಜನರಿಗೆ ಸ್ವ ಉದ್ಯೋಗ ಕುರಿತು ತರಬೇತಿಯನ್ನು ನೀಡುವ ಉದ್ದೇಶದಿಂದ ಪ್ರಾರಂಭವಾದ ಈ ಕಾರ್ಯಕ್ರಮವು, ಉದ್ದೇಶಿತ ಫಲದ ಸಾಧನೆಗಾಗಿ ಶ್ರಮವಹಿಸಿ ಗುರಿಗಿಂತಲೂ ಅಧಿಕ ಪ್ರಗತಿಯನ್ನು ಸಾಧಿಸುವುದರೊಂದಿಗೆ, ಸ್ವ–ಉದ್ದಿಮೆ ರಂಗದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ.

ಇದರಿಂದ ಗ್ರಾಮೀಣಾಭಿವೃದ್ಧಿ ಇಲಾಖೆಯ ತರಬೇತಿಗಳು ಸೇರಿದಂತೆ ಇತರೆ ಇಲಾಖೆಗಳ ತರಭೇತಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿದೆ. ಇದರಿಂದಾಗಿ ಹೆಚ್ಚು–ಹೆಚ್ಚು ಗ್ರಾಮೀಣ ಯುವಜನರು ಸ್ವ ಉದ್ಯೋಗ ಕೈಗೊಳ್ಳಲು ಸಾಧ್ಯವಾಗುತ್ತಿದೆ. ಪ್ರಾರಂಭದ ಅವಧಿಯಿಂದ ಈ ವರೆಗೆ ಈ ಯೋಜನೆಯ ಮೂಲಕ ರಾಜ್ಯದಲ್ಲಿ 2,21,385 ಗ್ರಾಮೀಣ ಯುವಜನರಿಗೆ ಸ್ವ ಉದ್ದಿಮೆ ಕುರಿತು ತರಬೇತಿ ನೀಡಲಾಗಿದ್ದು, ಅದರಲ್ಲಿ 1,38,852 ಮಹಿಳಾ ಅಭ್ಯರ್ಥಿಗಳಿಗೆ (ಶೇ 62ಕ್ಕೂ ಅಧಿಕ) 1,43,906 ಬಿಪಿಎಲ್ ಕುಟುಂಬದ ಅಭ್ಯರ್ಥಿಗಳಿಗೆ (ಶೇ 65ರಷ್ಟು) ತರಬೇತಿಯನ್ನು ನೀಡಲಾಗಿರುತ್ತದೆ.




ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ದಿನಾಂಕ 15.07.2015ರಂದು ಕರ್ನಾಟಕ ರಾಜ್ಯವು ಆರ್ಥಿಕ ವರ್ಷ 2013–14ರಲ್ಲಿ ಆರ್‌ಸೆಟಿ ಕಾರ್ಯಕ್ರಮದಲ್ಲಿ ಕೈಗೊಂಡ ಉತ್ತಮ ಸಾಧನೆಗಾಗಿ "ಉತ್ತಮ ರಾಜ್ಯ ಪ್ರಶಸ್ತಿ"ಯನ್ನು ಪ್ರಧಾನ ಮಾಡಿತು. ಅದೇ ರೀತಿ ಆರ್ಥಿಕ ವರ್ಷ 2014–15 ಮತ್ತು 2015–16ನೇ ಸಾಲಿನಲ್ಲಿ ಸಾಧಿಸಲಾದ ಅದ್ವಿತೀಯ ಸಾಧನೆಗಾಗಿ ಕೇಂದ್ರ ಗ್ರಾಮೀಣಾಬಿವೃದ್ಧಿ ಸಚಿವಾಲಯವು 19.06.2017ರಂದು ನವದೆಹಲಿಯ 'ವಿಜ್ಞಾನ ಭವನ'ದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ "ಪ್ರಥಮ ಸ್ಥಾನ"ವನ್ನು ಪಡೆದಿರುತ್ತದೆ.




| ಆರ್‌ಸೆಟಿ ಕಾರ್ಯಕ್ರಮದ ಪ್ರಗತಿ ವಿವರ | | | | | | |
|---|---|---|---|---|---|---|
| ಆರ್ಥಿಕ ವರ್ಷ | 2014-15 | | | 2015-16 | | |
| | ಗುರಿ | ಪ್ರಗತಿ | ಶೇ. | ಗುರಿ | ಪ್ರಗತಿ | ಶೇ. |
| ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ | 29055 | 31685 | 109 | 26120 | 36346 | 139 |
| ಬಿಪಿಎಲ್ ಅಭ್ಯರ್ಥಿಗಳ ಸಂಖ್ಯೆ | 7143 | 24561 | 344 | 17050 | 29848 | 175 |
| ಮಹಿಳಾ ಅಭ್ಯರ್ಥಿಗಳ ಸಂಖ್ಯೆ | 11622 | 15246 | 131 | 10448 | 16865 | 161 |
| ಪ.ಜಾ ಅಭ್ಯರ್ಥಿಗಳ ಸಂಖ್ಯೆ | 6392 | 7456 | 117 | 7575 | 9591 | 127 |
| ಪ.ಪಂ ಅಭ್ಯರ್ಥಿಗಳ ಸಂಖ್ಯೆ | 3486 | 2372 | 68 | 5485 | 2865 | 52 |
| ಅಲ್ಪಸಂಖ್ಯಾತರ ಅಭ್ಯರ್ಥಿಗಳ ಸಂಖ್ಯೆ | 4358 | 2640 | 61 | 3918 | 2901 | 74 |
| ಸ್ವ ಉದ್ಯೋಗ ಕೈಗೊಂಡ ಅಭ್ಯರ್ಥಿಗಳ ಸಂಖ್ಯೆ (Candidates settled) | 17433 | 20217 | 116 | 15672 | 22076 | 141 |
| ವೇತನ ಆಧಾರಿತ ಉದ್ಯೋಗ ಕೈಗೊಂಡ ಅಭ್ಯರ್ಥಿಗಳ ಸಂಖ್ಯೆ | - | 2034 | | - | 1413 | |

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ರಚನೆಯಾದ ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು 2016–17ನೇ ಸಾಲಿನಲ್ಲಿ ಗ್ರಾಮೀಣ ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಾಲ ಸಂಪರ್ಕ ಕುರಿತು ಸಾಧಿಸಿದ ಪ್ರಗತಿಗಾಗಿ "ಪ್ರಥಮ ಸ್ಥಾನ"ವನ್ನು ಪಡೆದಿರುತ್ತದೆ.

ಲೇಖನ




ಮಲ್ಲಿಕಾರ್ಜುನ ಪಿ.ಎಸ್

ಐಇಸಿ ಸಮಾಲೋಚಕರು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಮೊ : 8277299042


# ಮಿಷನ್ ಅಂತ್ಯೋದಯ ಯೋಜನೆ

## (Poverty Free Grama Panchayath- PFGP)

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಹತ್ವಾಕಾಂಕ್ಷಿ ಕಾರ್ಯಕ್ರಮವಾದ ಮಿಷನ್ ಅಂತ್ಯೋದಯವು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದ ಪ್ರಮುಖ ಯೋಜನೆಯಾಗಿದೆ. 02 ಅಕ್ಟೋಬರ್ 2019ಕ್ಕೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ದಿನಾಚರಣೆಯ ಪ್ರಯುಕ್ತ ರಾಷ್ಟ್ರದ ಒಂದು ಕೋಟಿ ಬಡ ಕುಟುಂಬಗಳು ಮತ್ತು 50,000 ಗ್ರಾಮ ಪಂಚಾಯಿತಿಗಳನ್ನು ಬಡತನ ಮುಕ್ತವಾಗಿಸುವ ಪ್ರಮುಖ ಉದ್ದೇಶ ಹೊಂದಿದೆ.

**ಹಿನ್ನೆಲೆ:** ಗ್ರಾಮೀಣ ಭಾಗದ ರೈತರು, ಗ್ರಾಮೀಣರು, ಬಡವರು, ದುರ್ಬಲರನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಕೃಷಿ, ಹೈನುಗಾರಿಕೆ, ಪಶು ಸಂಗೋಪನೆ, ಮೀನುಗಾರಿಕೆ, ಜಲಾನಯನ ಅಭಿವೃದ್ಧಿ ಮಾಡುವುದರೊಂದಿಗೆ ಹಿಂದುಳಿದ ವರ್ಗದವರ ಅಭಿವೃದ್ಧಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಪನ್ಮೂಲಗಳನ್ನು ಸಮರ್ಪಕ ಸದ್ಬಳಕೆ ಮಾಡಿಕೊಂಡು ವಾರ್ಷಿಕ ಆದಾಯ ವೃದ್ಧಿಸುವ ಗುರಿ ಹೊಂದಲಾಗಿದೆ.


**ಉದ್ದೇಶ:** 2ನೇ ಅಕ್ಟೋಬರ್ 2019ರ ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ದಿನಾಚರಣೆಯ ಸಂಧರ್ಭಕ್ಕೆ ರಾಷ್ಟ್ರಾದ್ಯಂತ 50,000 ಗ್ರಾಮ ಪಂಚಾಯಿತಿಗಳನ್ನು ಬಡತನ ಮುಕ್ತ ಗ್ರಾಮ ಪಂಚಾಯತಿಗಳನ್ನಾಗಿ ಪರಿವರ್ತಿಸುವುದು.

**ಅನುದಾನ:** ಈ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಅಭಿವೃದ್ಧಿ ಯೋಜನೆಗಳನ್ನು ಒಗ್ಗೂಡಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.

**ರಾಜ್ಯದಲ್ಲಿ ಆಯ್ಕೆ ಮಾಡಬೇಕಾದ ಗ್ರಾಮ ಪಂಚಾಯಿತಿಗಳ ಸಂಖ್ಯೆ : 1126**

ಬಡತನ ಮುಕ್ತ ಗ್ರಾಮ ಪಂಚಾಯಿತಿ ಕಲ್ಪನೆ ಎಂದರೆ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಮಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಒದಗಿಸುವುದರೊಂದಿಗೆ ಗ್ರಾಮೀಣ ಬಡಜನತೆಯ ಸರ್ವತೋಮುಖ ಬೆಳವಣಿಗೆಗೆ ಕ್ರಮ ಕೈಗೊಳ್ಳುವುದು

**2ನೇ ಅಕ್ಟೋಬರ್ 2019ರ ಮಹಾತ್ಮ ಗಾಂಧೀಜಿಯವರ 150ನೇ ಜನ್ಮ ದಿನಾಚರಣೆಯ ಸಂಧರ್ಭಕ್ಕೆ ರಾಷ್ಟ್ರಾದ್ಯಂತ 50,000 ಗ್ರಾಮ ಪಂಚಾಯಿತಿಗಳನ್ನು ಬಡತನ ಮುಕ್ತ ಗ್ರಾಮ ಪಂಚಾಯತಿಗಳನ್ನಾಗಿ ಪರಿವರ್ತಿಸುವುದು.**



## ಕೆಲವು ಪ್ರಮುಖ ಅಂಶಗಳು:

1. ವೃದ್ಧಾಪ್ಯದವರು, ವಿಧವೆಯರು ಮತ್ತು ಅಂಗವಿಕಲರಿಗೆ ಸಾಮಾಜಿಕ ಭದ್ರತಾ ಯೋಜನೆಗಳು
2. ಉತ್ತಮ ರಸ್ತೆ ಸಾರಿಗೆ ವ್ಯವಸ್ಥೆ, ಅಂತರ್ಜಾಲ, ಆಧಾರ್ ಮತ್ತು ಮಾಹಿತಿ ತಂತ್ರಜ್ಞಾನ
3. ವಿದ್ಯುತ್, ವಸತಿ, ಬಯಲು ಬಹಿರ್ದೆಸೆ ಮುಕ್ತತೆ ಮತ್ತು ತ್ಯಾಜ್ಯ ಸಂಸ್ಕರಣೆ
4. ಆರೋಗ್ಯ ಮತ್ತು ಪೌಷ್ಟಿಕತೆ
5. ಜಲ ಸಂರಕ್ಷಣೆ
6. ಬ್ಯಾಂಕಿಂಗ್/ಆರ್ಥಿಕ ಸೇರ್ಪಡೆ
7. ಶಿಕ್ಷಣ & ಕೌಶಲ್ಯಾಭಿವೃದ್ಧಿ
8. ಮಹಿಳಾ ಸ್ವಸಹಾಯ ಗುಂಪುಗಳು ಆರ್ಥಿಕ ಸಬಲೀಕರಣ
9. ದುರ್ಬಲ ವರ್ಗದವರ ಸಬಲೀಕರಣ
10. ಕೃಷಿಯೇತರ ಮತ್ತು ವಿವಿಧ ಜೀವನೋಪಾಯಗಳು
11. ಕ್ರೀಡ, ಸಾಂಸ್ಕೃತಿಕ ಮತ್ತು ಸಂಘ ಸಂಸ್ಥೆಗಳು

## ಈ ಯೋಜನೆಗೆ ಗ್ರಾಮಗಳ ಆಯ್ಕೆಗೆ ನೀಡುವ ಪ್ರಾಧಾನ್ಯತೆ

- ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯಿತಿ
- ಬಡ ಮಹಿಳೆಯರನ್ನು ಹೊಂದಿದ ಎಲ್ಲಾ ಸ್ವಸಹಾಯ ಗುಂಪುಗಳನ್ನು DAY-NRLM ಅಭಿಯಾನದಡಿಯಲ್ಲಿ ಒಕ್ಕೂಟಗೊಳಪಡಿಸಿದ ಗ್ರಾಮ ಪಂಚಾಯಿತಿ
- ಸಂಸದ ಆದರ್ಶ ಗ್ರಾಮ ಯೋಜನೆಗೊಳಪಡಿಸಿದ ಗ್ರಾಮ ಪಂಚಾಯಿತಿ
- ಅಪರಾಧ/ ವ್ಯಾಜ್ಯ ಮುಕ್ತ ಗ್ರಾಮ ಪಂಚಾಯಿತಿ
- ವಿಶೇಷ ಘಟಕ ಯೋಜನೆಯಲ್ಲಿ ಆಯ್ಕೆಯಾದ ಗ್ರಾಮ ಪಂಚಾಯಿತಿ
- ವಿಶೇಷ ಸಾಧನೆ/ಪ್ರಶಸ್ತಿ ಸ್ವೀಕರಿಸಿದ ಗ್ರಾಮ ಪಂಚಾಯಿತಿ

ಈ ಅಂಶಗಳೊಂದಿಗೆ ಕೆಲವೊಂದು ಪ್ರಮುಖ ಮಾನದಂಡಗಳ ಆಧಾರದ ಮೇಲೆ ಕೂಡ ಗ್ರಾಮ ಪಂಚಾಯಿತಿಗಳನ್ನು ಆಯ್ಕೆಮಾಡಲಾಗುತ್ತದೆ.

## ಮಾನದಂಡಗಳು

(ಪ್ರಗತಿ)

ಆರೋಗ್ಯ ಮತ್ತು ಪೌಷ್ಟಿಕತೆ — 15%

ಗ್ರಾಮ ಸ್ವಚ್ಛತೆ ಮತ್ತು ಶೌಚಾಲಯ — 15%

ಸಾಮಾಜಿಕ ಭದ್ರತೆ — 10%

ಕೃಷಿ ಮತ್ತು ಜೀವನೋಪಾಯ — 20%

ಶಿಕ್ಷಣ ಮತ್ತು ಕೌಶಲ್ಯ — 20%

ಗ್ರಾಮ/ಪಂಚಾಯಿತಿಯ ಮೂಲ ಸೌಕರ್ಯಗಳು — 10%

ಹಣಕಾಸು ಸೇರ್ಪಡೆ — 10%

ಶಿಕ್ಷಣ ಮತ್ತು ಕೌಶಲ್ಯ — 20%

ಮಾರ್ಗಸೂಚಿಯಲ್ಲಿಯಲ್ಲಿರುವಂತೆ ರಾಜ್ಯಮಟ್ಟದ ಅನುಷ್ಠಾನಾಧಿಕಾರಿಯಾಗಿ ಸಂಸದ್ ಆದರ್ಶ ಗ್ರಾಮ ಯೋಜನೆಯ ರಾಜ್ಯಮಟ್ಟದ ನೋಡಲ್ ಅಧಿಕಾರಿಯವರನ್ನೇ ಸದರಿ ಯೋಜನೆಗೆ ಪ್ರಸ್ತಾಪಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಹಾಗೂ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಅನುಷ್ಠಾನಾಧಿಕಾರಿಗಳನ್ನಾಗಿಸುವುದು.

ಈ ಯೋಜನೆಯು ಆರಂಭಿಕ ಹಂತವಾದ ಸಮೀಕ್ಷೆ ನಡೆಸಿ ಗ್ರಾಮ ಪಂಚಾಯಿತಿ ಆಯ್ಕೆಯ ಹಂತದಲ್ಲಿದ್ದು ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಅಧಿಕಾರಿಗಳ ಇಚ್ಛಾಶಕ್ತಿಯೊಂದಿಗೆ ಜನಪ್ರತಿನಿಧಿಗಳು, ಗ್ರಾಮಸ್ಥರ ಸಹಕಾರವೂ ಕೂಡ ಅವಶ್ಯವಾಗಿದೆ. ■



ಲೇಖನ




ಡಾ.ಟಿ.ವಿ. ಮೋಹನ್‌ದಾಸ್

ಭಾ.ಅ.ಸೇ

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಬೆಂಗಳೂರು. 560064


**ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ರಾಜ್ಯದ ಅನೇಕ ಗ್ರಾಮ ಪಂಚಾಯಿತಿಗಳಿಗೆ ವಿದ್ಯುತ್ ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ಸಲಹೆಯನ್ನು ನೀಡುವ ಒಂದು ಸಂಸ್ಥೆಯಾಗಿದ್ದು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ವಿದ್ಯುತ್ ಸ್ವಾವಲಂಬಿ ಆಗಬೇಕೆನ್ನುವುದೇ ಸಂಸ್ಥೆಯ ಕನಸು.**

# ವಿದ್ಯುತ್ ಸ್ವಾವಲಂಬನೆಯತ್ತ ಹೆಮ್ಮನಹಳ್ಳಿ ಗ್ರಾಮ ಪಂಚಾಯಿತಿ

ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು (ಎಂ.ಜಿ.ಐ.ಆರ್.ಇ.ಡಿ) 2000ರಲ್ಲಿ ಕೇಂದ್ರ ಸರ್ಕಾರದ ನವ್ಯ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ಮತ್ತು ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಹಕಾರದೊಂದಿಗೆ ಆರಂಭಿಸಲಾಯಿತು.

ಈ ಸಂಸ್ಥೆ ಬೆಂಗಳೂರಿನ ಜಕ್ಕೂರು ಸಮೀಪದ ಶ್ರೀರಾಂಪುರ ಕ್ರಾಸ್‌ನಲ್ಲಿದೆ. ಆದರೆ ಇದರ ಕಾರ್ಯವ್ಯಾಪ್ತಿ ರಾಜ್ಯದ ಮೂಲೆ ಮೂಲೆಗಳಿಗೆ ವ್ಯಾಪಿಸಿದೆ. ಗ್ರಾಮೀಣ ಪ್ರದೇಶದ ಜನರಿಗೆ ಈ ಸಂಸ್ಥೆಯು ಹಲವು ರೀತಿಯಲ್ಲಿ ಪರ್ಯಾಯ ಇಂಧನ ಬಳಕೆಗೆ ನೆರವಾಗಿದೆ. ಬಡವರ ಕುಟುಂಬದಲ್ಲಿ ಬೆಳಕು ಮೂಡಿಸಿದ ಕೀರ್ತಿ ಇದಕ್ಕಿದೆ.

ಮಹಾತ್ಮಗಾಂಧಿ ಗ್ರಾಮೀಣ ಇಂಧನ ಅಭಿವೃದ್ಧಿ ಸಂಸ್ಥೆ ಹೆಸರೇ ಸೂಚಿಸುವಂತೆ ಇದು ಗ್ರಾಮೀಣ ಪ್ರದೇಶದಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳ ಬಗ್ಗೆ ಅರಿವು ಮೂಡಿಸುವುದಲ್ಲದೆ ಪರ್ಯಾಯ ಶಕ್ತಿ ಸಂಪನ್ಮೂಲಗಳ ಬಳಕೆ ಬಗ್ಗೆ ಜಾಗೃತಿ ಮೂಡಿಸುತ್ತಿದೆ.

## ಪ್ರಮುಖ ಚಟುವಟಿಕೆಗಳು

### ತರಬೇತಿ

- ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಅಧಿಕಾರಿ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಒಂದು ದಿನದ, ಎರಡು ದಿನಗಳ ಮತ್ತು ಮೂರು ದಿನಗಳ ವಸತಿಯುತ ತರಬೇತಿಯನ್ನು ಕೈಗೊಳ್ಳುವುದು.
- ಕರ್ನಾಟಕ ರಾಜ್ಯವಲ್ಲದೇ ದಕ್ಷಿಣ ಭಾರತದ ರಾಜ್ಯಗಳ ಅಧಿಕಾರಿಗಳಿಗೆ ತರಬೇತಿಯನ್ನು ನೀಡುವುದು.
- ಶಾಲಾ / ಕಾಲೇಜು ಮಕ್ಕಳಿಗೆ ಅರಿವು ಮೂಡಿಸುವ ತರಬೇತಿಯನ್ನು ಕೈಗೊಳ್ಳುವುದು.
- ಶಾಲಾ ಕಾಲೇಜುಗಳಲ್ಲಿ ಎನರ್ಜಿ ಕ್ಲಬ್‌ಗಳನ್ನು ಸ್ಥಾಪಿಸುವುದು.
- ಐ.ಟಿ.ಐ. ಮತ್ತು ಡಿಪ್ಲಮೋ ವಿದ್ಯಾರ್ಥಿಗಳಿಗೆ ಸೌರ ವಿದ್ಯುತ್ ದುರಸ್ತಿ ಮತ್ತು ನಿರ್ವಹಣೆಯ ಬಗ್ಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡುವುದು.



## ಸಿ.ಎಸ್.ಆರ್. ಅನುದಾನದಡಿಯಲ್ಲಿ ಸಮುದಾಯ ಅಭಿವೃದ್ಧಿ ಯೋಜನೆ

1. ವಿದ್ಯುತ್ ಜಾಲ ಇಲ್ಲದ ಗ್ರಾಮೀಣ ಪ್ರದೇಶಗಳಿಗೆ ನವೀಕರಣ ಇಂಧನ ಮೂಲಗಳಿಂದ ವಿದ್ಯುತ್ ಒದಗಿಸುವ ಯೋಜನೆ
2. ಗ್ರಾಮೀಣ ಮಹಿಳೆಯರಿಗಾಗಿ ಸುಧಾರಿತ ಒಲೆಗಳ ನಿರ್ಮಾಣ

## ಸಲಹಾ ಸೇವೆ (ಕನ್ಸಲ್ಟೆನ್ಸಿ)

ಮಹಾತ್ಮಗಾಂಧಿ ಗ್ರಾಮೀಣ ಇಂಧನ ಅಭಿವೃದ್ಧಿ ಸಂಸ್ಥೆಯು ತರಬೇತಿಗಳ ಜೊತೆ ಜೊತೆಗೆ ನವೀಕರಣ ಇಂಧನ ತಾಂತ್ರಿಕತೆಯ ಬಗ್ಗೆ ಸಲಹೆ ಮತ್ತು ಸೇವೆಯನ್ನು ನೀಡುವ ಸಂಸ್ಥೆಯಾಗಿಯೂ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆಯು ಈಗಾಗಲೇ 20 ಕಿ.ವ್ಯಾ. ಸಾಮರ್ಥ್ಯದ ಸೋಲಾರ್ ಘಟಕವನ್ನು ಸ್ಥಾಪಿಸಿ ಗ್ರಿಡ್‌ಗೆ ಸಂಪರ್ಕ ಕಲ್ಪಿಸಲಾಗಿದೆ. 2.25 ಮತ್ತು 5 ಕಿ.ವ್ಯಾ. ಸಾಮರ್ಥ್ಯದ ಆಫ್–ಗ್ರಿಡ್ ಮತ್ತು 1.2 ಕಿ.ವ್ಯಾ. ವಿಂಡ್ ಮತ್ತು ಪಿ.ವಿ. ಹೈಬ್ರಿಡ್ ಘಟಕವನ್ನು ಅಳವಡಿಸಲಾಗಿದೆ. ಇದರಿಂದ ಸಂಸ್ಥೆಯ ಆಡಳಿತ ಕಚೇರಿಯ ಶೇಕಡ 95 ರಷ್ಟು ವಿದ್ಯುತ್‌ನ್ನು ಸೋಲಾರ್ ಘಟಕಗಳಿಂದ ಉಪಯೋಗಿಸಲಾಗುತ್ತಿದೆ. ಅಲ್ಲದೇ ಸಂಸ್ಥೆಗೆ ರೂ. 15000/– ದಿಂದ ರೂ. 18000/– ವರೆಗೆ ಬೆಸ್ಕಂನಿಂದ ಆದಾಯ ಬರುತ್ತಿದೆ.

## ವಿದ್ಯುತ್ ಸ್ವಾವಲಂಬನೆಯತ್ತ ಹೆಮ್ಮನಹಳ್ಳಿ ಗ್ರಾಮ ಪಂಚಾಯಿತಿ



ಮಹಾತ್ಮಗಾಂಧಿ ಗ್ರಾಮೀಣ ಇಂಧನ ಅಭಿವೃದ್ಧಿ ಸಂಸ್ಥೆಯು ತರಬೇತಿಗಳ ಜೊತೆ ಜೊತೆಗೆ ನವೀಕರಣ ಇಂಧನ ತಾಂತ್ರಿಕತೆಯ ಬಗ್ಗೆ ಸಲಹೆ ಮತ್ತು ಸೇವೆಯನ್ನು ನೀಡುವ ಸಂಸ್ಥೆಯಾಗಿಯೂ ಸಹ ಕೆಲಸ ನಿರ್ವಹಿಸುತ್ತಿದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಮಂಡ್ಯ ಜಿಲ್ಲೆಯ, ಮದ್ದೂರು ತಾಲ್ಲೂಕಿನ, ಆತಗೂರು ಹೋಬಳಿ ವ್ಯಾಪ್ತಿಗೆ ಬರುವ ಹೆಮ್ಮನಹಳ್ಳಿ ಗ್ರಾಮ ಪಂಚಾಯಿತಿ 6201 ಜನಸಂಖ್ಯೆಯನ್ನು ಹೊಂದಿದ್ದು, 5 ವಾರ್ಡ್‌ಗಳಿವೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ 5 ಗ್ರಾಮಗಳು ಬರುತ್ತವೆ. ಈ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಮಸ್ಯೆ ಎಂದರೆ ವಿದ್ಯುತ್.

ಆ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೇ ಹೇಳುವಂತೆ ಗ್ರಾಮ ಪಂಚಾಯಿತಿ ವಾಪ್ತಿಯಲ್ಲಿ ಹಗಲಿನ ಹೊತ್ತಿನಲ್ಲಿ ವಿದ್ಯುತ್ ಅಭಾವ ಬಹಳ ಇರುವುದರಿಂದ ಕಚೇರಿಯ ಕೆಲಸಗಳನ್ನು ನಿರ್ವಹಿಸಲು ಕಷ್ಟವಾಗುತ್ತಿದೆ. ಪ್ರಸ್ತುತ 1.5kVA ಯು.ಪಿ.ಎಸ್. ಇದ್ದರೂ ಸಹ ಕೇವಲ ಎರಡು ಗಂಟೆಯ ಅವಧಿಗೆ ಮಾತ್ರ ಸಾಕಾಗುವಷ್ಟು ವಿದ್ಯುತ್ ಸಿಗುತ್ತಿದೆ, ತದನಂತರ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರನ್ನು ಸೈಬರ್ ಸೆಂಟರ್‌ಗಳಿಗೆ ಮತ್ತು ಮದ್ದೂರು ತಾಲ್ಲೂಕು ಪಂಚಾಯತಿಗೆ ಕಳುಹಿಸಿಕೊಡಲಾಗುತ್ತದೆ. ಇಷ್ಟೆಲ್ಲಾ ಸಮಸ್ಯೆಗಳಿಂದ ಕಚೇರಿ ಕೆಲಸ ನಿರ್ವಹಿಸುವುದು ತುಂಬಾ ಕಷ್ಟದ ಕೆಲಸವೆಂದು ಅಧಿಕಾರಿಯು ತಮ್ಮ ಅಳಲು ತೋಡಿಕೊಳ್ಳುತ್ತಾರೆ.

ಇದೇ ಸಂದರ್ಭದಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಆಯೋಜಿಸಲಾಗುವ ತರಬೇತಿಗೆ ಹೆಮ್ಮನಹಳ್ಳಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಪಂಚಾಯಿತಿ ಅಧ್ಯಕ್ಷರು ಹಾಜರಾಗುತ್ತಾರೆ.

ಈ ತರಬೇತಿಯಲ್ಲಿ ಸಂಸ್ಥೆಯು ನವೀಕರಿಸಬಹುದಾದ ಇಂಧನ ಮೂಲಗಳ ಉಪಯೋಗ ಅದರಲ್ಲೂ ಸೌರ ವಿದ್ಯುತ್‌ನ ಉಪಯೋಗದ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ. ಈ ತರಬೇತಿಯಿಂದ ಸ್ಫೂರ್ತಿಯನ್ನು ಪಡೆದ ಪಂಚಾಯಿತಿ ಪ್ರತಿನಿಧಿಗಳು ಸಂಸ್ಥೆಯ ಅಧಿಕಾರಿಗಳನ್ನು ಭೇಟಿ ಮಾಡಿ ತಮ್ಮ ಗ್ರಾಮ ಪಂಚಾಯಿತಿಗೆ ಸೋಲಾರ್ ಘಟಕವನ್ನು ಅಳವಡಿಸಲು ಕೋರಿ ಪತ್ರ ಬರೆಯುತ್ತಾರೆ. ಈ ಪತ್ರಕ್ಕೆ ತಕ್ಷಣವೇ ಪ್ರತಿಕ್ರಯಿಸಿದ ಸಂಸ್ಥೆ, ಗ್ರಾಮ ಪಂಚಾಯಿತಿಗೆ ಬೇಟಿ ನೀಡಿ ಗ್ರಾಮ ಪಂಚಾಯಿತಿಯ ವಿದ್ಯುತ್‌ನ ಬೇಡಿಕೆ, ತಗಲಬಹುದಾದ ವೆಚ್ಚಗಳ ಬಗ್ಗೆ ಸಂಪೂರ್ಣ ವರದಿಯನ್ನು ನೀಡಲಾಗುತ್ತದೆ. ಈ ವರದಿಯನ್ನು ತಮ್ಮ ಗ್ರಾಮ ಪಂಚಾಯಿತಿ ಸಭೆಯಲ್ಲಿ ಚರ್ಚಿಸಿ ಸೋಲಾರ್ ಘಟಕವನ್ನು ಗ್ರಾಮ ಪಂಚಾಯಿತಿಯಲ್ಲಿ ಅಳವಡಿಸಲು ತೀರ್ಮಾನಿಸಿ, ಸಂಸ್ಥೆಗೆ ಸೋಲಾರ್ ಘಟಕವನ್ನು ಅಳವಡಿಸಿಕೊಡಲು ಕೋರುತ್ತಾರೆ.

## ಸೋಲಾರ್ ಘಟಕದ ತಾಂತ್ರಿಕ ವಿವರಣೆ

- 1.8kW ಸೋಲಾರ್ ಪ್ಯಾನಲ್ – 310Wp – 6 ಪ್ಯಾನಲ್‌ಗಳು
- 3KVA ಎಂ.ಪಿ.ಪಿ.ಟಿ. ಇನ್‌ವರ್ಟರ್ – 1
- 12V, 150Ah, C10 ಸೋಲಾರ್ ಟಾಲ್ ಟ್ಯೂಬಲರ್ ಬ್ಯಾಟರೀಸ್–4

# ಗ್ರಾಮ ಪಂಚಾಯಿತಿಯ ವಿದ್ಯುತ್ ಬೇಡಿಕೆ

1. ಪ್ರಸ್ತುತ ಗ್ರಾಮಪಂಚಾಯಿತಿ ಕಟ್ಟಡಗಳ ವಿದ್ಯುತ್‌ಶಕ್ತಿ ಬಳಕೆಯ ವಿವರ (ಮುಂಬದಿ ಮತ್ತು ಹಿಂಬದಿ ಕಟ್ಟಡಗಳು) :-

| ಕ್ರ. ಸಂ. | ಉಪಕರಣಗಳು | ವಿದ್ಯುತ್ ಪರಿಮಾಣ (W) | ಪ್ರಮಾಣ | ದಿನದ ಬಳಕೆಯ ಗಂಟೆಗಳು | ದಿನದ ಇಂಧನ ಬೇಡಿಕೆ (Whr) |
|---|---|---|---|---|---|
| 1 | ಬುರಡೆಬಲ್ಬ್‌ಗಳು | 40 | 3 | 1 | 120 |
| 2 | ಸಿಎಫ್‌ಎಲ್ | 13 | 4 | 2 | 104 |
| 3 | ಫ್ಯಾನ್ | 75 | 3 | 3 | 675 |
| 4 | ಗಣಕಯಂತ್ರಗಳು | 150 | 2 | 6 | 1800 |
| 5 | ಪ್ರಿಂಟರ್ಸ್ | 100 | 3 | 1 | 300 |
| 6 | ಲ್ಯಾಪ್‌ಟಾಪ್ | 60 | 1 | 3 | 180 |
| 7 | ಸಿ.ಸಿ.ಟಿ.ವಿ ಕ್ಯಾಮರಾ | 18 | 4 | 24 | 1728 |
| 8 | 0.5 ಹೆಚ್.ಪಿ. ವಾಟರ್ ಪಂಪ್ | 500 | 1 | 0.15 | 50 |
| ಒಂದು ದಿನಕ್ಕೆ ಬೇಕಾಗಿರುವ ವಿದ್ಯುತ್ ಬೇಡಿಕೆ | | | | | 4957 |

ಪ್ರಸ್ತುತ ಗ್ರಾಮ ಪಂಚಾಯಿತಿಯ ಎರಡು ಕಟ್ಟಡಗಳಿದ್ದು ವಾರ್ಷಿಕವಾಗಿ ವಿದ್ಯುತ್ 912 ಯುನಿಟ್‌ಗಳು, ಸರಾಸರಿ ಮಾಸಿಕ 76 ಯುನಿಟ್‌ಗಳ ಬೇಡಿಕೆ ಇರುತ್ತದೆ.

ಸಂಸ್ಥೆಯು ಪಂಚಾಯಿತಿಯಲ್ಲಿ ಲಭ್ಯವಿರುವ ಅನುದಾನ ರೂ. 3.00 ಲಕ್ಷಗಳಲ್ಲಿ ಈ ಕೆಳಕಂಡ ಸೋಲಾರ್ ಉಪಕರಣಗಳನ್ನು ಅಳವಡಿಸಿ ಗ್ರಾಮ ಪಂಚಾಯಿತಿಯ ಕೆಲಸ ಕಾರ್ಯಗಳಿಗೆ ದಾರಿದೀಪವಾಗಿದೆ.

- ಎ.ಜೆ.ಬಿ ಅರ್ಥಿಂಗ್-1
- ಎಂ.ಎಂ.ಎಸ್.-1 ಸೆಟ್

## ಪ್ರತಿಫಲ

- ಈ ಘಟಕದಿಂದ ಉತ್ಪತ್ತಿಯಾದ ವಿದ್ಯುತ್ 2 ಗಣಕಯಂತ್ರಗಳು, 2 ಪ್ರಿಂಟರ್, 1 ಲ್ಯಾಪ್‌ಟಾಪ್, 4 ಫ್ಯಾನ್‌ಗಳು, 5 ಟ್ಯೂಬ್‌ಲೈಟ್ಸ್ ಮತ್ತು 0.5 ಹೆಚ್.ಪಿ. ವಾಟರ್ ಪಂಪ್‌ಗಳಿಗೆ ಬಳಕೆಯಾಗುತ್ತಿದೆ.
- ಈ ಸೋಲಾರ್ ಘಟಕವು ಹೆಚ್ಚು ಕ್ಷಮತೆ ಹೊಂದಿರುವುದರಿಂದ ಹೆಚ್ಚುವರಿಯಾಗಿ ರೂ. 60,000/-ಗಳ ವೆಚ್ಚದಲ್ಲಿ 10 ಸಂಖ್ಯೆ ಕೇಂದ್ರಿಕೃತ ಸೋಲಾರ್ ದೀಪಗಳನ್ನು (20 W LED) ಅಳವಡಿಸಲಾಗಿದೆ.
- ಈ ಸೋಲಾರ್ ಘಟಕವನ್ನು ಅಳವಡಿಸಿದ ನಂತರ ಗ್ರಾಮ ಪಂಚಾಯಿತಿಯ ಕಟ್ಟಡದ ವಿದ್ಯುತ್ ಬಿಲ್ ರೂ. 48 ಆಗಿರುತ್ತದೆ.
- ಮುಂಬರುವ ದಿನಗಳಲ್ಲಿ ಇನ್ನು 15 ಸಂಖ್ಯೆಯ ಕೇಂದಿಕೃತ ಸೋಲರ್ ದೀಪಗಳನ್ನು ಅಳವಡಿಸಲು ಯೋಜಿಸಲಾಗಿದೆ.

ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ರಾಜ್ಯದ ಅನೇಕ ಗ್ರಾಮ ಪಂಚಾಯಿತಿಗಳಿಗೆ ವಿದ್ಯುತ್ ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ಸಲಹೆಯನ್ನು ನೀಡುವ ಒಂದು ಸಂಸ್ಥೆಯಾಗಿದ್ದು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ವಿದ್ಯುತ್ ಸ್ವಾವಲಂಬಿಯಾಗಬೇಕೆನ್ನುವುದೇ ಸಂಸ್ಥೆಯ ಕನಸು.

ಯಾವುದೇ ಗ್ರಾಮ ಪಂಚಾಯಿತಿ ಅಥವಾ ಸರ್ಕಾರಿ ಕಚೇರಿಗಳು ಅನುದಾನ ಲಭ್ಯತೆಯಿದ್ದು, ಸೂಕ್ತ ತಾಂತ್ರಿಕ ಮಾಹಿತಿಯ ಅಗತ್ಯವಿದ್ದಲ್ಲಿ ಮತ್ತು ಸೋಲಾರ್ ಮತ್ತು ಇತರ ನವೀಕರಿಸಬಹುದಾದ ಇಂಧನ ಮೂಲಗಳ ಘಟಕಗಳನ್ನು ಅಳವಡಿಸಿಕೊಂಡು ವಿದ್ಯುತ್ ಸ್ವಾವಲಂಬಿಗಳಾಗಬೇಕಿದ್ದಲ್ಲಿ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಶ್ರೀರಾಂಪುರ ಕ್ರಾಸ್, ಜಕ್ಕೂರು, ಬೆಂಗಳೂರ ಈ-ಮೇಲ್ - mgiredblr@gmail.com ದೂರವಾಣಿ ಸಂಖ್ಯೆ : 080-23626493 ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

## ಯಶೋಗಾಥೆ



ಬಿ.ಎಲ್.ಈಶ್ವರ್ ಪ್ರಸಾದ್

ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯಿತಿ, ಚಳ್ಳಕೆರೆ
ಪೋನ್ ನಂ:948086110

# ಉದ್ಯೋಗ ಖಾತರಿಗೆ ಶಾಸಕರ ದಿಟ್ಟ ಒಲವು ನಮ್ಮ ತಾಲ್ಲೂಕಲಿ ಬರಕ್ಕಿಲ್ಲ ಸ್ಥಳವು

ಬರ.....ಬರ....ಬರ ಎಂದರೆ ಸಾರ ಇಲ್ಲದ್ದು, ತೇವಾಂಶವಿಲ್ಲದ್ದು, ಸಾರವಿಲ್ಲದ ಕಾಲ ಎಂದರೆ ಮಳೆ ಇಲ್ಲದ ಕಾಲ. ಮಳೆ ಇಲ್ಲದೇ ಬೆಳೆ ಒಣಗಿದಾಗ ಗೊತ್ತಾಗುವುದು ಬರದ ಛಾಯೆ, ಬಿರುಬಿಸಿಲು ಕೂಡ ಬರದ ವಾತಾವರಣವನ್ನು ಸೃಷ್ಟಿಸುತ್ತದೆ. 2016-17ರ ಬರಗಾಲದಿಂದ ನಮ್ಮ ರಾಜ್ಯವೂ ತತ್ತರಿಸಿ ಹೋಗಿದೆ. ಬರಗಾಲದಿಂದ ಬೆಂದು ಬೆಂಡಾದ ಹಳ್ಳಿಗಳ ವಾಸ್ತವ ಚಿತ್ರಣ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ. ನೀರಿಗಾಗಿ ಮಹಿಳೆಯರು ಬಹು ದೂರ ನಡೆಯುವುದು ಜನ ಜಾನುವಾರುಗಳು ಕುಡಿಯುವ ನೀರಿಗೆ ಪರಿತಪಿಸುವುದು, ಕೆರೆ ಕಟ್ಟೆಗಳು ಒಣಗಿ ಬಿರಿದಿರುವುದು ಕಂಡುಬರುವ ಸರ್ವೇ ಸಾಮಾನ್ಯ ದೃಶ್ಯ.

ಈ ಬರಗಾಲದ ಸಮಯದಲ್ಲಿ ಜನರಿಗೆ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಹಾಗೂ ಕುಡಿಯಲು ನೀರು ಒದಗಿಸಿ ಸರ್ಕಾರಗಳು ಅನೇಕ ಜನಪರ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಅದು ಫಲಾನುಭವಿಗೆ ತಲುಪಲು ಎಲ್ಲಾ ವರ್ಗದ ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಶ್ರಮವು ಬಹಳ ಅವಶ್ಯಕವಾದದ್ದು. ಈ ಕಾರ್ಯಕ್ರಮಗಳಲ್ಲಿ ಯಶಸ್ಸು ಕಂಡವರು ಈ ಚಳ್ಳಕೆರೆ ಕ್ಷೇತ್ರದಿಂದ ಪ್ರಥಮಬಾರಿಗೆ ಶಾಸಕರಾಗಿ ಆಯ್ಕೆಯಾದ ಟಿ.ರಘುಮೂರ್ತಿರವರು.



ಮಾನ್ಯ ಶಾಸಕರು ಚಿತ್ರದುರ್ಗ ಜಿಲ್ಲೆಯ ತುರುವನೂರು ಹೋಬಳಿಯ ಕಡಬನಕಟ್ಟೆ ಎಂಬ ಗ್ರಾಮದಲ್ಲಿ 36 ವರ್ಷ ಅಮೋಘ ಜನರ ಸೇವೆಯಲ್ಲಿ ತೊಡಗಿದ್ದ ದಿ.ಶ್ರೀ. ಟಿ.ತಿಪ್ಪೇಸ್ವಾಮಿಯವರ ಮಗನಾಗಿ ಜನಿಸಿರುವ ಇವರು ಜನಸೇವೆ ಮಾಡುವ ಹಂಬಲದಿಂದ ಸರ್ಕಾರಿ ಉನ್ನತ ಹುದ್ದೆಯನ್ನು ಬಿಟ್ಟು ಬಂದು ಅಪಾರ ಪರಿಶ್ರಮದಿಂದ ಕ್ಷೇತ್ರ ವ್ಯಾಪ್ತಿ ಜನರ ಮನಗೆದ್ದು 2013ರಲ್ಲಿ ಚಳ್ಳಕೆರೆ ಕ್ಷೇತ್ರದಿಂದ ಆಯ್ಕೆಯಾಗಿರುತ್ತಾರೆ.

ಚಳ್ಳಕೆರೆಯು ಚಿತ್ರದುರ್ಗ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದೆ. ಇಲ್ಲಿ ಕಡ್ಲೇಕಾಯಿ(ಶೇಂಗಾ)ಬೆಳೆಯನ್ನು ಜಾಸ್ತಿ ಬೆಳೆಯುತ್ತಾರೆ. ಈ ಕ್ಷೇತ್ರದಲ್ಲಿ ತಲೆದೊರಿರುವ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲು 151 ನೋಡಲ್ ಅಧಿಕಾರಿಗಳನ್ನು ಜಿಲ್ಲಾಡಳಿತ ನಿಯೋಜಿಸಿದಾಗ ಮೂಲಭೂತ ಸೌಕರ್ಯಗಳೊಂದಿಗೆ ಬರನಿರ್ವಹಣೆ, ಕುಡಿಯುವ ನೀರು ಪೂರೈಕೆ, ಜನುವಾರುಗಳಿಗೆ ನೆರಳು, ಮೇವು ಹಾಗೂ ನರೇಗಾ ಯೋಜನೆಯನ್ನು ಸಮಗ್ರವಾಗಿ ಬಳಸಿಕೊಂಡು ಸಂಪೂರ್ಣ ಯಶಸ್ವಿಯಾಗಿದ್ದಾರೆ.

**ಈ ಬರಗಾಲದಿಂದ ಮೇವುನ್ನು ದುಡ್ಡು ಕೊಟ್ಟರೆ ಸಿಗದೇ ಇರುವ ಪರಿಸ್ಥಿತಿಯಲ್ಲಿ ಬೇರೆ ರಾಜ್ಯಗಳಿಂದ ಮೇವನ್ನು ತರಿಸಲು ಹೆಚ್ಚಿನ ಹಣ ನೀಡಬೇಕು ಹಾಗೂ ನಿರೀಕ್ಷೆಯ ಗುಣಮಟ್ಟದ ಮೇವು ಸಿಗುವುದು ಕಷ್ಟ ಎನ್ನುವ ಸಮಯದಲ್ಲಿ ಸಾಣಿಕೆರೆ ಗ್ರಾಮ ಪಂಚಾಯಿತಿಯ ಗೋಶಾಲೆ ಹತ್ತಿರವಿರುವ ಕೆರೆಯಂಗಳದಲ್ಲಿ 100 ಎಕರೆಯಲ್ಲಿ ಹಸಿರು ಮೇವು ಬೆಳೆಯುವ ಪ್ರಯತ್ನದಲ್ಲಿ ಯಶಸ್ಸನ್ನು ಕಂಡಿದ್ದಾರೆ.**

### ನರೇಗಾ ಯೋಜನೆಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಶಾಸಕರ ಮನವಿ

ಬಡತನ, ನಿರುದ್ಯೋಗ, ವಲಸೆ, ಅನಾರೋಗ್ಯ ಇವು ನಮ್ಮ ಇಂದಿನ ಶತ್ರುಗಳಾಗಿವೆ. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಿ ಹಾಗೂ ಗ್ರಾಮೀಣ ಪ್ರದೇಶದ ಜನರ ಕುಟುಂಬಗಳ ಮಟ್ಟವನ್ನು ಸುಧಾರಿಸಲು ಬಡತನ, ನಿರುದ್ಯೋಗ ನಿರ್ಮೂಲನೆ ಮಾಡಲು ಈ ದಿನಗಳಲ್ಲಿ ಸರ್ಕಾರವು ಅನೇಕ ಯೋಜನೆಗಳ ಮೂಲಕ ಜನರ ಮನೆಬಾಗಿಲುಗಳಿಗೆ ತಲುಪಿಸಲು



ಸತತ ಪ್ರಯತ್ನ ಮಾಡಲಾಗುತ್ತಿದೆ. ಈ ದಿಸೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಒಂದಾಗಿದೆ.

ಸದರಿ ಯೋಜನೆಯನ್ನು ಮಾನ್ಯ ಶಾಸಕರು ಬರಗಾಲವನ್ನು ಎದುರಿಸಲು ಗ್ರಾಮೀಣ ಭಾಗದ ಜನರಿಗೆ ಅವಶ್ಯಕತೆ ಇರುವ ಕೆಲಸಗಳನ್ನು ನೀಡಲು ಅನೇಕ ಸಭೆಗಳನ್ನು ಅಯೋಜಿಸಿ ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದಲ್ಲಿನ ಕಾಮಗಾರಿಗಳನ್ನು ತೆಗೆದುಕೊಳ್ಳಲು, ಮಾಹಿತಿ ಶಿಕ್ಷಣ ಹಾಗೂ ಸಂವಹನದ(ಐಇಸಿ) ವಿವಿಧ ಚಟುವಟಿಕೆಗಳ ಮೂಲಕ ಜನರಿಗೆ ಅರಿವು ಮೂಡಿಸಿ ಜನರು ಗುಳೆ ಹೋಗುವುದನ್ನು ತಡೆಗಟ್ಟಿ ಕೂಲಿ ಕಾರ್ಮಿಕರಿಗೆ ಸ್ಥಳೀಯವಾಗಿ ಉದ್ಯೋಗವನ್ನು ಕಡ್ಡಾಯವಾಗಿ ನೀಡಲು ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಅನುಷ್ಠಾನ ಅಧಿಕಾರಿಗಳಿಗೆ ಸೂಚಿಸಿದರು.

## ಸಶ್ಮಾನ ಅಭಿವೃದ್ಧಿ:

ಮಾನವನಿಗೆ ಮರಣ ಹೊಂದಿದ ನಂತರ ತಕ್ಕ ರೀತಿಯಲ್ಲಿ ಗೌರವದಿಂದ ಅವರನ್ನು ಕಳುಹಿಸಿ ಕೊಡುವುದು ಮಾನವನ ಧರ್ಮ.ಅಗಲಿದ ಅತ್ಮಕ್ಕೆ ಗೌರವ ಪೂರ್ಣ ವಿದಾಯ ಹೇಳುವ ಸ್ಥಳ ಸ್ಮಶಾನ. ಪ್ರಶಾಂತ ವಾತಾವರಣ ಕಲ್ಪಿಸಲು ಮಾನ್ಯ ಶಾಸಕರು ತಾವೇ ಅಸಕ್ತಿ ವಹಿಸಿ ಸ್ಮಶಾನ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿ ಸುಂದರ ಸ್ವಚ್ಚ ಸ್ಮಶಾನಗಳನ್ನು ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಬರಗಾಲದ ಸಮಯದಲ್ಲಿ ಪ್ರತಿಯೊಬ್ಬ ಕೂಲಿಕಾರರಿಗೆ ಕೆಲಸ ಒದಗಿಸಲು ಹಾಗೂ ನಮ್ಮ ಮರಣದ ನಂತರ ಸೇರುವ ಸ್ಥಳವನ್ನು ಸುಂದರ –ಸ್ವಚ್ಛವಾಗಿಡಲು ಪ್ರತಿಯೊಬ್ಬರೂ ಶ್ರಮಿಸಬೇಕೆಂದು ತಾಲ್ಲೂಕು ಪಂಚಾಯಿತಿ ಹಾಗೂ ತಾಲ್ಲೂಕು ಕಚೇರಿಯ ಸಿಬ್ಬಂದಿಗಳನ್ನು ತೊಡಗಿಸಿ ಅನೇಕ ಸಭೆಗಳನ್ನು ಮಾಡಿ ಕ್ಷೇತ್ರದಲ್ಲಿರುವ ಕಾಮಗಾರಿಗಳ ಸ್ಥಳಗಳನ್ನು ಗುರುತಿಸಿ, ಇರುವ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಿ ಕಾಮಗಾರಿಗಳು ಸುಗಮವಾಗಿ ಮುಕ್ತಾಯಗೊಳಿಸಲು ಮಾನ್ಯ ಶಾಸಕರು ಶ್ರಮಿಸಿದರು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಡಿ ತೆಗೆದುಕೊಂಡ 128 ಕಾಮಗಾರಿಗಳಲ್ಲಿ 55 ಕಾಮಗಾರಿಗಳನ್ನು ಮುಕ್ತಾಯಗೊಳಿಸಿ 73 ಪ್ರಗತಿಯಲ್ಲಿವೆ.

## ಕುರಿ–ದನದ ದೊಡ್ಡಿ:

ಕೃಷಿಯೇತರ ಜನರು ಸಹ ಮಹಾತ್ಮ ಗಾಂಧಿ ನರೇಗ



ಯೋಜನೆಯ ಕಾಮಗಾರಿಗಳಲ್ಲಿ ಭಾಗವಹಿಸಲು ಹಾಗೂ ತಮ್ಮ ಉಪ ಕಸಬುಗಳಾದ ಕುರಿ/ಕೋಳಿ/ಮೇಕೆ / ದನಗಳನ್ನು ಸಾಕುವಲ್ಲಿ ಅವುಗಳನ್ನು ಪೋಷಿಸುವಲ್ಲಿ ಸುವ್ಯವಸ್ಥಿತವಾದ ಒಂದು ಸ್ಥಳವನ್ನು ನಿರ್ಮಿಸಲು ಹಾಗೂ ಅವುಗಳಿಗಾಗಿ ದೊಡ್ಡಿಗಳನ್ನು ನಿರ್ಮಿಸಿಕೊಂಡು ತಾವುಗಳು ಬೇರೆ ಎಲ್ಲಿಗೂ ವಲಸೆ ಹೋಗದಂತೆ ತಮ್ಮ ತಮ್ಮ ಮನೆಯ ಹತ್ತಿರ ಕೆಲಸ ನಿರ್ವಹಿಸಲು ವೈಯಕ್ತಿಕ ಕಾಮಗಾರಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು ಮಾನ್ಯ ಶಾಸಕರು.

ಶಾಸಕರಾದ ದಿನಗಳಿಂದ ಇವರು ಗ್ರಾಮ ಪಂಚಾಯಿತಿಗಳಿಗೆ ತಾಲ್ಲೂಕಿನ ಎಲ್ಲಾ ಅಧಿಕಾರಿಗಳೊಂದಿಗೆ ಭೇಟಿ ನೀಟಿ ಅಲ್ಲಿನ ಸಮಸ್ಯೆ ಅಲಿಸುವುದರೊಂದಿಗೆ ಸಮಸ್ಯೆಗಳನ್ನು ಪರಿಹರಿಸುವ ಕ್ರಮವನ್ನು ಪರಿಪಾಟಗಿ ಬೆಳಿಸಿಕೊಂಡು ಬಂದಿರುವ ಹಾಗೂ ತಾಲ್ಲೂಕು ಕೇಂದ್ರದಲ್ಲಿ ಶಾಸಕರ ಭವನ ತೆರೆದು ಜನರಿಗೆ ಯಾವಾಗಲೂ ಲಭ್ಯವಾಗುವಂತೆ ತಮ್ಮನ್ನು ತಾವೇ ತೊಡಗಿಸಿಕೊಂಡ

ಇವರು ಹಳ್ಳಿಯ ಜನರಿಗೆ ಮಹಾತ್ಮ ಗಾಂಧಿ ನರೇಗ ಯೋಜನೆಯಲ್ಲಿ ಗ್ರಾಮೀಣ ಗೋದಾಮುಗಳು, ರೈತರ ಭೂ ಅಭಿವೃದ್ಧಿ, ರೈತರ ಕಣ. ಆಟದ ಮೈದಾನ ಗ್ರಾಮೀಣ ಉದ್ಯಾನ ವನ, ನೀರು ಸಂರಕ್ಷಣಾ ಕಾಮಗಾರಿಗಳು, ನಮ್ಮೂರ ಕೆರೆ, ನಮ್ಮ ಹೊಲ ನಮ್ಮ ದಾರಿ, ರಾಜೀವ್ ಸೇವಾಕೇಂದ್ರ, ಶೌಚಾಲಯಗಳು, ಅಂಗನವಾಡಿ ಕೇಂದ್ರಗಳು, ಕೃಷಿ ಹೊಂಡಗಳನ್ನು ನಿರ್ಮಿಸಿಕೊಂಡು ಕುಟುಂಬದ ಅರ್ಥಿಕ ಮಟ್ಟ ಹೆಚ್ಚಿಸಿಕೊಳ್ಳಲು ನರೇಗಾ ಯೋಜನೆಯನ್ನು ಉಪಯೋಗಿಸಿಕೊಳ್ಳುವಂತೆ ಹಲವು ಬಾರಿ ಕೂಲಿಕಾರರಿಗೆ ಸೂಚಿಸಿದ್ದಾರೆ.

## ಗೋವುಗಳ ಕಾಳಜಿ :

ಬರಗಾಲದಿಂದ ದನ ಕರುಗಳಿಗೆ ಮೇವಿನ ಅಭಾವದಿಂದ ಬಳಲಬಾರದೆಂದು ತಾಲ್ಲೂಕಿನಲ್ಲಿ ಹೋಬಳಿವಾರು 4 ಗೋಶಾಲೆಗಳಿದ್ದವು. ಅದರೆ ರೈತರ ಕೂಲಿಕಾರರ ಸಮಸ್ಯೆಯನ್ನು ಅಲಿಸಿ ಯಾರು ಎದೆಗುಂದದೆ ಬರಗಾವನ್ನು ಎದರರಿಸೋಣ ಎಂಬ ಮಾತಿನೊಂದಿಗೆ ನನ್ನಿವಾಳ ಹಾಗೂ ಜಾಜೂರು ಗ್ರಾಪಂಚಾಯಿತಿಯ ನಾಗಗೊಂಡನಹಳ್ಳಿಯಲ್ಲಿ ಗೋಶಾಲೆಗಳನ್ನು ತೆರೆದು ರೈತರು ಕಂಗಲಾಗದಂತೆ ನೋಡಿಕೊಂಡಿದ್ದಾರೆ. ಈಗ ತಾಲ್ಲೂಕಿನಲ್ಲಿ 6 ಗೋ ಶಾಲೆಗಳಿದ್ದು, 16720 ರಾಸುಗಳಿವೆ. ಇವುಗಳಿಗೆ ಬೇಕಾದ ನೀರಿನ ತೊಟ್ಟಿಗಳನ್ನು ನರೇಗಾ ಯೋಜನೆಯಡಿ ನಿರ್ಮಿಸಿ ನೀರಿನ ವ್ಯವಸ್ಥೆ ಹಾಗೂ ವಿದ್ಯುತ್ ವ್ಯವಸ್ಥೆ ಮಾಡಿ ಸ್ವಚ್ಛತೆ ಕಾಪಾಡಲು ರೈತರಲ್ಲಿ ಮನವಿ ಮಾಡಿ ಅವರಿಗಾಗಿ ಕಲಿಕಾ ಕೇಂದ್ರಗಳನ್ನು ಸಹ ತೆರೆಸಲಾಗಿದೆ ಹಾಗೂ ದೇವರೆತ್ತುಗಳಿಗೂ ಸೌಕಾರ್ಯ ಒದಗಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ಮೇವು ಬೆಳೆಯುವ ಯೋಜನೆ:

ಈ ಬರಗಾಲದಿಂದ ಮೇವುನ್ನು ದುಡ್ಡು ಕೊಟ್ಟರೆ ಸಿಗದೇ ಇರುವ ಪರಿಸ್ಥಿತಿಯಲ್ಲಿ ಬೇರೆ ರಾಜ್ಯಗಳಿಂದ ಮೇವನ್ನು ತರಿಸಲು ಹೆಚ್ಚಿನ ಹಣ ನೀಡಬೇಕು ಹಾಗೂ ನಿರೀಕ್ಷೆಯ ಗುಣಮಟ್ಟದ ಮೇವು ಸಿಗುವುದು ಕಷ್ಟ ಎನ್ನುವ ಸಮಯದಲ್ಲಿ ಸಾಣಿಕೆರೆ ಗ್ರಾಮ ಪಂಚಾಯಿತಿಯ ಗೋಶಾಲೆ ಹತ್ತಿರವಿರುವ ಕೆರೆಯಂಗಳದಲ್ಲಿ 100 ಎಕರೆಯಲ್ಲಿ ಹಸಿರು ಮೇವು ಬೆಳೆಯುವ ಪ್ರಯತ್ನದಲ್ಲಿ ಯಶಸ್ಸನ್ನು ಕಂಡಿದ್ದಾರೆ. ಈಗ ಮೇವು ಗಿಡಗಳು ಬೆಳೆದಿದ್ದು ಇನ್ನು ಸ್ವಲ್ಪ ದಿನಗಳಲ್ಲಿ ತಾಲ್ಲೂಕಿನಾದ್ಯಂತಾ ಹಸಿರು ಮೇವು ವಿತರಣೆ ಮಾಡುವ ಅಸೆಯನ್ನು ಹೊತ್ತಿದ್ದಾರೆ.

## ಅತ್ಯಂತ ಕಡಿಮೆ ಬೆಲೆಗೆ ಶುದ್ದ ನೀರು ಪೂರೈಕೆ :

ಮೊದಲೇ ಬರವಿರುವ ಸಮಯದಲ್ಲಿ ಕಲುಷಿತ ನೀರು



ಕುಡಿದು ರೋಗಗಳಿಗೆ ಅವಕಾಶ ನೀಡದಂತೆ ಮುಂಜಾಗ್ರತ ಕ್ರಮವಹಿಸಲು ರಾಜ್ಯ ಸರ್ಕಾರದಿಂದ ನೀಡಿರುವ ಶುದ್ದ ನೀರಿನ ಘಟಕ ಕಾಮಗಾರಿಗಳನ್ನು ವೇಗವಾಗಿ ಮುಗಿಸಿ ಸರ್ಕಾರದ ಅಶಯದಂತೆ ಸಾಮಾನ್ಯರಿಗೂ ಶುದ್ದ ಕುಡಿಯವ ನೀರು ಒದಗಿಸುವಲ್ಲಿ ಅಧಿಕಾರಗಳ ಸಹಯೋಗದೊಂದಿಗೆ ಬರದ ಸಮಯದಲ್ಲೂ ಸಹ ಅತ್ಯಂತ ಕಡಿಮೆ ದರದಲ್ಲಿ ಶುದ್ದ ಕುಡಿಯವ ನೀರನ್ನು ಹಳ್ಳಿಯ ಜನರಿಗೆ ನೀಡಿ ದಾಹವನ್ನು ನೀಗಿಸಿದ್ದಾರೆ. ಮಂಜೂರಾದ 148 ಕಾಮಗಾರಿಗಳಲ್ಲಿ 98 ಘಟಕಗಳನ್ನು ಚಾಲನೆಯಲ್ಲಿ ಇಟ್ಟಿದ್ದಾರೆ.

ಬೆಳೆ ನಷ್ಟ ಪರಿಹಾರ ಹೆಚ್ಚಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಿದ ಶಾಸಕರು ಜಿಲ್ಲಾಮಟ್ಟದ ಉದ್ಯೋಗ ಮೇಳ ಮೂಲಕ ಯುವಕರ ಮನಸ್ಥಿತಿ ಕಾಪಾಡಿದ ಶಾಸಕರು.

## ಅಂತರ್ಜಲ ಹೆಚ್ಚಿಸಲು ಕ್ರಮ:

ವೇದಾವತಿ ನದಿಗೆ 5 ಕಡೆ ಬ್ಯಾರೇಜ್ ನಿರ್ಮಾಣ ಮಾಡುವುದರಿಂದ ಸುತ್ತ ಮುತ್ತಲಿನ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆಂದು ಪರಶುರಾಂಪುರ, ಚೌಳೂರು ಹಾಗೂ ಮೋದೂರುನ 2 ಕಡೆ ಬ್ಯಾರೇಜ್ ನಿರ್ಮಾಣ ಮಾಡಲು ಅನುಮೋದನೆ ದೊರಕಿಸಿಕೊಂಡ ಇವರು 5ಕೋಟಿಗೂ ಹೆಚ್ಚಿನ ವೆಚ್ಚದಲ್ಲಿ ಕಾಮಗಾರಿ ಪ್ರಾರಂಭ ಮಾಡಿ ಹಾಗೂ ನೀರಿನ ಸಮಸ್ಯೆಯ ಪರಿಹಾರಕ್ಕಾಗಿ ತುಂಗ ಭದ್ರ ಹಿನ್ನೀರಿನ ಯೋಜನೆ ರೂಪಿಸಿದ್ದು, 2 ಸಾವಿರ ಕೋಟಿ ವೆಚ್ಚವನ್ನು ಒಳಗೊಂಡಿರುವ ಈ ಯೋಜನೆಯನ್ನು ತಯಾರಿಸುವಲ್ಲಿ ಮಾನ್ಯ ಶಾಸಕರು ಶ್ರಮ ವಹಿಸಿದ್ದಾರೆ. ಹಾಗೂ ತಾಲ್ಲೂಕಿನ ಪರಶುರಾಂಪುರ ಹೋಬಳಿಯ ಪಗಡಲಬಂಡೆ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ವಾಸ್ತವ್ಯ ಸಹ ಮಾಡಿ, ಜನರ ಸಮಸ್ಯೆಗಳನ್ನು ಅಲಿಸಿ ತಾಲ್ಲೂಕಿನ ಎಲ್ಲಾ ಇಲಾಖೆಗಳಿಂದ ದೊರೆಯುವ ವಿವಿಧ ಸೌಲಭ್ಯಗಳನ್ನು ಫಲಾನುಭವಿಗಳಿಗೆ ವಿತರಣೆ ಮಾಡಿ ಜನರ ಮಾತಿಗೆ ಧ್ವನಿಯಾಗಿದ್ದಾರೆ. ■

ಯಶೋಗಾಥೆ



**ಕೆ.ಪಿ.ಸಂಜೀವಪ್ಪ**

ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯತ್, ಮಾಲೂರು

# ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯಿತಿಯಾಗಿ ಮಡಿವಾಳ

ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು ಮಡಿವಾಳ ಗ್ರಾಮ ಪಂಚಾಯತಿ ತಾಲ್ಲೂಕು ಕೇಂದ್ರ ಸ್ಥಾನದಿಂದ 03 ಕಿ.ಮೀ ದೂರವಿದ್ದು, ಮಾಲೂರು ಬೆಂಗಳೂರು ಮುಖ್ಯ ರಸ್ತೆಯಲ್ಲಿರುತ್ತದೆ. ಮಡಿವಾಳ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಟ್ಟು 10 ಗ್ರಾಮಗಳಿದ್ದು, 7919 ಜನಸಂಖ್ಯೆ ಇದ್ದು, 1410 ಕುಟುಂಬಗಳಿವೆ ಈ ಗ್ರಾಮ ಪಂಚಾಯಿತಿಯಲ್ಲಿ ಜನಪ್ರತಿನಿಧಿಗಳು ಅಧಿಕಾರಿಗಳು ಮತ್ತು ಸಾರ್ವಜನಿಕರ ಸಹಾಕಾರದಿಂದ ಎಲ್ಲರೂ ಶೌಚಾಲಯಗಳನ್ನು ಕಟ್ಟಿಸಿಕೊಂಡು ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯಿತಿಯಾಗಿ ಘೋಷಣೆಯಾಗಲು ಕಾರಣೀಭೂತರಾಗಿದ್ದಾರೆ.



**ಈ ಮಡಿವಾಳ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮಗಳ 1410 ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡಿದ್ದಕ್ಕೆ ಪ್ರಥಮವಾಗಿ ದಿನಾಂಕ:07-06-2017 ರಂದು ಮಡಿವಾಳ ಗ್ರಾಮ ಪಂಚಾಯತಿಯ ಎಲ್ಲಾ ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ (ಒ.ಡಿ.ಎಫ್) ಗ್ರಾಮ ಪಂಚಾಯತಿಯಾಗಿ ಘೋಷಣೆ ಮಾಡಲಾಗಿರುತ್ತದೆ.**

**ಈ ಗ್ರಾಮ ಪಂಚಾಯಿತಿಯು ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿಸಿದ ಇವರ ಪ್ರಯತ್ನ ಹಾಗೂ ಕ್ರಿಯಾಶೀಲ ಯತ್ನವನ್ನು ತಿಳಿಯಲು ಕೇಂದ್ರ ಸರ್ಕಾರದ ತಜ್ಞರಾದ ಶ್ರೀ ರಾಜು ಬಾಟಿಯಾ ಮತ್ತಿತರರ ತಂಡ ಆಗಮಿಸಿ ಶೌಚಾಲಯ ಬಳಕೆ ಬಗ್ಗೆ ಗ್ರಾಮಗಳಲ್ಲಿ ವೀಕ್ಷಣೆ ಮಾಡಿ ಪ್ರಶಂಸೆ ಕೂಡ ವ್ಯಕ್ತಪಡಿಸಿದ್ದಾರೆ.**

ಈ ಗ್ರಾಮ ಪಂಚಾಯತಿಯಲ್ಲಿ ಐತಿಹಾಸಿಕವಾಗಿ ದೇವಾಸ್ಥಾನಗಳಾದ ಶ್ರೀ ಕೊದಂಡರಾಮಸ್ವಾಮಿ ದೇವಾಲಯ, ಮತ್ತು ಶ್ರೀ ಗಂಗಾದರೇಶ್ವರ ದೇವಾಲಯಗಳು ಇದ್ದು, ಇವು ಪ್ರಸಿದ್ದಿ ಹೊಂದಿರುತ್ತವೆ. ಗ್ರಾಮ ಪಂಚಾಯತಿಯಲ್ಲಿ ರೈತರು ತೋಟಗಾರಿಕೆ ಬೆಳೆಗಳು, ತೆಂಗು, ಹಿಪ್ಪು ನೇರಳೆ ಟೆಮೋಟೊ, ತರಕಾರಿ, ಹೈನುಗಾರಿಕೆ ಇತ್ಯಾದಿ ಬೆಳೆಗಳನ್ನು ಮಾಡಿ ಜೀವನೋಪಾಯ ನಡೆಸುತ್ತಿರುತ್ತಾರೆ.

ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಐ.ಟಿ.ಸಿ ಲಿಮಿಟೆಡ್, ಕೇಸರಿ ಕಾರ್ಖಾನೆ, ಜೆ.ಟಿ.ಪಿಸಿ ಮೆಡ್‌ಸಾಲ್ ಕಾರ್ಖಾನೆಗಳು ಇದ್ದು ಮತ್ತು ಇಟ್ಟಿಗೆ ಕಾರ್ಖಾನೆಗಳು ಸಹ ಇರುತ್ತವೆ. ಸ್ವಚ್ಚ ಭಾರತ್ ಮಿಷನ್ ಯೋಜನೆಯನ್ನು ಅನುಷ್ಠಾನ ಮಾಡುವಲ್ಲಿ

ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಜನಪ್ರತಿನಿಧಿಗಳು ಅಧಿಕಾರಿಗಳು ಕಾಲಕಾಲಕ್ಕೆ ಗ್ರಾಮ ಪಂಚಾಯತಿಗೆ ಭೇಟಿ ನೀಡಿ, ಸಲಹೆ ಸೂಚನೆ ಮಾರ್ಗದರ್ಶನ ಮಾಡಿ ಎಲ್ಲರಿಗೂ ಸಹ ಗ್ರಾಮಗಳ ಹಂಚಿಕೆ ಉಳಿಕೆ ಇರುವ ಶೌಚಾಲಯಗಳನ್ನು ಪೂರ್ಣಗೊಳಿಸಲು ವ್ಯವಸ್ಥಿತವಾಇ ಯೋಜನೆ ರೂಪಿಸಿ ಸಿಬ್ಬಂದಿಗಳನ್ನು ಆಯಾ ಗ್ರಾಮಗಳಿಗೆ ತಕ್ಕಂತೆ ನಿಯೋಜಿಸಿ ಕ್ರಮ ಕೈಗೊಂಡಿದ್ದಾರೆ. ಇವರ ಸತತ ಪ್ರಯತ್ನದಿಂದ, ಕಾರ್ಯದಿಂದ, ಎಲ್ಲಾ ಚುನಾಯಿತ ಗ್ರಾಮ ಪಂಚಾಯತಿ ಸದಸ್ಯರುಗಳು, ಮಾಜೀ ಸದಸ್ಯರುಗಳು ಸಹ ಅವರವರ ಗ್ರಾಮಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ.

ಈ ಗ್ರಾಮ ಪಂಚಾಯಿತಿಯು ಬಯಲು ಬಹಿರ್ದೆಸೆ ಮುಕ್ತ ಗ್ರಾಮವನ್ನಾಗಿಸಿದ ಇವರ ಪ್ರಯತ್ನ ಹಾಗೂ ಕ್ರಿಯಾಶೀಲ ಯತ್ನವನ್ನು ತಿಳಿಯಲು ಕೇಂದ್ರ ಸರ್ಕಾರದ ತಜ್ಞರಾದ ಶ್ರೀ ರಾಜು ಬಾಟಿಯಾ ಮತ್ತಿತರರ ತಂಡ ಆಗಮಿಸಿ ಶೌಚಾಲಯ ಬಳಕೆ ಬಗ್ಗೆ ಗ್ರಾಮಗಳಲ್ಲಿ ವೀಕ್ಷಣೆ ಮಾಡಿ ಪ್ರಶಂಸೆ ಕೂಡ ವ್ಯಕ್ತಪಡಿಸಿದ್ದಾರೆ. ■

**ಕೇಂದ್ರ ಸರ್ಕಾರದ ತಜ್ಞರಾದ ಶ್ರೀ ರಾಜು ಬಾಟಿಯಾ ಮತ್ತಿತರರ ತಂಡ ಕಾರ್ಯನಿರ್ವಾಹಕ ಅಧಿಕಾರಿಗಳು ಶೌಚಾಲಯ ಬಳಕೆ ಬಗ್ಗೆ ವೀಕ್ಷಣೆ ಮಾಡಿ ಪ್ರಶಂಸೆ ಮಾಡುತ್ತಿರುವುದು**



**ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯಿತಿ ಸಾಧಿಸಿರುವ ಹಿನ್ನೆಲೆಯಲ್ಲಿ ದಿನಾಂಕ:07-06-2017 ರಂದು ಮಡಿವಾಳ ಗ್ರಾಮ ಪಂಚಾಯತಿಯ ಎಲ್ಲಾ ಗ್ರಾಮಗಳನ್ನು ಬಯಲು ಬರ್ಹಿದೇಸೆ ಮುಕ್ತ (ಒ.ಡಿ.ಎಫ್) ಗ್ರಾಮ ಪಂಚಾಯತಿಯಾಗಿ ಘೋಷಣೆ ಮಾಡುವ ಸಲುವಾಗಿ ವಿಶೇಷ ಗ್ರಾಮ ಸಭೆಯನ್ನು ಏರ್ಪಸಿರುತ್ತದೆ. ಸದರಿ ವಿಶೇಷ ಗ್ರಾಮಸಭೆಯಲ್ಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೆಲ್ಲರೂ ಭಾಗವಹಿಸಿ ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.**





**ವಿಶೇಷ ಗ್ರಾಮಸಭೆಗೆ ಮಕ್ಕಳು ಮಹಿಳೆಯರು ಗ್ರಾಮಸ್ಥರೆಲ್ಲರೂ ಪಾಲ್ಗೊಳ್ಳಲು ತೆರಳುತ್ತಿರುವುದು ಹಾಗೂ ಭಾಗವಹಿಸಿರುವುದು.**



**ಬಯಲು 'ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯತಿ ಘೋಷಣೆ ಪ್ರಶಸ್ತಿ' ಸಮಾರಂಭದಲ್ಲಿ ಮಾನ್ಯ ಶ್ರೀ ಬಿ.ಬಿ.ಕಾವೇರಿ ಐ.ಎ.ಎಸ್, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಕೋಲಾರ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಜನಪ್ರತಿನಿಧಿಗಳು ಅಧಿಕಾರಿಗಳು ಭಾಗವಹಿಸಿರುವುದು.**

ಯಶೋಗಾಥೆ



ಕೆ. ಎಂ ಶಿವಕುಮಾರಸ್ವಾಮಿ

ಉಪಕಾರ್ಯದರ್ಶಿ (ಅಭಿವೃದ್ಧಿ)
ಜಿಲ್ಲಾ ಪಂಚಾಯತ್ ಮೈಸೂರು
ಮೊ: 9480873666

# ಬರ ನಿರ್ವಹಣೆಗೆ ಮೈಸೂರು ಜಿಲ್ಲಾಡಳಿತದ ದಿಟ್ಟ ಕ್ರಮ

**ಬರ ನಿರ್ವಹಣೆಗಾಗಿ 7438 ಕುರಿ ದನದದೊಡ್ಡಿ, 87 ಕೆರೆ ಅಭಿವೃದ್ಧಿ, 356 ಕೊಳವೆಬಾವಿ ಮರು ಪೂರಣಾ ಘಟಕಗಳು, 1776 ಜಾನುವಾರುಗಳ ಕುಡಿಯುವ ನೀರಿನ ತೊಟ್ಟಿಗಳು, 356 ಕೊಳವೆಬಾವಿ ಮರುಪೂರಣಾ ಘಟಕಗಳು, 191 ಕೃಷಿ ಹೊಂಡಗಳನ್ನು ಹಾಗೂ 6 ಬಹು ಕಮಾನು ತಡೆಗೋಡೆಗಳನ್ನು ನಿರ್ಮಾಣ ಮಾಡಲಾಗಿದೆ. ಒಟ್ಟು 26,65,092 ಮಾನವ ದಿನಗಳನ್ನು ಸೃಜಿಸಲಾಗಿದೆ.**

ರಾಜ್ಯದ ಸಾಂಸ್ಕೃತಿಕ ರಾಜಧಾನಿ ಮೈಸೂರು ಜಿಲ್ಲೆಯು ಐತಿಹಾಸಿಕವಾಗಿ ಕರ್ನಾಟಕದಲ್ಲಿ ಒಂದು ಪ್ರಮುಖ ಜಿಲ್ಲೆಯಾಗಿದೆ. ನಿರ್ಜಾ ನಾಲೆ, ರಾಮಸ್ವಾಮಿ ನಾಲೆ, ಮಾಧವಮಂತ್ರಿ ನಾಲೆ, ಚುಂಚನಕಟ್ಟೆ ನಾಲೆ ಮುಂತಾದ ನೀರಾವರಿ ಕಾಲುವೆಗಳಿದ್ದು, ಕಾವೇರಿ, ಕಪಿಲ, ಲಕ್ಷ್ಮಣತೀರ್ಥ ಎಂಬ ನದಿಗಳನ್ನು ಕೂಡ ಹೊಂದಿದೆ. ಇಷ್ಟೆಲ್ಲಾ ಇದ್ದರೂ ಕಳೆದ ವರ್ಷ ಮಾನ್‌ಸೂನ್ ವಿಫಲವಾದ ಹಿನ್ನಲೆಯಲ್ಲಿ 7 ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿ ಕುಡಿಯುವ ನೀರಿನ ಮತ್ತು ಜಾನುವಾರುಗಳಿಗೆ ಮೇವು ಕೊರತೆಯ ಸಮಸ್ಯೆಯನ್ನು ಎದುರಿಸಲಾಯಿತು. ಈ ಸಂದರ್ಭದಲ್ಲಿ ಸರ್ಕಾರ 7 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ್ದು, ಮುಖ್ಯವಾಗಿ ಕುಡಿಯುವ ನೀರಿನ ನಿರ್ವಹಣೆ, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಕೆರೆ ಸಂಜೀವಿನಿ, ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ, ಪಶುಗಳಿಗೆ ಮೇವು ಬ್ಯಾಂಕ್ ಸ್ಥಾಪನೆ ಇತ್ಯಾದಿ ಜನ ಜಾನುವಾರು ನಿರ್ವಹಣೆಯ ಕಾರ್ಯಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲಾಗಿರುತ್ತದೆ.

## ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ:

ಅಂತರ್ಜಲದ ಮಟ್ಟವು ದಿನೇ ದಿನೇ ಕುಸಿಯುತ್ತಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ನದಿ ಮೂಲದಿಂದ ಗ್ರಾಮೀಣ ಪ್ರದೇಶದ ಜನರಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 2008 ಜನವಸತಿಗಳು ಇದ್ದು, ಒಟ್ಟು 31 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯು ಜಾರಿಯಲ್ಲಿದ್ದು, 14 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿದ್ದು, 266 ಜನವಸತಿಗಳಿಗೆ ಶುದ್ಧ





ಕುಡಿಯುವ ನೀರು ಒದಗಿಸಲಾಗುತ್ತಿದೆ. 15 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು ಪ್ರಗತಿಯಲ್ಲಿದ್ದು, ಸದರಿ ಯೋಜನೆಗಳು ಆರ್ಥಿಕ ವರ್ಷದಲ್ಲಿ ಪೂರ್ಣಗೊಳ್ಳಲಿದ್ದು, 15 ಯೋಜನೆಗಳಿಂದ ಒಟ್ಟು 493 ಜನವಸತಿಗಳಿಗೆ ನೀರು ಒದಗಿಸಲಾಗುತ್ತದೆ. ಉಳಿದ 2 ಯೋಜನೆಗಳು ಟೆಂಡರ್ ಹಂತದಲ್ಲಿರುತ್ತದೆ. ಜಿಲ್ಲೆಯಲ್ಲಿ ಇನ್ನೂ 10 ಬಹುಗ್ರಾಮ ಯೋಜನೆಗಳು ಡಿ.ಎಸ್.ಆರ್., ಪಿ.ಎಸ್.ಆರ್., ಹಂತದಲ್ಲಿದ್ದು, ಈ ಯೋಜನೆಯಿಂದ 319 ಜನವಸತಿಗಳು ಸೇರುತ್ತದೆ.

## ಶುದ್ಧ ಕುಡಿಯುವ ನೀರಿನ ಘಟಕ:

ಗ್ರಾಮೀಣ ಪ್ರದೇಶದಲ್ಲಿನ ಬೋರ್‌ವೆಲ್‌ಗಳ ನೀರಿನಲ್ಲಿ ಆರ್ಸೇನಿಕ್, ಅಧಿಕ ಫ್ಲೋರೈಡ್ ಅಥವಾ ಒಂದಕ್ಕಿಂದ ಹೆಚ್ಚು ರಾಸಾಯನಿಕ ಕಲುಷಿತೆಯಿಂದ ಕೂಡಿರುವ ಮತ್ತು ಪರ್ಯಾಯ ಸುರಕ್ಷಿತ ಕುಡಿಯುವ ನೀರಿನ



ಜನಮೂಲವಿರದ ಹಾಗೂ ಹಾನಿಕಾರಕ ಸೂಕ್ಷ್ಮಾಣು ಜೀವಿಗಳನ್ನು ಹೊಂದಿರುವ ಜನವಸತಿ ಪ್ರದೇಶಗಳಲ್ಲಿ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ಒಟ್ಟು 364 ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಸರ್ಕಾರದಿಂದ ಅನುಮೋದನೆ ಆಗಿರುತ್ತದೆ. ಇದುವರೆವಿಗೂ 212 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿದ್ದು, 204 ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸುತ್ತಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಹತ್ತು ಪೈಸೆಗೆ ಒಂದು ಲೀಟರ್ ಶುದ್ಧ ಕುಡಿಯುವ ನೀರು ಒದಗಿಸಲಾಗುತ್ತಿದೆ.

## ಕೆರೆ ಸಂಜೀವಿನಿ:



ಬರಪೀಡಿತ ಪ್ರದೇಶಗಳಲ್ಲಿ ಆಯ್ದ ಕೆರೆಗಳನ್ನು ಗುರುತಿಸಿ ಸದರಿ ಕೆರೆಗಳಲ್ಲಿ ಹೂಳು ತೆಗೆಯುವ ಉದ್ದೇಶದಿಂದ ಕೆರೆ ಸಂಜೀವಿನಿ-1 ಯೋಜನೆಯಲ್ಲಿ ಜಿಲ್ಲೆಯ ಮೈಸೂರು ಮತ್ತು ಕೆ.ಆರ್.ನಗರ ತಾಲ್ಲೂಕು ಹೊರತುಪಡಿಸಿ ಉಳಿದ 5 ತಾಲ್ಲೂಕುಗಳಲ್ಲಿ ಕೆರೆಗಳಲ್ಲಿ ಹೂಳು ತೆಗೆಯಲು ಪ್ರತಿ ತಾಲ್ಲೂಕಿಗೆ ತಲಾ ರೂ 25.00 ಲಕ್ಷಗಳ ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 21 ಕೆರೆಗಳ ಹೂಳೆತ್ತುವ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ.

ಕೆರೆ ಸಂಜೀವಿನಿ-2 ಯೋಜನೆಯಡಿಯಲ್ಲಿ ಜಿಲ್ಲೆಯ ಎಲ್ಲಾ 7 ತಾಲ್ಲೂಕುಗಳಿಗೆ ತಲಾ ರೂ 18.00 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 41 ಕೆರೆಗಳ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.






### ಮೇವು ಬ್ಯಾಂಕ್‌ಗಳ ಸ್ಥಾಪನೆ:

ಮೈಸೂರು ಜಿಲ್ಲೆಯಲ್ಲಿ ಸುಮಾರು 5,95,000 ಜಾನುವಾರುಗಳಿದ್ದು, ಇವುಗಳಿಗೆ ಮೇವಿಗೆ ತೊಂದರೆ ಆಗದಂತೆ 1500 ಟನ್ ಮೇವನ್ನು ಖರೀದಿಸಿ ಜಿಲ್ಲೆಯ ಎಲ್ಲಾ ಹೋಬಳಿ ಕೇಂದ್ರಗಳ ಒಟ್ಟು 28 ಸ್ಥಳಗಳಲ್ಲಿ 1385 ಟನ್ ಮೇವನ್ನು ವಿತರಿಸಲಾಗಿದೆ.

### ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:

ಸ್ವ ಇಚ್ಛೆಯಿಂದ ದೈಹಿಕ ಶ್ರಮದ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬಕ್ಕೆ ಆರ್ಥಿಕ ವರ್ಷದಲ್ಲಿ 100 ದಿನಗಳ ಖಾತರಿ ಉದ್ಯೋಗ ನೀಡುವುದು, ಉದ್ಯೋಗ ನೀಡುವುದರ ಮೂಲಕ ದೀರ್ಘಕಾಲದ ಬಾಳಿಕೆ ಬರುವಂತಹ ಸಮುದಾಯ ಆಸ್ತಿಗಳ ನಿರ್ಮಾಣ ಮಾಡುವುದು, ಗ್ರಾಮೀಣ ಬಡವರ ಜೀವನೋಪಾಯದ ಆಧಾರಗಳನ್ನು ಬಲಪಡಿಸುವುದಲ್ಲದೆ ಪರಿಸರ ಸಂರಕ್ಷಣೆಗೆ ಒತ್ತು, ಗ್ರಾಮೀಣ ಮಹಿಳೆಯರ ಸಬಲೀಕರಣ, ಕೂಲಿಗಾಗಿ ವಲಸೆ ಹೋಗುವುದನ್ನು ತಪ್ಪಿಸುವುದಲ್ಲದೆ ಕುಟುಂಬಕ್ಕೆ ಸಾಮಾಜಿಕ ಭದ್ರತೆ ಒದಗಿಸುವುದು ಎಂ.ಜಿ.ಎನ್.ಆರ್.ಇ.ಜಿ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಬರ ಹಿನ್ನಲೆಯಲ್ಲಿ ಜಿಲ್ಲೆಗೆ ಒಟ್ಟು 32,64,089 ಮಾನವ ದಿನಗಳನ್ನು ಸೃಜಿಸಲು ಸರ್ಕಾರವು ಗುರಿ ನಿಗಧಿಪಡಿಸಿದ್ದು, ಒಟ್ಟಾರೆ 23,135 ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಿಯಾ ಯೋಜನೆ ರೂಪಿಸಲಾಗಿತ್ತು.

ಅದರಲ್ಲಿ ಬರ ನಿರ್ವಹಣೆಗಾಗಿ 7438 ಕುರಿ ದನದದೊಡ್ಡಿ, 87 ಕೆರೆ ಅಭಿವೃದ್ಧಿ, 356 ಕೊಳವೆಬಾವಿ ಮರು ಪೂರಣಾ ಘಟಕಗಳು, 1776 ಜಾನುವಾರುಗಳ ಕುಡಿಯುವ ನೀರಿನ ತೊಟ್ಟಿಗಳು, 356 ಕೊಳವೆಬಾವಿ ಮರುಪೂರಣಾ ಘಟಕಗಳು, 191 ಕೃಷಿ ಹೊಂಡಗಳನ್ನು ಹಾಗೂ 6 ಬಹು ಕಮಾನು ತಡೆಗೋಡೆಗಳನ್ನು ನಿರ್ಮಾಣ ಮಾಡಲಾಗಿದೆ. ಒಟ್ಟು 26,65,092 ಮಾನವ ದಿನಗಳನ್ನು ಸೃಜಿಸಲಾಗಿದೆ.

ಈ ರೀತಿ ಮೈಸೂರು ಜಿಲ್ಲೆಯಲ್ಲಿ ಬಂದೊದಗಿದ ಅಕಾಲಿಕ ಬರವನ್ನು ಸರ್ಕಾರದ ನೆರವಿನೊಂದಿಗೆ ಜಿಲ್ಲಾಡಳಿತ ಹಾಗು ಜಿಲ್ಲಾ ಪಂಚಾಯತ್ ಮಾರ್ಗದಶನದಲ್ಲಿ ಎಲ್ಲಾ ಇಲಾಖೆಗಳ ಸಹಕಾರದೊಂದಿಗೆ ಬರದ ಪ್ರಭಾವ ರೈತರಿಗೆ ತಟ್ಟದಂತೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದೆ. ಈ ಬಗ್ಗೆ ಮೈಸೂರು ಜಿಲ್ಲೆಯ ಎಲ್ಲಾ ರೈತರೂ ಹೆಮ್ಮೆ ಪಡುತ್ತಾರೆ. ■



ಕೆ. ಸೋಮಯ್ಯ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಬನ್ನಿಕುಪ್ಪೆ ಗ್ರಾಮ ಪಂಚಾಯಿತಿ
ಹುಣಸೂರು ತಾಲ್ಲೂಕು

# ಗ್ರಾಮೀಣ ಜನರ ಭರವಸೆಯ ಬೆಳಕಾಗಿ ಬನ್ನಿಕುಪ್ಪೆ ಗ್ರಾಮ ಪಂಚಾಯಿತಿ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ವ್ಯಾಪ್ತಿಯ ಬನ್ನಿಕುಪ್ಪೆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಜನರಿಗೆ ಇಂತಹ ಮೂಲಭೂತ ಸೌಕರ್ಯಗಳು ಕೊರತೆಯಿವೆ ಎಂಬ ಸಮಸ್ಯೆಯೇ  ಇಲ್ಲ ಕಾಲಕಾಲಕ್ಕೆ ತಕ್ಕಂತೆ ಅನುಕ್ರಮವಾಗಿ ಗ್ರಾಮೀಣ ಜನರ ಅವಶ್ಯಕತೆಗಳಿಗೆ ಪೂರಕವಾಗಿ ಗ್ರಾಮ ಪಂಚಾಯಿತಿಯ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಪಂದಿಸುತ್ತಾ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಗ್ರಾಮೀಣರು ಸಹ ಸಹಕರಿಸುತ್ತಿದ್ದಾರೆ.




**150 ವರ್ಷಗಳಿಂದ ತೆರೆದಿದ್ದ ಬಾವಿಯನ್ನು ಮುಚ್ಚಿಸಿರುವುದು ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು. ಸರ್ಕಾರಿ ಒತ್ತುವರಿಗಳನ್ನು ತೆರವು ಗೊಳಿಸಿರುವುದು. ಒಟ್ಟಾರೆಯಾಗಿ ಆ ಗ್ರಾಮದಲ್ಲಿ ಯಾವುದೇ ರೀತಿಯ ಸಾರ್ವಜನರಿಗೆ ಸಮಸ್ಯೆಯಾಗದ ರೀತಿಯಲ್ಲಿ ಕ್ರಮಾನುಗತ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.**

## ಸಂಚಾರಿ ವಾಹನದಿಂದ ಜಾಗೃತಿ ಜಾಥಾ:

70 ನೇ ಸ್ವಾತಂತ್ರ್ಯೋತ್ಸವ ಪ್ರಯುಕ್ತ ಬನ್ನಿಕುಪ್ಪೆ ಸರ್ಕಾರಿ ಪ್ರೌಢಶಾಲೆ ಅವರಣದಲ್ಲಿ ಸರ್ಕಾರದ ಜನಪ್ರಿಯ ಯೋಜನೆಗಳು ಮತ್ತು ಕಾರ್ಯಕ್ರಮಗಳ ಕುರಿತಾದ ಸಂಚಾರಿ ಅರಿವು ವಾಹನದ ಮೂಲಕ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ನೀಡಲಾಯಿತು ಅದರಂತೆ ಅನ್ನಭಾಗ್ಯ, ಕ್ಷೀರಭಾಗ್ಯ ಹಾಗೂ ಗ್ರಾಮ ಪಂಚಾಯಿತಿಗಳ ಮೂಲಕ ಅನುಷ್ಠಾನವಾಗುತ್ತಿರುವ ಬಾಪೂಜಿ 100 ಸೇವೆಗಳ ಬಗ್ಗೆಯೂ ಸಹ ಮಾಹಿತಿ ನೀಡಲಾಯಿತು

## ಗ್ರಾಮೀಣರ ಪತ್ರಗಳ ಅಲೆದಾಟಕ್ಕೆ ಮುಕ್ತಿ:

ಗ್ರಾಮೀಣ ಭಾಗದ ಜನರು ದಿನನಿತ್ಯದ ವ್ಯವಹಾರದ ನಿಮಿತ್ತ ಹತ್ತಾರು ಮೈಲುಗಳನ್ನು ಕ್ರಮಿಸಿ ಹೋಬಳಿ ಅಥವಾ ತಾಲ್ಲೂಕು ಕೇಂದ್ರಗಳಿಗೆ ಅಲೆಯಬೇಕಾಗಿತ್ತು. ಇದನ್ನು ತಪ್ಪಿಸುವ ಉದ್ದೇಶದಿಂದ ಗ್ರಾಮ ಪಂಚಾಯಿತಿ ಕಛೇರಿಯಲ್ಲಿಯೇ ಬಾಪೂಜಿ ಸೇವಾ ಕೇಂದ್ರವನ್ನು



ತೆರೆಯಲಾಗಿದ್ದು ಇಲ್ಲಿ ಆರ್.ಟಿ.ಸಿ, ವಾಸಸ್ಥಳ ದೃಢೀಕರಣ, ಜನನ ಮತ್ತು ಮರಣ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ, ವಲಸೆ ಪ್ರಮಾಣ ಪತ್ರ, ಸಣ್ಣ ಹಿಡುವಳಿದಾರರ ಪ್ರಮಾಣ ಪತ್ರ ಇತ್ಯಾದಿ ದಾಖಲಾತಿಗಳನ್ನು ನೀಡುತ್ತಿದ್ದು ಸಾರ್ವಜನಿಕರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

## ಗ್ರಾಮ ಸಂಚಾರ ಹಲವು ಪರಿಹಾರ:

ಈ ವಿನೂತನ ಕಾರ್ಯಕ್ರಮದಡಿ ಬನ್ನಿಕುಪ್ಪೆ ಗ್ರಾಮ ಪಂಚಾಯಿತಿ ವತಿಯಿಂದ ವಾರದಲ್ಲಿ ಕನಿಷ್ಠ ಮೂರು ದಿನಗಳು ಕ್ಷೇತ್ರ ಭೇಟಿ ನಡೆಸಿ ಸಾರ್ವಜನಿಕರ ಕುಡಿಯುವ ನೀರು, ಬೀದಿದೀಪ, ಸ್ವಚ್ಛತೆ, ನ್ಯಾಯಬೆಲೆ ಅಂಗಡಿಗಳ ಸಮಸ್ಯೆಗಳನ್ನು ಪರಿಶೀಲಿಸಿ ಸಿಬ್ಬಂದಿಯೊಡನೆ ಹಾಗೂ ಜನಪ್ರತಿನಿಧಿಗಳೊಡನೆ ಸಮಾಲೋಚಿಸಿ ಸ್ಥಳದಲ್ಲಿಯೇ ಪರಿಹಾವನ್ನು ಕಂಡುಕೊಳ್ಳುವ ಕಾರ್ಯಕ್ರಮವು ಇದಾಗಿದ್ದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ

## ಕುಡಿಯುವ ನೀರಿನ ವಾಲ್ವ್‌ಗಳಿಗೆ ಸಿಮೆಂಟ್ ಚೌಕಟ್ಟು ನಿರ್ಮಾಣ:

ಬನ್ನಿಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 11 ಗ್ರಾಮಗಳಿದ್ದು, 84 ಕುಡಿಯುವ ನೀರಿನ ವಾಲ್ವ್‌ಗಳಿರುತ್ತವೆ. ಪ್ರತಿ ತಿಂಗಳು ವಾಲ್ವ್ ಗಳನ್ನು ಸ್ವಚ್ಛಮಾಡುವಾಗ ಕಸಕಡ್ಡಿಗಳು ಹಾಗೂ ಕೆಲವೊಮ್ಮೆ ಹಾವಿನಂತಹ ವಿಷಯುಕ್ತ ಸರೀಸೃಪಗಳು ಕಣ್ಣಿಗೆ ಕಾಣದೇ ನೀರುಗಂಟಿಗಳು ಕೈಯನ್ನೇ ಕಳೆದುಕೊಂಡಿದ್ದಾರೆ. ಈ ನಿದರ್ಶನಗಳನ್ನು ಕೇಳಿ ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿಯೊಡನೆ ಚರ್ಚಿಸಿ ಗ್ರಾಮ ಪಂಚಾಯಿತಿ ನಿಧಿಯಿಂದ ರೂ 85 ಸಾವಿರಗಳ ಮೊತ್ತದಲ್ಲಿ ಒಂದು ತಿಂಗಳಲ್ಲಿಯೇ 84 ಕುಡಿಯುವ ನೀರಿನ ವಾಲ್ವ್‌ಗಳಿಗೆ ಸಿಮೆಂಟ್ ಚೌಕಟ್ಟು ನಿರ್ಮಾಣ ಮಾಡಲಾಯಿತು. ಈಗ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಸಂಬಂಧಪಟ್ಟ ನೀರುಗಂಟಿಗಳು ಸ್ವಚ್ಛಗೊಳಿಸಿ ವರದಿ ನೀಡುವ ಅಭ್ಯಾಸವನ್ನು ಇಟ್ಟು ಕೊಂಡಿರುತ್ತಾರೆ ಮತ್ತು ಸಾರ್ವಜನಿಕರಿಗೆ ಪರಿಶುದ್ಧ ಕುಡಿಯುವ ನೀರನ್ನು ಒದಗಿಸಲು ಇದು ಸಹಕಾರಿಯಾಗಿದೆ.

## ನಮ್ಮ ನಡಿಗೆ ಬಯಲು ಶೌಚ ಮುಕ್ತದೆಡೆಗೆ:

ನಮ್ಮ ನಡಿಗೆ ಬಯಲು ಶೌಚ ಮುಕ್ತದೆಡೆಗೆ ಎಂಬ ಪರಿಕಲ್ಪನೆಯೊಡನೆ ಒಟ್ಟು 619 ಶೌಚಾಲಯಗಳನ್ನು ಬನ್ನಿಕುಪ್ಪೆ ಗ್ರಾಮ ಪಂಚಾಯಿತಿಯು ಮಾರ್ಚ್ 2017 ಯೊಳಗೆ ನಿರ್ಮಿಸುವ ಗುರಿಯನ್ನು ಹೊಂದಿತ್ತು ಆದರೆ ಆಶ್ಚರ್ಯವೆಂಬಂತೆ ಗ್ರಾಮ ಪಂಚಾಯಿತಿಯು ಕೈಗೊಂಡ ಅರಿವು ಅಭಿಯಾನ ಕಾರ್ಯಕ್ರಮಗಳು, ಬೀದಿನಾಟಕಗಳು,




ಜಾಥಾಗಳು, ಗ್ರಾಮ ವಾಸ್ತವ್ಯ ಹಾಗೂ ಗ್ರಾಮ ಸಭೆಗಳ ಮೂಲಕ ನೀಡಿದ ಅರಿವಿನಿಂದಾಗಿ ನವೆಂಬರ್ 2016ರ ಅಂತ್ಯಕ್ಕೆ ನಡೆದ ವಿಶ್ವ ಬಯಲು ಶೌಚಮುಕ್ತ ಕಾರ್ಯಕ್ರಮದ ಅವದಿಗೆ 5 ಗ್ರಾಮಗಳನ್ನು ಬಯಲು ಶೌಚಮುಕ್ತ ಗ್ರಾಮಗಳನ್ನಾಗಿ ಘೋಷಣೆ ಮಾಡಿದ್ದಲ್ಲದೇ 498 ಶೌಚಾಲಯಗಳನ್ನು ನಿರ್ಮಿಸಿ ಶೇ.92 ರಷ್ಟು ಪ್ರಗತಿ ಸಾಧಿಸಿ ಉಳಿಕೆ ಗುರಿಯನ್ನು ಕೆಲವೇ ದಿನಗಳಲ್ಲಿ ಮುಗಿಸುವ ಪ್ರಯತ್ನಕ್ಕೆ ಮುಂದಾಗಿದೆ.

ಬನ್ನಿಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 12 ಅಂಗನವಾಡಿ ಕೇಂದ್ರಗಳಿದ್ದು 11 ಕೇಂದ್ರಗಳು ಸರ್ಕಾರಿ ಕಟ್ಟಡದಲ್ಲಿ ನಡೆಯುತ್ತಿದ್ದು ಇವುಗಳಿಗೆಲ್ಲಾ ಪ್ರಯೋಕತ್ವ ಮತ್ತು ಸರ್ಕಾರದ ಕಿರು ಅನುದಾನದಡಿ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣಕ್ಕೆ ಬಣ್ಣ ಅಚ್ಚಿಸಿ ಪ್ರಾಣಿ ಪಕ್ಷಿಗಳ ಹಾಗೂ ಸುಂದರ ಪರಿಸರದ ಚಿತ್ರಗಳನ್ನು ಕಟ್ಟಡದ ಎರಡು ಭಾಗದಲ್ಲಿ ಬಿಡಿಸಿ ಮಕ್ಕಳು ಶಾಲಾ ಪೂರ್ವ ಬಹಳ ಸ್ವಚ್ಛಂದವಾಗಿ ಕಲಿಯಲು ಪೂರಕ ವಾತಾವರಣ ಕಲ್ಪಸಿದೆ.



ಕೋಟಿ ವೃಕ್ಷ ಅದೋಲನದಡಿ ವಿಶ್ವ ಪರಿಸರ ದಿನದಂದು ಗೌರವಾನ್ವಿತ ಜನಪ್ರತಿನಿದಿಗಳೊಡನೆ ಒಂದು ಸಾವಿರಕ್ಕೂ ಹೆಚ್ಚಿನ ಗಿಡಗಳನ್ನು ಸರ್ಕಾರಿ ಕಟ್ಟಡಗಳ ಸುತ್ತಮುತ್ತ ಹಾಗೂ ಸಾರ್ವಜನಿಕ ಕೆರೆಗಳ ಅಜುಬಾಜು ನೆಡಲಾಯಿತು ಮತ್ತು ಬೀಜದ ಉಂಡೆಗಳನ್ನು(ಸೀಡ್ ಬಾಲ್) ಭೂಮಿಯಲ್ಲಿ ಹಾಕುವ ಮೂಲಕ 6 ಸಾವಿರಕ್ಕೂ ಹೆಚ್ಚಿನ ಗಿಡಗಳನ್ನು ನೆಡುವುದರ ಮೂಲಕ ನಮ್ಮೂರಾ ಹಸಿರಾಗಿಸೋಣ



ಕಾರ್ಯಕ್ರಮಕ್ಕೆ ಚಾಲನೆ ನೀಡಿ ಪರಿಸರ ಸಂರಕ್ಷಣೆಗೆ ವಿಶೇಷ ಒತ್ತು ನೀಡಲಾಗಿದೆ.

ಗ್ರಾಮ ಪಂಚಾಯಿತಿಯ ಕಾರ್ಯಕ್ರಮಗಳ ಅನುಷ್ಠಾನಗಳನ್ನು ಅಧ್ಯಯನ ನಡೆಸುವ ಸಂಬಂಧ ನೆರೆಯ ಮಧ್ಯ ಪ್ರದೇಶ ರಾಜ್ಯದಿಂದ ಅಂತರ್ ರಾಜ್ಯ ಅಧಿಕಾರಿ ಮತ್ತು ಜನಪ್ರತಿನಿದಿಗಳ ತಂಡವು ಇತ್ತೀಚೆಗೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಮ-ನರೇಗಾ, ಎಸ್.ಬಿ.ಎಂ, ವಸತಿ ಯೋಜನೆ, ಬಾಪೂಜಿ ಸೇವಾ ಕೇಂದ್ರದ 100 ಸೇವೆಗಳು, 14ನೇ ಹಣಕಾಸು ಯೋಜನೆ ಹಾಗೂ ಗ್ರಾಮಸಭೆ, ವಾರ್ಡ್ ಸಭೆಗಳ ಯಶಸ್ವಿ ಅನುಷ್ಠಾನದ ಬಗ್ಗೆ ಮಾಹಿತಿ ಪಡೆದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವ ಯೋಜನೆಯಡಿ ಸುಮಾರು 50 ವರ್ಷಗಳಿಂದ ಯಾವುದೇ ನಿವೇಶನ ಹಾಗೂ ವಸತಿ ಇಲ್ಲದೇ ಗುಡಿಸಲಿನಲ್ಲಿ ವಾಸಿಸುತ್ತಿದ 7 ಕುಟುಂಬಗಳನ್ನು ಪತ್ತೆ ಹಚ್ಚಿ ಸಮಾಜದ ಮುಖ್ಯ ವಾಹಿನಿಗೆ ತರಲು ಶ್ರಮಿಸಲಾಗಿರುತ್ತದೆ. ಇವರಿಗೆ ಗ್ರಾಮ ಪಂಚಾಯಿತಿ ವತಿಯಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಿದೆ. ■

## ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು

### 1 ನಮ್ಮ ಗ್ರಾಮ ನಮ್ಮ ಯೋಜನೆ

**ಗ್ರಾಮ ಪಂಚಾಯಿತಿಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಂದಿನ 5 ವರ್ಷಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಅಭಿವೃದ್ಧಿ ಕಾಯಕ್ರಮಗಳನ್ನು ಕೈಗೊಳ್ಳಲು ಸೂಕ್ತ ಕ್ರಮ ವಹಿಸಲಾಗಿದೆ**

### 2 ನಿಮ್ಮ ಪತ್ರ ನಮ್ಮ ಉತ್ತರ

**ಈ ಕಾರ್ಯಕ್ರಮದಡಿ ಸಾರ್ವಜನಿಕರಿಂದ ಸಂಬಂಧಪಟ್ಟ ಇಲಾಖೆಗಳ ಸಮಸ್ಯೆಗಳನ್ನು ಒಳಗೊಂಡ ಪತ್ರಗಳನ್ನು ಸ್ವೀಕರಿಸಿ ಅಯಾ ಇಲಾಖೆಗಳಿಗೆ ತಲುಪಿಸುವುದರ ಮೂಲಕ ಪಾರದರ್ಶಕ ಆಡಳಿತಕ್ಕೆ ಚಾಲನೆ ನೀಡಿದೆ.**

### 3 ಆಹಾರ ಅದಾಲತ್

**2013 ರ ಆಹಾರ ಭದ್ರತಾ ಕಾಯಿದೇಯಡಿ ನ್ಯಾಯ ಬೆಲೆ ಅಂಗಡಿಗಳಲ್ಲಿ ವಿತರಿಸುವ ಪಡಿತರದ ಅಳತೆ, ಗುಣಮಟ್ಟ ಹಾಗೂ ಪಡಿತರದಾರರ ಇತರೆ ಸಮಸ್ಯೆಗಳನ್ನು ಪರಿಶೀಲಿಸಿ ವರದಿ ಮಾಡುವ ಆಹಾರ ಅದಾಲತ್ ಕಾರ್ಯಕ್ರಮವನ್ನು ಪ್ರತಿ ತಿಂಗಳು 7ನೇ ದಿನಾಂಕದಂದು ನಡೆಸಿ ನ್ಯೂನತೆಗಳನ್ನು ಸರಿಪಡಿಸಲು ಕ್ರಮವಹಿಸಿದೆ.**

## ಬನ್ನಿಕುಪ್ಪೆ ಗ್ರಾಮ ಪಂಚಾಯಿತಿಯ 2016-17 ನೇ ಸಾಲಿನ ಮಾರ್ಚ್ 2017ರ ಅಂತ್ಯಕ್ಕೆ ಬೇಡಿಕೆ ಮತ್ತು ವಸೂಲಾತಿ ವಿವರ

| | |
|---|---|
| ಮನೆ, ನಿವೇಶನದ, ಕುಡಿಯುವ ನೀರಿನ ಬೇಡಿಕೆ | ರೂ. 1900000 (ಲಕ್ಷಗಳು) |
| ಮನೆ, ನಿವೇಶನದ, ಕುಡಿಯುವ ನೀರಿನ ವಸೂಲಾತಿ | ರೂ. 1650000 (ಲಕ್ಷಗಳು) |
| ಶೇಕಡವಾರು ವಸೂಲಾತಿ | 85% |
| ನೀರಿನ ಒಟ್ಟು ಬೇಡಿಕೆ | ರೂ. 350000 (ಲಕ್ಷಗಳು) |
| ನೀರಿನ ಒಟ್ಟು ವಸೂಲಾತಿ | ರೂ. 250000 (ಲಕ್ಷಗಳು) |
| ಶೇಕಡವಾರು ವಸೂಲಾತಿ | 80% |

ಇದಲ್ಲದೆ 150 ವರ್ಷಗಳಿಂದ ತೆರೆದಿದ್ದ ಬಾವಿಯನ್ನು ಮುಚ್ಚಿಸಿರುವುದು ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು. ಸರ್ಕಾರಿ ಒತ್ತುವರಿಗಳನ್ನು ತೆರವು ಗೊಳಿಸಿರುವುದು. ಒಟ್ಟಾರೆಯಾಗಿ ಆ ಗ್ರಾಮದಲ್ಲಿ ಯಾವುದೇ ರೀತಿಯ ಸಾರ್ವಜನರಿಗೆ ಸಮಸ್ಯೆಯಾಗದ ರೀತಿಯಲ್ಲಿ ಕ್ರಮಾನುಗತ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.

ಲೇಖನ



ಮುರಳಿ.ಕೆ

ಸಂಶೋಧನ ಅಧಿಕಾರಿ
ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ (ಅ.ನ.ಸಾ.ರಾ.ಗ್ರಾ ಮತ್ತು ಪಂ. ರಾ.ಸಂಸ್ಥೆ) ಬೆಂಗಳೂರು.
Mobile: +91 8867337909

# ಗ್ರಾಮ ಪಂಚಾಯತಿ ಸ್ಥಾಯಿ ಸಮಿತಿಗಳು ಮತ್ತು ಉಪ ಸಮಿತಿಗಳು

ಗ್ರಾಮ ಪಂಚಾಯಿತಿಗಳು ತನ್ನ ಸಾಮಾನ್ಯ ಸಭೆಯ ವಿಷಯಗಳ ಕಾರ್ಯಸೂಚಿಗಳನ್ನು ಚರ್ಚಿಸಲು ಎಲ್ಲ ವಿಷಯಗಳನ್ನು ಸಮಗ್ರವಾಗಿ ಪರಮರ್ಶಿಸಿ ಅದರ ಸಾಧಕ ಬಾಧಕಗಳನ್ನು ವಿವರವಾಗಿ ಚರ್ಚಿಸಿ ಯೋಗ್ಯ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಈ ಕಾರಣದಿಂದಾಗಿ ಚುನಾಯಿತ ಸದಸ್ಯರ ಜ್ಞಾನ ಮತ್ತು ಅವರ ಕ್ಷೇತ್ರದ ಅನುಭವಗಳ ಅಧಾರದ ಮೇಲೆ ಗ್ರಾಮ ಪಂಚಾಯಿತಿಗಳ ಪ್ರಾಥಮಿಕ ಹಂತದಲ್ಲಿ ವಿಮರ್ಶಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ ಆಧಿನಿಯಮ 1993 ತಿದ್ದುಪಡಿ 2015 ರಡಿ ಸ್ಥಾಯಿ ಸಮಿತಿಗಳನ್ನು ಈ ಮೊದಲಿದ್ದ ಉತ್ಪಾದನಾ ಸಮಿತಿ, ಸೌಕರ್ಯ ಸಮಿತಿಯನ್ನು ತಿದ್ದುಪಡಿ ಮಾಡಿ ಈ ಕೆಳಕಂಡಂತೆ ಹೊಸ ಸ್ಥಾಯಿ ಸಮಿತಿಗಳನ್ನು ರಚನೆ ಮಾಡಲು ಅವಕಾಶ ಮಾಡಿಕೊಡಲಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 61 ರಡಿ ಸ್ಥಾಯಿ ಸಮಿತಿ ಹಾಗೂ ಆವಶ್ಯಕತೆಗೆ ಅನುಗುಣವಾಗಿ ಇತರೆ ಉಪಸಮಿತಿಗಳನ್ನು ಪ್ರಕರಣ 61ಎ ರಡಿ ರಚಿಸಬಹುದಾಗಿದೆ.

## ಸ್ಥಾಯಿ ಸಮಿತಿಗಳು

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 61ರಡಿ ಈ ಕೆಳಕಂಡ ಮೂರು ಸ್ಥಾಯಿ ಸಮಿತಿಗಳನ್ನು ರಚಿಸಲಾಗಿದೆ.**

1. ಸಾಮಾನ್ಯ ಸ್ಥಾಯಿ ಸಮಿತಿ
2. ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ
3. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

## ಸ್ಥಾಯಿ ಸಮಿತಿ ರಚನೆ

ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಚುನಾವಣೆ ಮೂಲಕ ಸ್ಥಾಯಿ ಸಮಿತಿ ರಚಿಸಬೇಕು. ಸ್ಥಾಯಿ ಸಮಿತಿ ಸದಸ್ಯರ ಚುನಾವಣೆಯನ್ನು ಗ್ರಾಮ ಪಂಚಾಯಿತಿ ಸದಸ್ಯರ ಸಾರ್ವತ್ರಿಕ ಚುನಾವಣೆ ತರುವಾಯ ಅಥವಾ ಅದರ ಪುನರ್ ರಚನೆಯಾದ ಮೇಲೆ ಅಥವಾ ಈ ಅಧಿನಿಯಮದಡಿ ಸ್ಥಾಪಿತವಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯಿ ಸಮಿತಿಯ ಸದಸ್ಯರ ಹುದ್ದೆಯ ಅವಧಿಯು ಮುಕ್ತಾಯವಾಗುವುದಕ್ಕೆ ಪೂರ್ವದಲ್ಲಿ ರಚನೆ ಮಾಡಬೇಕು ಎಂದು ಅಧಿನಿಯಮದಲ್ಲಿ ವಿವರಿಸಲಾಗಿದೆ.

ಸ್ಥಾಯಿ ಸಮಿತಿಗಳ ಪ್ರತಿಯೊಬ್ಬ ಸದಸ್ಯರ ಹುದ್ದೆಯ ಅವಧಿಯು ಚುನಾವಣೆಯಿಂದ 30 ತಿಂಗಳುಗಳು ಅಥವಾ ಅವರು ಗ್ರಾಮ ಪಂಚಾಯಿತಿ ಸದಸ್ಯರ ಸದಸ್ಯತ್ವ ನಿಂತುಹೋಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯಾಗಿರುತ್ತದೆ.

ಪ್ರತಿಯೊಂದು ಸಮಿತಿಯು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸೇರಿದಂತೆ ಮೂರಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಐದಕ್ಕಿಂತ ಹೆಚ್ಚಿಲ್ಲದಂತೆ ಸದಸ್ಯರನ್ನು ಹೊಂದಿರತಕ್ಕದ್ದು.

**ಪ್ರತಿಯೊಂದು ಸಮಿತಿಯು ರೈತರ ಕ್ಲಬ್‌ಗಳ, ಮಹಿಳಾ ಮಂಡಳಿಗಳ, ಯುವ ಮಂಡಳಿಗಳ ಮತ್ತು ಸರ್ಕಾರವು ಗುರುತಿಸಲಾದ ಇತರೆ ಅಂತಹುದೇ ಮಂಡಳಿಗಳ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು. ಪಂಚಾಯತ್ ಪ್ರದೇಶದಲ್ಲಿರುವ ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಕೋಆಪ್ಟ್ ಮಾಡಿಕೊಳ್ಳಬಹುದು.**

## ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು

ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯ ಪದನಿಮಿತ್ತ ಸದಸ್ಯರು ಮತ್ತು ಅಧ್ಯಕ್ಷರಾಗಿರುತ್ತಾರೆ. ಗ್ರಾಮ ಪಂಚಾಯತಿಯ ಉಪಾಧ್ಯಕ್ಷರು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಸದಸ್ಯರು ಮತ್ತು ಅಧ್ಯಕ್ಷರಾಗಿರುತ್ತಾರೆ. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳ ಚುನಾಯಿತಿ ಸದಸ್ಯರ ಪೈಕಿ ಒಬ್ಬರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸತಕ್ಕದ್ದು.

ಪ್ರತಿಯೊಂದು ಸಮಿತಿಯು ರೈತರ ಕ್ಲಬ್‌ಗಳ, ಮಹಿಳಾ ಮಂಡಳಿಗಳ, ಯುವ ಮಂಡಳಿಗಳ ಮತ್ತು ಸರ್ಕಾರವು ಗುರುತಿಸಲಾದ ಇತರೆ ಅಂತಹುದೇ ಮಂಡಳಿಗಳ ಸದಸ್ಯರನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು. ಪಂಚಾಯತ್ ಪ್ರದೇಶದಲ್ಲಿರುವ ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಕೋಆಪ್ಟ್ ಮಾಡಿಕೊಳ್ಳಬಹುದು.

### ಸ್ಥಾಯಿ ಸಮಿತಿಯ ಪ್ರಕಾರ್ಯಗಳು (ಪ್ರಕರಣ 61)

### ಸಾಮಾನ್ಯ ಸ್ಥಾಯಿ ಸಮಿತಿ

ಕೃಷಿ ಉತ್ಪಾದನೆ, ಪಶುಸಂಗೋಪನೆ ಮತ್ತು ಗ್ರಾಮೀಣ ಕೈಗಾರಿಕೆಗಳು ಮತ್ತು ಬಡತನ ನಿರ್ಮೂಲನೆ ಕಾರ್ಯ-ಕ್ರಮಗಳು, ಶಿಕ್ಷಣ, ಲೋಕೋಪಯೋಗಿ ಕಾಮಗಾರಿಗಳು ಮತ್ತು ಗ್ರಾಮ ಪಂಚಾಯತ್‌ನ ಇತರೆ ಪ್ರಕಾರ್ಯಗಳು, ಸಾರ್ವಜನಿಕ ಕಾಮಗಾರಿಗಳ ಮೇಲ್ವಿಚಾರಣೆ, ಮತ್ತು ಕಾಮಗಾರಿಗಳ ಕಳಪೆ ಗುಣಮಟ್ಟ ಕಾಮಗಾರಿಯ ನಿರ್ವಹಣೆಯಲ್ಲಿ ನಿಧಿಗಳ ಸಣ್ಣಪುಟ್ಟ ಕಳವು ಮತ್ತು ದುರ್ವಿನಿಯೋಗದ ಬಗ್ಗೆ ಗ್ರಾಮಸಭೆಯು ಎತ್ತುವ ದೂರುಗಳ ಮೇಲೆ ತನಿಖೆ ಮಾಡುವುದು ಮತ್ತು ವರದಿ ಮಾಡಿರುವುದು.

### ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ

ಗ್ರಾಮ ಪಂಚಾಯಿತಿಗಳ ಹಣಕಾಸು, ಆಯವ್ಯಯಗಳನ್ನು ರೂಪಿಸುವುದು, ರಾಜಸ್ವವನ್ನು ಹೆಚ್ಚಿಸುವುದಕ್ಕಾಗಿ ಪ್ರಸ್ತಾವನೆಗಳ ಪರಿಶೀಲನೆ, ಸ್ವೀಕೃತಿ ಮತ್ತು ವೆಚ್ಚಗಳ ತ:ಖ್ತೆಗಳ ಪರಿಶೀಲನೆ, ಗ್ರಾಮ ಪಂಚಾಯಿತಿಗಳ ಹಣಕಾಸಿಗೆ ಬಾಧಕವಾಗುವ ಎಲ್ಲಾ ಪ್ರಸ್ತಾವನೆಗಳನ್ನು ಪರಿಗಣಿಸುವುದು ಮತ್ತು ಗ್ರಾಮ ಪಂಚಾಯತಿಗಳ ರಾಜಸ್ವ ಮತ್ತು ವೆಚ್ಚದ ಸಾಮಾನ್ಯ ಮೇಲ್ವಿಚಾರಣೆ ಮತ್ತು ಗ್ರಾಮ ಪಂಚಾಯತ್‌ನ ಯೋಜನೆಗಳ ಅಭಿವೃದ್ಧಿಗೆ ಸಂಬಂಧಿಸಿದ ಯಾವುದೇ ಇತರೆ ಕರ್ತವ್ಯ. ಮಾಹಿತಿ ಮತ್ತು ಅಂಕಿಅಂಶಗಳಿಗೆ ಸಂಬಂಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸುವುದು ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿಯು ನಿರ್ವಹಿಸಬೇಕಾದ ಪ್ರಕಾರ್ಯಗಳಾಗಿರತಕ್ಕದ್ದು.

ಪ್ರತಿಯೊಂದು ಗ್ರಾಮ ಪಂಚಾಯಿತಿಯ ಜನಗಣತಿ, ನಡೆಸಲಾದ ಸಮೀಕ್ಷೆಗಳು, ಸಮುದಾಯ ಸಹಭಾಗಿತ್ವ ಸಮೀಕ್ಷೆ, ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ದತ್ತಾಂಶಗಳು, ಪ್ರಗತಿಯಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ವಿವರಗಳು, ಕೃಷಿ ಪದ್ದತಿಗಳಿಗೆ ಸಂಬಂಧಿಸಿದ ದತ್ತಾಂಶ ಮತ್ತು ರೈತರಿಗೆ ಮುಖ್ಯವಾದ ಇತರ ಮಾಹಿತಿ, ಭೌತಿಕ ಮೂಲಸೌಕರ್ಯ ಸೂಚ್ಯಂಕಕ್ಕೆ ಸಂಬಂಧಿಸಿದ ದತ್ತಾಂಶ ಮತ್ತು ಸಾಮಾನ್ಯವಾಗಿ ಪಂಚಾಯತ್ ರಾಜ್ ಪದ್ಧತಿಗೆ ಸಂಬಂಧಿಸಿದ ಸ್ವತ್ತುಗಳು ಮತ್ತು ಸಂಪನ್ಮೂಲಗಳು ಹಾಗು ವಿಶೇಷವಾಗಿ ಗ್ರಾಮ ಪಂಚಾಯತ್‌ಗೆ ತಮ್ಮ ಯೋಜನಗೆಗಳು ಮತ್ತು ಆಯವ್ಯಯ ವೆಚ್ಚಗಳನ್ನು ಸುಗಮಗೊಳಿಸಲು ಗ್ರಾಮ ಪಂಚಾಯಿತಿಗೆ ನೆರವು ನೀಡುವುದಕ್ಕೆ ಸಂಬಂಧಿಸಿದಂತೆ ದೂರದೃಷ್ಠಿತ್ವ ಮತ್ತು ವಾರ್ಷಿಕ ಯೋಜನೆಗಳು ಇವುಗಳನ್ನು ತಾಳೆ ನೋಡುವುದು ಮತ್ತು ಸಂಗ್ರಹಿಸತಕ್ಕದ್ದು.

### ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು, ಮಹಿಳೆಯರು ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರೆ ಹಿತಾಸಕ್ತಿಗಳ ಸಂವರ್ಧನೆ, ಅಭಿವೃದ್ಧಿಗಾಗಿ ಕೆಲಸ ಮಾಡುವ ಗುರುತರವಾದ ಜವಾಬ್ದಾರಿಯನ್ನು ಈ ಸಮಿತಿಯು ಹೊಂದಿರುತ್ತದೆ. ಸಾಮಾಜಿಕವಾಗಿ ಅನ್ಯಾಯ ಆಗದಂತೆ ಮತ್ತು ಯಾವುದೇ ವಿಧವಾದ ಶೋಷಣೆ ಆಗದಂತೆ ಅಂತಹ ಜಾತಿಗಳು ಮತ್ತು ವರ್ಗಗಳನ್ನು ರಕ್ಷಿಸುವುದು.

ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿಗೆ, ಸಬಲೀಕರಣ, ಹಿತಾಸಕ್ತಿಗೆ ಸಂಬಂಧಪಡುವ ವಿಷಯಗಳನ್ನು ಪರಿಶೀಲಿಸುವುದು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆ ಮತ್ತು ಲೈಂಗಿಕ ಕಿರುಕುಳಗಳಂಥ

ಅಪರಾಧಗಳ ವಿರುದ್ಧ ರಕ್ಷಣೆಯನ್ನು ಒದಗಿಸುವುದು.

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸದಸ್ಯರು – ಅಧ್ಯಕ್ಷರು

ಕಡ್ಡಾಯವಾಗಿ ಒಬ್ಬರು ಮಹಿಳಾ ಸದಸ್ಯರು – ಸದಸ್ಯರು

ಪ.ಜಾ/ಪ.ಪಂ ಸದಸ್ಯರು – ಸದಸ್ಯರು

(ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಪೈಕಿ ಪರಿಶಿಷ್ಟ ಜಾತಿಯ ಸದಸ್ಯರ ಸಂಖ್ಯೆ ಹೆಚ್ಚಿದ್ದರೆ ಪರಿಶಿಷ್ಟ ಜಾತಿಯ ಪೈಕಿ ಒಬ್ಬರನ್ನು, ಪರಿಶಿಷ್ಟ ಪಂಗಡದ ಸಂಖ್ಯೆ ಹೆಚ್ಚಿದ್ದರೆ ಪರಿಶಿಷ್ಟ ಪಂಗಡದ ಸದಸ್ಯರ ಪೈಕಿ ಒಬ್ಬರನ್ನು ಸಮಿತಿಯ ಸದಸ್ಯರಾಗಿ ಇರತಕ್ಕದ್ದು)

ಇತರೆ ಸದಸ್ಯರು – ಸದಸ್ಯರು

## ಉಪ ಸಮಿತಿಗಳ ರಚನೆ (61ಎ)

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ– 61ಎ ಅನ್ವಯ ಗ್ರಾಮ ಪಂಚಾಯತಿಗಳಲ್ಲಿ ಇತರೆ ಸಮಿತಿಗಳ ರಚನೆಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಸ್ಥಳೀಯ ಗ್ರಾಮ ಪಂಚಾಯತ್ ಸದಸ್ಯರು ಈ ಸಮಿತಿಗೆ ಕಡ್ಡಾಯವಾಗಿ ಸದಸ್ಯರಾಗಿರುತ್ತಾರೆ.

ಈ ಸಮಿತಿಯು ಉದ್ದೇಶಿತ ವಿಷಯಕ್ಕೆ ಪಂಚಾಯತ್ ವ್ಯಾಪ್ತಿಯಲ್ಲಿರುವ ತಜ್ಞರನ್ನು, ಸಂಬಂಧಿಸಿದ ಇಲಾಖೆ ಅಧಿಕಾರಿ/ನೌಕರನನ್ನು ಅಥವಾ ಕನಿಷ್ಠ ಎರಡು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಯ ಅಥವಾ ಸ್ಥಳೀಯ ನಿವಾಸಿಗಳನ್ನು ಸಹ ಆಯ್ಕೆ(ಕೋಆಪ್ಟ್) ಮಾಡಿಕೊಳ್ಳಲು ಅಧಿಕಾರ ಹೊಂದಿದೆ. ಈ ಸಹ ಆಯ್ಕೆಯಾದ ಸದಸ್ಯರನ್ನು ಆಹ್ವಾನಿತರೆಂದು ಪರಿಗಣಿಸಬಹುದೇ ಹೊರತು ಸದಸ್ಯರೆಂದು ಪರಿಗಣಿಸತಕ್ಕದಲ್ಲ. ಈ ಸಮಿತಿಯ ಯಾವುದೇ ಸಭೆಗಳಿಗೆ ಗ್ರಾಮ ಪಂಚಾಯತ್ ಅಧ್ಯಕ್ಷರು/ಉಪಾಧ್ಯಕ್ಷರು ಹಾಜರಾಗಬಹುದು. ಗ್ರಾಮ ಪಂಚಾಯಿತಿಗಳಲ್ಲಿ ರಚಿಸಬಹುದಾದ ಕೆಲವು ಉಪಸಮಿತಿಗಳೇಂದರೆ:–

1. ಆಹಾರ ಖಾತ್ರಿ ಸಮಿತಿ
2. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ)
3. ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ
4. ಬಾಲ ವಿಕಾಸ ಸಮಿತಿ
5. ಮಹಿಳೆ ಮತ್ತು ಮಕ್ಕಳ ಸಾಗಣೆ ತಡೆಗಟ್ಟುವ ಮತ್ತು ಪುನರ್ವಸತಿ ಸಮಿತಿ
6. ಜೀವ ವೈವಿಧ್ಯ ನಿರ್ವಹಣಾ ಸಮಿತಿ
7. ವಸತಿ ಸಮಿತಿ
8. ಜಲಾನಯನ ಕಾರ್ಯಕ್ರಮ ಅನುಷ್ಠಾನ ಉಪ ಸಮಿತಿ

## ಸಮಿತಿಯ ಅಧ್ಯಕ್ಷತೆ

ಈ ಸಮಿತಿಯ ಅಧ್ಯಕ್ಷರು/ಉಪಾಧ್ಯಕ್ಷರನ್ನು ಸಮಿತಿಯ ಸದಸ್ಯರೆ ಆಯ್ಕೆ ಮಾಡಬೇಕಾಗಿದೆ.

## ಸಮಿತಿಯ ಕಾರ್ಯವಿಧಾನ

ಈ ಸಮಿತಿಯನ್ನು ಯಾವ ಉದ್ದೇಶಕ್ಕಾಗಿ ನೇಮಕ ಮಾಡಲಾಗಿದೆಯೋ ಅ ಉದ್ದೇಶವನ್ನು ಈಡೇರಿಸಲು ಅಗತ್ಯವಾಗಬಹುದಾದ ಅಧಿಕಾರವನ್ನು ಗ್ರಾಮ ಪಂಚಾಯತಿಗಳು ನೀಡತಕ್ಕದ್ದು. ಸಮಿತಿಯ ಸಭೆಗಳನ್ನು ಗ್ರಾಮ ಪಂಚಾಯತ್ ಸಭೆಗಳನ್ನು ನಡೆಸುವ ರೀತಿಯಲ್ಲಿ/ವಿಧಾನದಂತೆಯೋ ನಡೆಸತಕ್ಕದ್ದು. ಉದ್ದೇಶ ಪೂರ್ಣಗೊಂಡು ಸಮಿತಿಯು ಗ್ರಾಮ ಪಂಚಾಯತ್‌ಗೆ ವರದಿಯನ್ನು ಸಲ್ಲಿಸಿದ ನಂತರ ಸದರಿ ಸಮಿತಿ ರದ್ದಾಗತಕ್ಕದ್ದು. ಈ ಸಮಿತಿಗಳು ಕೈಗೊಳ್ಳುವ ತೀರ್ಮಾನಗಳು ಗ್ರಾಮ ಪಂಚಾಯಿತಿಯ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರಬೇಕು.

ಗ್ರಾಮ ಪಂಚಾಯತ್ ಶಾಸನಬದ್ಧವಾಗಿ ಕಾರ್ಯ ನಿರ್ವಹಿಸಬಹುದಾದ ಯಾವುದೇ ಕಾರ್ಯವನ್ನು ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಥವಾ ಯಾವುದಾದರು ಪ್ರದೇಶದ ವ್ಯಾಪ್ತಿಯಲ್ಲಿ ಕೈಗೊಳ್ಳಲು ಈ ಸಮಿತಿ ಸೂಚಿಸಬಹುದು. ▪

## ಜಂಟಿ ಸಮಿತಿಗಳು

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ ಪ್ರಕರಣ 79 ರಡಿ ಒಂದು ತಾಲ್ಲೂಕಿನೊಳಗಿನ ಅಥವಾ ಒಂದು ಜಿಲ್ಲೆಯಲ್ಲಿ ಎರಡು ಅಥವಾ ಹೆಚ್ಚು ತಾಲ್ಲೂಕುಗಳೊಗಿನ ಎರಡು ಅಥವಾ ಹೆಚ್ಚು ಗ್ರಾಮ ಪಂಚಾಯಿತಿಗಳು ಅಥವಾ ಒಂದು ಪಂಚಾಯತ್ ಮತ್ತು ಒಂದು ಅಥವಾ ಹೆಚ್ಚು ಇತರೆ ಸ್ಥಳೀಯ ಪ್ರಾಧಿಕಾರಗಳು ಅಥವಾ ಶಾಸನಬದ್ಧ ನಿಕಾಯಗಳು, ಅವೆಲ್ಲವುಗಳಿಗೆ ಸಾಮಾನ್ಯವಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಅಥವಾ ಅವುಗಳು ಜಂಟಿಯಾಗಿ ಹಿತಾಸಕ್ತಿಯನ್ನು ಹೊಂದಿರುವ ಅಥವಾ ಅವು ಜಂಟಿಯಾಗಿ ಹೊಣೆಯಾಗಿರುವ ಯಾವುದೇ ಉದ್ದೇಶಕ್ಕಾಗಿ ಅವುಗಳಲ್ಲಿ ಪ್ರತಿಯೊಂದು ಅಂಗೀಕರಿಸಿದ ಅದೇ ರೀತಿಯ ನಿರ್ಣಯದ ಮೂಲಕ ಅಂತಹ ಉದ್ದೇಶಕ್ಕಾಗಿ ಒಂದು ಜಂಟಿ ಸಮಿತಿ ನೇಮಕ ಮಾಡಬಹುದು.**

ಲೇಖನ



ನಿಂಗೇಗೌಡ

ನಿವೃತ್ತ ಪೀಠಾಧಿಕಾರಿ,
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

# ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತದ ನಿರ್ವಹಣೆ ಹಾಗೂ ಕುಂದು ಕೊರತೆಗಳ ಬಗ್ಗೆ ಸಲ್ಲಿಸಲಾಗುವ ದೂರುಗಳಿಗೆ ಸಂಬಂಧಿಸಿದಂತೆ ಇರುವ ನಿಯಮಗಳು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಸರ್ಕಾರದ ಯಶಸ್ಸು, ಸರ್ಕಾರಗಳು ರೂಪಿಸಲಾಗುವ ನೀತಿ ನಿಯಮಗಳನ್ನು, ಜನಪರ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ಹಾಗೂ ಶಿಕ್ಷಣ, ಆರೋಗ್ಯ, ಕೃಷಿ ಮತ್ತು ಉದ್ಯಮ ಕ್ಷೇತ್ರಗಳಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವಲಂಬಿಸಿರುತ್ತದೆ. ಸರ್ಕಾರದ ಈ ಎಲ್ಲಾ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಡಳಿತ ವ್ಯವಸ್ಥೆಯ ಚುಕ್ಕಾಣೆ ಹಿಡಿದಿರುವ ಅಧಿಕಾರಿಗಳು ಮತ್ತು ನೌಕರರುಗಳ ಸಹಕಾರ ಅಗತ್ಯವಿರುತ್ತದೆ. ಆದುದರಿಂದ ನಮ್ಮ ಸಂವಿಧಾನದ ಪರಿಚ್ಛೇದ 309 ರಲ್ಲಿ ಸರ್ಕಾರಗಳು ತನ್ನ ಆಡಳಿತ ವ್ಯವಸ್ಥೆಗಾಗಿ "ಶಿಸ್ತುಬದ್ಧ ನಾಗರೀಕಾ ಸೇವಾ" ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವ ಬಗ್ಗೆ ಸ್ಪಷ್ಟವಾದ ವಿವರಣೆ ನೀಡಿರುತ್ತದೆ. ಸಂವಿಧಾನದ ಪರಿಚ್ಛೇದ 310 ರನ್ವಯ ಯಾವುದೇ ಸರ್ಕಾರಿ ಅಧಿಕಾರಿ ಮತ್ತು ನೌಕರರು ಸರ್ಕಾರದ ಇಚ್ಚೆಯ ಮೇರೆಗೆ ಸೇವೆಯಲ್ಲಿ ಮುಂದುವರೆಯಬೇಕಾಗುತ್ತದೆ. ಸರ್ಕಾರ ಮತ್ತು ನೌಕರರ ಸಂಬಂಧ ಖಾಸಗಿ ವ್ಯವಸ್ಥೆಯಲ್ಲಿನ "ಮಾಲೀಕ ಮತ್ತು ಸೇವಕ" ನ ಸಂಬಂಧಕ್ಕೆ ಸಮನಾಗಿರುತ್ತದೆ. ಖಾಸಗಿ ವ್ಯವಸ್ಥೆಯಲ್ಲಿ ಈ ಸಂಬಂಧ ಅಲಿಖಿತ ಒಪ್ಪಂದವೆನಿಸಿದರೆ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಶಾಸನಬದ್ಧ ನಿಯಮಗಳಿಗೆ ಒಳಪಟ್ಟಿರುತ್ತದೆ. "ಮಾಲೀಕ ಮತ್ತು ಸೇವಕ" ನ ಸಂಬಂಧದ ವ್ಯವಸ್ಥೆಯಿದ್ದರು ಸಹ ಸರ್ಕಾರದ ವ್ಯವಸ್ಥೆಯಲ್ಲಿ ಯಾವುದೇ ನೌಕರರನ್ನು ವಿನಾಕಾರಣ ಹಾಗೂ ವಿಚಾರಣೆ ನಡೆಸಲು ಕೆಲಸದಿಂದ ವಜಾ ಮಾಡಲು ಅವಕಾಶವಿಲ್ಲದಂತೆ ಸಂವಿಧಾನದ ಪರಿಚ್ಛೇದ 311 ರಲ್ಲಿ ರಕ್ಷಣೆಯನ್ನು ನೀಡಲಾಗಿದೆ. ಈ ಕಾರಣಗಳಿಂದಾಗಿ ನೌಕರನ ವಿರುದ್ಧದ ಆರೋಪಗಳಿಗೆ ಸಾಕ್ಷ್ಯಾಧಾರಗಳು ಮತ್ತು ಸಾಕ್ಷಿಗಳ ಅವಶ್ಯಕತೆ ಇರುತ್ತದೆ. ಆರೋಪಗಳ ಬಗ್ಗೆ ಆರೋಪಿತ ನೌಕರರು ಪ್ರತಿ ಹೇಳಿಕೆ ನೀಡುವ ಅವಕಾಶವನ್ನು ಸಹ ಕಲ್ಪಿಸಬೇಕಾಗಿದೆ. ಈ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರಿ ಸೇವೆಗೆ ಒಳಪಡುವ ಎಲ್ಲಾ ವರ್ಗದ ಅಧಿಕಾರಿ ಮತ್ತು ನೌಕರರುಗಳ ಶಿಸ್ತು ಬದ್ಧ ಕಾರ್ಯನಿರ್ವಹಣೆಗಳನ್ನು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿಗಳು 1966 ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ನ್ನು ಜಾರಿಗೊಳಿಸಲಾಗಿರುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಚಿತವಾಗಿರುವ ಪ್ರತಿಯೊಂದು ಸರ್ಕಾರವು ತನ್ನ ನಾಗರೀಕರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸುವುದರ ಜೊತೆಗೆ, ವಿವಿಧ ಯೋಜನೆಗಳಡಿ ಅನುದಾನ ಬಿಡುಗಡೆ ಮಾಡುವ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಂಡಿರುತ್ತದೆ. ಜನಸಾಮಾನ್ಯರಿಗೆ ಅಗತ್ಯವಾಗಿರುವ ವಿವಿಧ ಸಾಮಾಜಿಕ ಕಲ್ಯಾಣ ಯೋಜನೆಗಳಡಿ ಗುರುತಿಸಲಾಗುವ ಫಲಾನುಭವಿಗಳಿಗೆ ನೆರವು, ನಾಗರೀಕ ಸೇವಾ ಸೌಲಭ್ಯ, ಸಮಸ್ಯೆಗಳಿಗೆ ಪರಿಹಾರವನ್ನು ನಿಗದಿತ ಸಮಯದಲ್ಲಿ ನೀಡಬೇಕಾಗಿರುತ್ತದೆ. ಆಡಳಿತ ಯಂತ್ರವು ಜನ ಸಾಮಾನ್ಯರ ಸಮಸ್ಯೆಗಳಿಗೆ ಸೂಕ್ತವಾಗಿ ಹಾಗೂ ಸಕಾಲದಲ್ಲಿ ಸ್ಪಂದಿಸದಿದ್ದರೆ, ಸರ್ಕಾರದ ಬಗ್ಗೆ ಸದಭಿಪ್ರಾಯ ಮೂಡುವುದಿಲ್ಲ. ಈ ಕಾರಣಗಳಿಂದ ಸರ್ಕಾರಿ ನೌಕರರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವ್ಯಕ್ತಪಡಿಸುವ

**ಜನಸಾಮಾನ್ಯರ ಸಾಮಾನ್ಯ ಸಮಸ್ಯೆಗಳಿಗೆ ನಿಯಮಾನುಸಾರ ಸ್ಪಂದಿಸಿ ಸೂಕ್ತ ಪರಿಹಾರವನ್ನು ನೀಡಿದ್ದರೆ, ಅಂತಹ ಆಡಳಿತ ವ್ಯವಸ್ಥೆಯ ಬಗ್ಗೆ ಜನಸಾಮಾನ್ಯರ ಗೌರವ ಮೂಡುತ್ತದೆ. ಪ್ರಜಾಪ್ರಭುತ್ವದ ವ್ಯವಸ್ಥೆಯು ಸುಗಮವಾಗಿ ಕಾರ್ಯನಿರ್ವಹಿಸಲು ಅನುವಾಗುತ್ತದೆ.**

ವಿಳಂಬಧೋರಣೆ, ನಿರ್ಲಕ್ಷ್ಯತೆ ಹಾಗೂ ಸ್ವಹಿತಾಸಕ್ತಿ ಮತ್ತು ಅನಪೇಕ್ಷಿತ ಸಂಭಾವನೆಗೆ ಒತ್ತಾಯ ತರುವ ನಡವಳಿಕೆಗಳನ್ನು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಾವಳಿಗಳು 1966 ರಡಿಯ ನಿಯಮ 3(i), (ii) ಮತ್ತು (iii) ರಡಿಯಲ್ಲಿ "ಕರ್ತವ್ಯಲೋಪ, ನಿರಾಸಕ್ತಿ, ವಿಳಂಬಧೋರಣೆ, ಅವಿಧೇಯತೆ, ಅಧಿಕಾರ ಹಾಗೂ ಹಣ ದುರುಪಯೋಗ" ಎಂದು ಪರಿಗಣಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರಡಿಯಲ್ಲಿ ವಿಚಾರಣೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತದೆ. ಈ ನಿಯಮಗಳಲ್ಲಿ ಇಲಾಖಾ ವಿಚಾರಣೆಯನ್ನು ನೇಮಕಾತಿ ಪ್ರಾಧಿಕಾರ ಅಥವಾ ನೇಮಕಾತಿ ಪ್ರಾಧಿಕಾರ ನೇಮಿಸಿದ ಯಾವುದೇ ಶಿಸ್ತು ಪ್ರಾಧಿಕಾರ ನಡೆಸಲಿದೆ. ಭ್ರಷ್ಟಾಚಾರ ತಡೆ ಕಾಯ್ದೆ 1988 ರಡಿಯಲ್ಲಿ "ಅಕ್ರಮ ಸಂಭಾವನೆ ಪಡೆಯುವ" ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಕ್ರಿಮಿನಲ್ ಮೊಕದ್ದಮೆಯನ್ನು ಸ್ಥಳೀಯ ಸೆಷನ್ಸ್ ನ್ಯಾಯಾಲಯದಲ್ಲಿ ದಾಖಲಿಸಲಾಗುವುದು ಹಾಗೂ ಸಿಸಿಎ ನಿಯಮ 1957 ರ ನಿಯಮ 14–ಎ ರಡಿ ಇಲಾಖಾ ವಿಚಾರಣೆಯನ್ನು ಮಾನ್ಯ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರಿಗೆ ವಹಿಸಲಾಗುವುದು. ಇತ್ತೀಚೆಗೆ ಭ್ರಷ್ಟಾಚಾರ ತಡೆ ಕಾಯ್ದೆ 1988 ರಡಿಯಲ್ಲಿ ದೂರುಗಳನ್ನು ಭ್ರಷ್ಟಾಚಾರ ನಿಗ್ರಹ ದಳ (ACB) ಸಂಸ್ಥೆಯು ದಾಖಲಿಸಿಕೊಳ್ಳುತ್ತಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಡಿ ಗ್ರಾಮ ಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗಳಿಗೆ ಮತ್ತು ಜಿಲ್ಲಾ ಪಂಚಾಯತಿಗಳಿಗೆ ವಹಿಸಲಾಗಿರುವ ಎಲ್ಲಾ ಪ್ರಕಾರ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ನೌಕರರು ನಿರ್ವಹಿಸಬೇಕು. ಗ್ರಾಮ ಪಂಚಾಯತಿಗಳು ಗ್ರಾಮೀಣ ಜನತೆಗೆ ಸ್ಥಳೀಯ ಸರ್ಕಾರವೆನಿಸಿರುವ ಕಾರಣ ಪಂಚಾಯತಿಯ ಚುನಾಯಿತ ಅಧ್ಯಕ್ಷ, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಮತ್ತು ಗ್ರಾಮ ಪಂಚಾಯತಿಯು ಪ್ರಕರಣ 113 ರಡಿ ನೇಮಕ ಮಾಡಿಕೊಂಡಿರುವ ಎಲ್ಲಾ ನೌಕರರುಗಳು ಗ್ರಾಮ ಪಂಚಾಯತಿಗೆ ವಹಿಸಿರುವ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಗ್ರಾಮ ಪಂಚಾಯತಿಯಿಂದ ಯಾವುದೇ ರೀತಿಯ ವೇತನ, ಸಂಭಾವನೆ ಪಡೆಯುವ ನೌಕರರು ಸಹ ಅವರುಗಳಿಗೆ ವಹಿಸಿರುವ ಕರ್ತವ್ಯಗಳನ್ನು ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಈ ಎಲ್ಲಾ ಅಧಿಕಾರಿಗಳು ಮತ್ತು ನೌಕರರುಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 286 ರಡಿ "ಲೋಕನೌಕರ" ಎಂದು ಘೋಷಿಸಲಾಗಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಸಕಾಲದಲ್ಲಿ ಸ್ಪಂದಿಸುವುದು, ಅವರುಗಳು ಕೋರಲಾಗುವ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ ನಿಗದಿತ ಅವಧಿಯೊಳಗೆ ಪೂರೈಸುವುದು, ನಾಗರೀಕ ಮೂಲಭೂತ ಸೌಲಭ್ಯಗಳಾದ ನೀರು ಸರಬರಾಜು, ಆರೋಗ್ಯ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂಧಿಸುವುದು ಶೈಕ್ಷಣಿಕ ಸೌಲಭ್ಯವನ್ನು ಒದಗಿಸುವುದು ಪರಿಸರ ಮತ್ತು ನೈರ್ಮಲ್ಯತೆ ಸಂರಕ್ಷಣೆ ಮಾಡುವಂತಹ ಪ್ರಮುಖ ವಿಷಯಗಳಲ್ಲಿ ಗ್ರಾಮ ಪಂಚಾಯತಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಸೂಕ್ತವಾಗಿ ಸ್ಪಂದಿಸದಿದ್ದರೆ, ಸಾರ್ವಜನಿಕರು ದೂರುಗಳನ್ನು ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿ ಅಥವಾ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಇಲ್ಲಿಯೂ ಸಹ ಸೂಕ್ತ ಪರಿಹಾರ ಸಕಾಲದಲ್ಲಿ ದೊರೆಯದಿದ್ದರೆ, ಆಡಳಿತದಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ ಹಾಗೂ ಶಿಸ್ತನ್ನು ಮೂಡಿಸುವ ಉದ್ದೇಶದಿಂದ ಸೃಜಿಸಲಾಗಿರುವ ಕರ್ನಾಟಕ ಲೋಕಾಯುಕ್ತ ಸಂಸ್ಥೆ ಅಥವಾ ಭ್ರಷ್ಟಾಚಾರ ನಿಗ್ರಹ ದಳ ಸಂಸ್ಥೆಗೆ ದೂರುಗಳನ್ನು ಸಾರ್ವಜನಿಕರು ಸಲ್ಲಿಸುತ್ತಾರೆ.

ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರುಗಳು ಹಾಗೂ ಅಧಿಕಾರಿಗಳು, ಕಾರ್ಯದರ್ಶಿ ಹಾಗೂ ಇತರೆ ನೌಕರ ವರ್ಗದವರ ವಿರುದ್ಧ ಕೆಳಕಂಡ ಪ್ರಮುಖ ಅಂಶಗಳ ಬಗ್ಗೆ ಸಾರ್ವಜನಿಕರು ಕರ್ನಾಟಕ ಲೋಕಾಯುಕ್ತದಲ್ಲಿ ದೂರುಗಳನ್ನು ದಾಖಲಿಸುವ ಪರಿಪಾಠ ಕಂಡುಬರುತ್ತದೆ.

1. **ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಮನೆಗಳು, ಇತರೆ ಸ್ವತ್ತುಗಳ ಅಳತೆ, ಒಡೆತನ, ಒತ್ತುವರಿ, ನಿವೇಶನದ ಮೇಲೆ ಇರಬಹುದಾಗಿದ್ದ ರಸ್ತೆಯ ತೆರವುಗೊಳಿಸುವಿಕೆ, ಮನೆಯ ಪಕ್ಕದಲ್ಲಿರಬಹುದಾದ ತಿಪ್ಪೆಗುಂಡಿಗಳ ಸ್ಥಳಾಂತರ ಹಾಗೂ ಕಟ್ಟಡದ ನಿರ್ಮಾಣದ ಲೈಸೆನ್ಸ್ ನೀಡುವಿಕೆಯ ಬಗ್ಗೆ, ನಿಯಮಾನುಸಾರ ತೆರಿಗೆಯನ್ನು ವಿಧಿಸದೆ ಹೆಚ್ಚುವರಿ ವಸೂಲಿ ಮಾಡುವುದು. ತೆರಿಗೆ ಮೊತ್ತವನ್ನು ಗ್ರಾಮ ಪಂಚಾಯತಿಯ ನಿಧಿಗೆ ಸಂದಾಯ ಮಾಡದೆ ವಂಚಿಸಿರುವುದು.**
2. **ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿನ ಲೋಪದೋಷಗಳು, ಕಾಮಗಾರಿ ನಿರ್ವಹಿಸದೆ ಬಿಲ್ಲುಗಳನ್ನು ಪಡೆದಿರುವ ಬಗ್ಗೆ, ರಾಜ್ಯದ ಹೆದ್ದಾರಿಗಳಲ್ಲಿ ಸ್ಥಾಪಿತವಾಗಿರುವ ಅಂಗಡಿ, ಹೋಟೇಲ್ ಮತ್ತಿತರೆ ವಾಣಿಜ್ಯ ಕೇಂದ್ರಗಳನ್ನು ತೆರವು ಮಾಡುವುದರ ಬಗ್ಗೆ.**
3. **ಸರ್ಕಾರದ ಅನುದಾನಗಳ ದುರುಪಯೋಗ, ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದು. ಎಂ.ಜಿ.ಎನ್. ಆರ್.ಇ.ಜಿ. ಹಾಗೂ ಇನ್ನಿತರೆ ಯೋಜನೆಯಡಿಯ ಕಾಮಗಾರಿಗಳ ಅನುಷ್ಠಾನದಲ್ಲಿನ ಲೋಪದೋಷಗಳು,**
4. **ಗ್ರಾಮ ಪಂಚಾಯತಿ ನಿರ್ಣಯಗಳನ್ನು ಮತ್ತು ಗ್ರಾಮ**

**ಪಂಚಾಯತಿ ದಾಖಲೆಗಳನ್ನು ದುರುದ್ದೇಶದಿಂದ ತಿದ್ದಿರುವ ಬಗ್ಗೆ, ನಕಲಿ ದಾಖಲೆಗಳನ್ನು ಸಾರ್ವಜನಿಕರಿಗೆ ನೀಡಿರುವ ಬಗ್ಗೆ, ಗ್ರಾಮಪಂಚಾಯತಿಯ ಆಸ್ತಿಯನ್ನು ರಕ್ಷಣೆ ಮಾಡದೆ ನಷ್ಟವುಂಟು ಮಾಡುತ್ತಿರುವ ಬಗ್ಗೆ, ಕೆಲವೊಂದು ಕೃಷಿಯೇತರ ಚಟುವಟಿಕೆಗಳಿಗೆ ಲೈಸೆನ್ಸ್ ನೀಡುವ ಸಂದರ್ಭಗಳಲ್ಲಿ ನಿಯಮಗಳನ್ನು ಉಲ್ಲಂಘಿಸಿರುವ ಮತ್ತು ಅಕ್ರಮಗಳು ನಡೆದಿರುವ ಬಗ್ಗೆ,**

5. **ಆಕ್ರಮ ಸಂಭಾವನೆಗೆ ಒತ್ತಾಯಿಸುವುದು, ಉದ್ದೇಶ ಪೂರ್ವಕವಾಗಿ ಅರ್ಜಿದಾರರನ್ನು ಕಾಡುವುದು, ಅರ್ಜಿ, ಮನವಿಗಳನ್ನು ವಿಲೇ ಮಾಡಲು ವಿಳಂಬ ಮಾಡುವುದು, ಸಕಾರಣಗಳಿಲ್ಲದೆ ಅರ್ಜಿ, ಮನವಿಗಳನ್ನು ತಿರಸ್ಕರಿಸುವ ಬಗ್ಗೆ.**

ಮೇಲೆ ವಿವರಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳು ಸ್ವೀಕರಿಸುವ ದೂರುಗಳು/ ಮನವಿಗಳನ್ನು "ಸಕಾಲ" ಅಧಿಸೂಚನೆಯಲ್ಲಿನ ನಿಯಮಗಳಾನುಸಾರ ಪರಿಶೀಲಿಸಬೇಕು. ದೂರುದಾರರ ಮನವಿಗಳನ್ನು ಪ್ರಸ್ತುತ ಇರುವ ನಿಯಮಗಳಿಗನುಸಾರ ಪರಿಹರಿಸಲು ಸಾಧ್ಯವಿಲ್ಲವಾದರೆ ಅಥವಾ ಅದನ್ನು ಗ್ರಾಮ ಪಂಚಾಯತಿಯ ಅಧಿಕಾರ ವ್ಯಾಪ್ತಿಯಲ್ಲಿ ಬಗೆಹರಿಸಲು ಸಾಧ್ಯವಾಗದಿದ್ದರೆ, ಸೂಕ್ತ ನಿಯಮ ಹಾಗೂ ಕಾರಣಗಳನ್ನು ತಿಳಿಸಿ ಅರ್ಜಿದಾರರಿಗೆ ಹಿಂಬರಹ ನೀಡುವುದು ಕ್ರಮಬದ್ಧವಾಗಿರುತ್ತದೆ. ಕೆಲವೊಂದು ಪ್ರಕರಣಗಳಲ್ಲಿ ಅರ್ಜಿದಾರರ ದೂರನ್ನು ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಅಧಿಕಾರ ವ್ಯಾಪ್ತಿಯಲ್ಲಿ ಪರಿಶೀಲಿಸಬೇಕಾದ ಅಂಶಗಳಿದ್ದರೆ, ಆ ಕಛೇರಿಗಳಿಗೆ ಕಳುಹಿಸಿ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡಬೇಕು.

ಸ್ವತ್ತಿನ ಅಳತೆ ಅಥವಾ ಮಾಲೀಕತ್ವದಂತಹ ಜಟಿಲ ಸಮಸ್ಯೆಗಳನ್ನು ಕಂದಾಯ ಇಲಾಖೆಯು ಪರಿಶೀಲಿಸಬೇಕಾದ ವಿಷಯವಾಗಿರುತ್ತದೆ. ಇಂತಹ ಸಮಸ್ಯೆಗಳುಳ್ಳ ದೂರುಗಳನ್ನು ಸಂಬಂಧಿಸಿದ ತಹಸೀಲ್ದಾರ್ ಅಥವಾ ಮೋಜಣಿಇಲಾಖೆಯ ಮುಖ್ಯಸ್ಥರಿಗೆ ಕಳುಹಿಸುವುದು ಹಾಗೂ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡಬೇಕಾಗಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಗ್ರಾಮ ಪಂಚಾತಿಗಳ ನಿಯಂತ್ರಣ) ನಿಯಮಗಳು 1994 ರ ನಿಯಮ 7 ರಲ್ಲಿ "ಗ್ರಾಮ ಪಂಚಾಯತಿ ವ್ಯಾಪ್ತಿಯ ಸ್ವತ್ತಿನ ಮಾಲೀಕತ್ವದ ಬಗ್ಗೆ ಪ್ರಶ್ನೆಗಳು ಉದ್ಭವಿಸಿದರೆ ನ್ಯಾಯಾಲಯದ ತೀರ್ಮಾನವನ್ನು ಪಡೆದ ಹೊರತು ಅನುಮತಿಯನ್ನು ನೀಡತಕ್ಕದ್ದಲ್ಲ" ಎಂದಿರುತ್ತದೆ. ಆದುದರಿಂದ ಸಮಸ್ಯೆಗಳಿರುವ ಸ್ವತ್ತಿನ ಮಾಲೀಕತ್ವದ ಬಗ್ಗೆ ಗ್ರಾಮ ಪಂಚಾಯತಿಯು ಯಾವುದೇ ನಿರ್ಧಾರವನ್ನು ಕೈಗೊಳ್ಳಬಾರದು. ಒಂದು ವೇಳೆ ನಿರ್ಧಾರ ಕೈಗೊಂಡಿದ್ದರೆ, ಬಾಧಿತ ವ್ಯಕ್ತಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ ಪ್ರಕರಣ 64(6) ರಡಿ ಮೇಲ್ಮನವಿ ಸಲ್ಲಿಸಲು ಅವಕಾಶವಿರುತ್ತದೆ. ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು (ಖಾತೆಯನ್ನು) ಯಾರು ನಿರ್ವಹಿಸಬೇಕೆಂಬ ಪ್ರಶ್ನೆ ಉದ್ಭವವಾದಾಗ ಈ ದಾಖಲೆಗಳನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964 ಹಾಗೂ ಇದರಡಿ ರಚಿತವಾದ ಕರ್ನಾಟಕ ಭೂಕಂದಾಯ ನಿಯಮಾವಳಿ 1966 ರ ಅಧ್ಯಾಯ 12 ರಲ್ಲಿ ತಿಳಿಸಿರುವಂತೆ "ಕೃಷಿಯೇತರ ಜಮೀನಿನಲ್ಲಿರುವ ಆಸ್ತಿಪಾಸ್ತಿಗಳಿಗೆ ಸಂಬಂಧಿಸಿದಂತೆ Survey Settlement and land records ಇಲಾಖೆಯು ಪಟ್ಟಣಗಳಲ್ಲಾಗಲಿ, ನಗರಗಳಲ್ಲಾಗಲಿ ಅಥವಾ ಹಳ್ಳಿಗಳಲ್ಲಾಗಲಿ ಈ ಕರ್ತವ್ಯವನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ(ಸುತ್ತೋಲೆ ಸಂಖ್ಯೆ: ಗ್ರಾಅಪ 126 ಗ್ರಾಪಂಅ 2003, ದಿನಾಂಕ:06–06–2003). ಗ್ರಾಮ ಪಂಚಾಯತಿಯ ಆಸ್ತಿಗಳ ಮೇಲಿನ ಅನಧಿಕೃತ ಕಟ್ಟಡ ಹಾಗೂ ಒತ್ತುವರಿಯನ್ನು ತೆರವುಗೊಳಿಸಲು ಪ್ರಕರಣ 72 ಕ್ಕೆ ನಿಯಮಗಳನ್ನು ರಚಿಸಲಾಗಿರುತ್ತದೆ. ಈ ನಿಯಮಗಳನ್ವಯ ಒತ್ತುವರಿಯನ್ನು ತೆರವುಗೊಳಿಸಲು ಕಾರ್ಯನಿರ್ವಾಹಕ ಅಧಿಕಾರಿ, ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿ ಅಧಿಕಾರಿಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕಾಗಿದೆ. ಗ್ರಾಮ ಪಂಚಾಯತಿ ಅತ್ಯಂತ ಜಟಿಲ ಸಮಸ್ಯೆಗಳ ದೂರುಗಳ ಬಗ್ಗೆ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಮಾರ್ಗದರ್ಶನ ಪಡೆಯುವುದು ಸೂಕ್ತವಾಗಿರುತ್ತದೆ. ಇಂತಹ ಕ್ರಮಗಳನ್ನು ಅನುಸರಿಸದೆ, ಅರ್ಜಿದಾರರಿಗೆ ಸೂಕ್ತ ಹಿಂಬರಹ ಅಥವಾ ತಿಳುವಳಿಕೆ ನೀಡದಿರುವಾಗ, ಸಾಮಾನ್ಯವಾಗಿ ದೂರುದಾರರು ಗ್ರಾಮ ಪಂಚಾಯತಿಗಳ ಆಡಳಿತದ ವಿರುದ್ಧ ದೂರುಗಳನ್ನು ಸಲ್ಲಿಸಲು ಬೇರೆ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ಇಂತಹ ಸಮಯದಲ್ಲಿ ಅವರಿಗೆ ತಕ್ಷಣ ಗೋಚರಿಸುವುದು ಕರ್ನಾಟಕ ಲೋಕಾಯುಕ್ತ ಅಥವಾ ಭ್ರಷ್ಟಚಾರ ನಿಗ್ರಹ ದಳ (ACB) ಪ್ರಾಧಿಕಾರ.

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಪ್ರಕರಣ (9) ರಡಿಯಲ್ಲಿನ ಅವಕಾಶಗಳಂತೆ ಹಾಗೂ ಕರ್ನಾಟಕ ಲೋಕಾಯುಕ್ತ ನಿಯಮ 1985 ರ ನಿಯಮ (4) ಮತ್ತು (5) ರಡಿಯ ನಿರೂಪಣೆಯಂತೆ ಸಾರ್ವಜನಿಕರು ನಿಗದಿತ ನಮೂನೆ–1 ರಲ್ಲಿ ದೂರನ್ನು ಮಾನ್ಯ ಲೋಕಾಯುಕ್ತರಲ್ಲಿ ಸಲ್ಲಿಸುತ್ತಾರೆ. ದೂರನ್ನು ದಾಖಲಿಸುವುದರ ಜೊತೆಗೆ ನೋಟರಿರವರಿಂದ ದೃಢೀಕರಿಸಿದ ಶಪಥಾ ಪತ್ರದಲ್ಲಿ(Affidavit) ಸಹಿ ಮಾಡಿ ದೂರನ್ನು ದಾಖಲಿಸುತ್ತಾರೆ. ಮಾನ್ಯ ಲೋಕಾಯುಕ್ತವು ಸಾರ್ವಜನಿಕ ಲೋಕನೌಕರರ/ಸರ್ಕಾರಿ ನೌಕರರ ಮೇಲೆ ದಾಖಲಾಗಿರುವ ದೂರಿನ ಪ್ರತಿಯನ್ನು ಲೋಕನೌಕರ/ಸರ್ಕಾರಿ ನೌಕರನಿಗೆ ಕಳುಹಿಸಿ ಅವರಿಂದ ದೂರಿನ ಬಗ್ಗೆ ವಿವರಣೆ ಪಡೆಯುವ ಅವಕಾಶವನ್ನು

ಪ್ರಕರಣ (9) (3) ರಲ್ಲಿ ನೀಡಲಾಗಿದೆ. ಈ ಸಮಯದಲ್ಲಿ ಸಂಬಂಧಪಟ್ಟ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಥವಾ ಕಾರ್ಯದರ್ಶಿ ಅಥವಾ ಯಾವುದೇ ಸಂಬಂಧಪಟ್ಟ ನೌಕರನು ದೂರುದಾರರು ನೀಡಿರುವ ದೂರಿನಲ್ಲಿರುವ ಅಂಶಗಳ ಬಗ್ಗೆ ಈಗಾಗಲೇ ಕೈಗೊಂಡಿರುವ ಕ್ರಮಗಳ ವಿವರಣೆಯನ್ನು ಮಾನ್ಯ ಲೋಕಾಯುಕ್ತರ ಕಛೇರಿಗೆ ನಿಗಧಿತ ಸಮಯದಲ್ಲಿ ತಪ್ಪದೆ ಸಲ್ಲಿಸಬೇಕು ಹಾಗೂ ಈ ಸಂಬಂಧ ಸ್ವೀಕೃತಿಯನ್ನು ಪಡೆದುಕೊಳ್ಳಬೇಕು. ಈ ಕ್ರಮಗಳನ್ನು ಅನುಸರಿಸದಿರುವ ಕಾರಣ ಮಾನ್ಯ ಲೋಕಾಯುಕ್ತವು ಸಂಬಂಧಪಟ್ಟ ನೌಕರರ ವಿರುದ್ಧ "ಕರ್ತವ್ಯ ಲೋಪ"ದ ಆರೋಪವನ್ನು ಮಾಡುವ ಸಾಧ್ಯತೆ ಇರುತ್ತದೆ. ವಿವರಣೆಯನ್ನು ಪರಿಶೀಲಿಸಿದ ಲೋಕಾಯುಕ್ತರು ಈಗಾಗಲೇ ಕೈಗೊಂಡಿರುವ ಕ್ರಮವು ನಿಯಮಬದ್ಧವಾಗಿದ್ದರೆ, ಮುಂದಿನ ವಿಚಾರಣೆಗಳನ್ನು ತನಿಖೆ ಮಾಡುವುದನ್ನು ಕೈಬಿಡುತ್ತಾರೆ. ಬಹುತೇಕ ಪ್ರಕರಣಗಳಲ್ಲಿ ಗ್ರಾಮ ಪಂಚಾಯತಿಗಳು ಮತ್ತು ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಮಾನ್ಯ ಲೋಕಾಯುಕ್ತರ ಪತ್ರಗಳಿಗೆ ಸೂಕ್ತ ಕಾಲದಲ್ಲಿ ಸ್ಪಂದಿಸದಿದ್ದಾಗ ಹಾಗೂ ಕೈಗೊಂಡಿರುವ ಕ್ರಮಗಳು ನಿಯಮಬದ್ಧವಿಲ್ಲದಿರುವಾಗ ಮಾತ್ರ ಮಾನ್ಯ ಲೋಕಾಯುಕ್ತರು ಮುಂದಿನ ಹೆಚ್ಚಿನ ವಿಚಾರಣೆಗಾಗಿ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14–ಎ ರಡಿ ಅವರಿಗೆ ವಹಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದುದರಿಂದ ಸರ್ಕಾರ ಅನಿವಾರ್ಯವಾಗಿ ಇಂತಹ ಪ್ರಕರಣವನ್ನು ಹೆಚ್ಚಿನ ವಿಚಾರಣೆಗಾಗಿ ಮಾನ್ಯ ಲೋಕಾಯುಕ್ತರಿಗೆ ವಹಿಸಬೇಕಾಗುತ್ತದೆ ದೂರಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಈಗಾಗಲೇ ಕೈಗೊಂಡಿರುವ ಕ್ರಮಗಳು ನಿಯಮಬದ್ಧವಾಗಿದ್ದರೆ ಅವುಗಳನ್ನು ಮಾನ್ಯ ಲೋಕಾಯುಕ್ತರ ಇಲಾಖಾ ವಿಚಾರಣೆಯ ಸಮಯದಲ್ಲಿ ಮಂಡಿಸುವುದು ಸೂಕ್ತವಾಗಿರುತ್ತದೆ. ಈ ಇಲಾಖಾ ವಿಚಾರಣೆಯನ್ನಾಧರಿಸಿ ಮಾನ್ಯ ಲೋಕಾಯುಕ್ತವು ಸರ್ಕಾರಕ್ಕೆ ಸಲ್ಲಿಸುವ ವರದಿಯು ಕೇವಲ "ಶಿಫಾರಸ್ಸಾಗಿರುತ್ತದೆಯೇ ಹೊರತು ಆದೇಶವಲ್ಲ". ಮಾನ್ಯ ಲೋಕಾಯುಕ್ತರು ನೀಡಿದ ಶಿಫಾರಸ್ಸಿನ ಮೇರೆಗೆ ಸರ್ಕಾರ ಕೈಗೊಂಡ ಯಾವುದೇ ಶಿಸ್ತು ಕ್ರಮದ ವಿರುದ್ಧ ಆರೋಪಿತ ನೌಕರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಾ ಮಂಡಳಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಈ ಹಿಂದೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 296–ಎ ರಡಿ ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತದಲ್ಲಿ, ಕುಂದು ಕೊರತೆಗಳನ್ನು / ದೂರುಗಳನ್ನು ಪರಿಶೀಲಿಸಲು ಪಂಚಾಯತ್ ಓಂಬಡ್ಸ್ ಮನ್‌ಗಳನ್ನು 2011 ರಲ್ಲಿ ರಚಿಸಲಾಗಿತ್ತು. ಜಿಲ್ಲಾ ಪಂಚಾಯತಿಯ ವಿರುದ್ಧ ಸಲ್ಲಿಸಿದ ದೂರುಗಳನ್ನು ಪ್ರಾದೇಶಿಕ ಆಯುಕ್ತರು, ತಾಲ್ಲೂಕು ಪಂಚಾಯತಿ ವಿರುದ್ಧ ಸಲ್ಲಿಸಿದ ದೂರುಗಳನ್ನು ದೂರುಗಳನ್ನು ಜಿಲ್ಲಾಧಿಕಾರಿಗಳು, ಗ್ರಾಮ ಪಂಚಾಯತಿಗಳಿಗೆ ವಿರುದ್ಧ ಸಲ್ಲಿಸಿದ ದೂರುಗಳನ್ನು ಉಪವಿಭಾಗಾಧಿಕಾರಿಗಳು ವಿಚಾರಣೆ ನಡೆಸಲು ಅವಕಾಶವಿತ್ತು. ಈ ವ್ಯವಸ್ಥೆಯನ್ನು 2015 ರಲ್ಲಿ ತಿದ್ದುಪಡಿ ಮಾಡಲಾಗಿದ್ದು, ಪ್ರತಿಯೊಂದು ಜಿಲ್ಲಾ ಪಂಚಾಯತಿಯ ವ್ಯಾಪ್ತಿಯಲ್ಲಿ "ಕುಂದು ಕೊರತೆ ನಿವಾರಣಾ ಪ್ರಾಧಿಕಾರವನ್ನು" ರಚಿಸಲಾಗಿದೆ. ನಿವೃತ್ತ ಜಿಲ್ಲಾ ನ್ಯಾಯಾಧೀಶ ಅಥವಾ ಜಿಲ್ಲಾಧಿಕಾರಿಗೆ ಸಮನಾದ ಅಧಿಕಾರಿಗಳು ಈ ದೂರುಗಳನ್ನು ಪರಿಶೀಲಿಸುವ, ಪರಿಹಾರ ನೀಡುವ ಹಾಗೂ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡುವ ಅಧಿಕಾರ ಹೊಂದಿರುತ್ತಾರೆ. ಇಂತಹ ವ್ಯವಸ್ಥೆ ಜಾರಿಗೆ ಬಂದಿರುವುದರಿಂದ, ಇನ್ನು ಮುಂದೆ ಪಂಚಾಯತ್ ರಾಜ್ ವ್ಯವಸ್ಥೆಗಳಿಗೆ ಸಂಬಂಧಿಸಿದ ದೂರುಗಳನ್ನು ಮಾನ್ಯ ಲೋಕಾಯುಕ್ತರ ಕಾರ್ಯಾಲಯವು ಕರ್ನಾಟಕ ಲೋಕಾಯುಕ್ತ ಕಾಯ್ದೆ 8 ರನ್ವಯ ದಾಖಲು ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಯಾವುದೇ ಇಲಾಖೆಯು ಆಡಳಿ–ತಾತ್ಮಕವಾಗಿ ಕೈಗೊಂಡ ನಿರ್ಧಾರದ ಬಗ್ಗೆ ಮೇಲ್ಮನವಿ ಸಲ್ಲಿಸಲು ಅದೇ ಇಲಾಖೆಯ ನಿಯಮಾವಳಿಗಳಲ್ಲಿ ಅವಕಾಶ ಕಲ್ಪಿಸಿದ್ದರೆ, ಅಂತಹ ಮೇಲ್ಮನವಿಯನ್ನು ಅರ್ಜಿದಾರರು ಸಲ್ಲಿಸದ ಹೊರತು, ನೇರವಾಗಿ ಲೋಕಾಯುಕ್ತರಿಗೆ ಸಲ್ಲಿಸಿದ್ದ ದೂರನ್ನು ಮಾನ್ಯ ಉಚ್ಚ ನ್ಯಾಯಾಲಯವು ರದ್ದುಪಡಿಸಿರುತ್ತದೆ. ಈ ಕಾರಣಗಳಿಂದಾಗಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅಥವಾ ಯಾವುದೇ ನೌಕರರು ಅವರುಗಳ ವಿರುದ್ಧ ದಾಖಲಾಗಿದ್ದ ದೂರಿನ ಬಗ್ಗೆ ನಿಯಮಾನುಸಾರ ವಿಳಂಬವಿಲ್ಲದೆ ಕ್ರಮ ಕೈಗೊಂಡಿದ್ದರೆ ಹಾಗೂ ತಾವು ತೆಗೆದುಕೊಂಡಿರುವ ನಿರ್ಧಾರ ಸಮಯೋಚಿತ ಹಾಗೂ ನಿಯಮಾನುಸಾರವಾಗಿದ್ದರೆ, ಲೋಕಾಯುಕ್ತರ ಶಿಫಾರಸ್ಸಿನ ಮೇರೆಗೆ ಸರ್ಕಾರ ತೆಗೆದು–ಕೊಳ್ಳುವ ನಿರ್ಧಾರ/ಆದೇಶಗಳನ್ನು ಕರ್ನಾಟಕ ಆಡಳಿತ ಮಂಡಳಿ ಪ್ರಶ್ನಿಸಿ ನ್ಯಾಯ ಪಡೆಯಬಹುದಾಗಿದೆ.

ಜನಸಾಮಾನ್ಯರ ಸಾಮಾನ್ಯ ಸಮಸ್ಯೆಗಳಿಗೆ ನಿಯಮಾನುಸಾರ ಸ್ಪಂದಿಸಿ ಸೂಕ್ತ ಪರಿಹಾರವನ್ನು ನೀಡಿದ್ದರೆ, ಅಂತಹ ಆಡಳಿತ ವ್ಯವಸ್ಥೆಯ ಬಗ್ಗೆ ಜನಸಾಮಾನ್ಯರ ಗೌರವ ಮೂಡುತ್ತದೆ. ಪ್ರಜಾಪ್ರಭುತ್ವದ ವ್ಯವಸ್ಥೆಯು ಸುಗಮವಾಗಿ ಕಾರ್ಯನಿರ್ವಹಿಸಲು ಅನುವಾಗುತ್ತದೆ. ಆದುದರಿಂದ ಜನಸಾಮಾನ್ಯರ ಮನವಿಗಳನ್ನು ನಿಗಧಿತ ಸಮಯದಲ್ಲಿ ನಿಯಮಾನುಸಾರ ಪರಿಶೀಲಿಸಿ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡುವುದು ಆಡಳಿತ ನಿರ್ವಹಣೆ ಮಾಡುವ ಎಲ್ಲಾ ಅಧಿಕಾರಿ ಮತ್ತು ನೌಕರರ ಆದ್ಯ ಕರ್ತವ್ಯವಾಗಿರುತ್ತದೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ರಾಜ್ಯದ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಗ್ರಾಮಗಳನ್ನು ಆಯ್ಕೆ ಮಾಡಲು ಅನುಮೋದನೆ ನೀಡುವ ಕುರಿತು.**

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:09:ಗ್ರಾವಿಯೋ:2017, ದಿ:20.06.2017.

## ಪ್ರಸ್ತಾವನೆ:

"ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆ" ಯಡಿ ಆಯ್ಕೆಯಾಗುವ ಪ್ರತಿ ಗ್ರಾಮಕ್ಕೆ ಗರಿಷ್ಠ ರೂ.1.00ಕೋಟಿ ಅನುದಾನದಲ್ಲಿ ಗರಿಷ್ಟ 1000 ಗ್ರಾಮಗಳನ್ನು ಆಯ್ಕೆ ಮಾಡಿ 2017-18ನೇ ಸಾಲಿನಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಗಳ ಗ್ರಾಮವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಮೇಲೆ ಓದಲಾದಂತೆ ಆದೇಶ ಹೊರಡಿಸಲಾಗಿದೆ.

ಅದರಂತೆ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಪ್ರತಿ ಗ್ರಾಮಕ್ಕೆ ನೀಡುವ ರೂ.1.00 ಕೋಟಿ ಅನುದಾನದ ಜೊತೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು ಇತರೆ ಅಭಿವೃದ್ಧಿ ಯೋಜನೆಗಳ ಅನುದಾನದಲ್ಲಿ ಅನುಷ್ಠಾನಕ್ಕೆ ತರುತ್ತಿರುವ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಸಹ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅನುಷ್ಠಾನಕ್ಕೆ ತಂದು ಗ್ರಾಮಗಳನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು ಹಾಗೂ ಗ್ರಾಮಗಳ ಅಭಿವೃದ್ಧಿ ಮಾಡುವ ಅನುಷ್ಠಾನದ ಹೊಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಲು ಆದೇಶಿಸಲಾಗಿದೆ.

ಯೋಜನೆಯಡಿ ರಾಜ್ಯದ 189 ಗ್ರಾಮೀಣ ವಿಧಾನಸಭಾ ಸದಸ್ಯರುಗಳು ತಮ್ಮ ಮತಕ್ಷೇತ್ರ ವ್ಯಾಪ್ತಿಯ ಮತ್ತು ರಾಜ್ಯದ ವಿಧಾನ ಪರಿಷತ್ ಸದಸ್ಯರು ಗ್ರಾಮಗಳನ್ನು ಆಯ್ಕೆ ಮಾಡಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಬೇಕಿದೆ.

ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:10:ಗ್ರಾವಿಯೋ:2017, ಬೆಂಗಳೂರು, ದಿನಾಂಕ: 20.06.2017.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ "ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆ" ಯನ್ನು 2017-18ನೇ ಸಾಲಿನಿಂದ ಅನುಷ್ಠಾನ ಮಾಡಲು ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಲು ಮತ್ತು

ಗ್ರಾಮೀಣ ವಿಧಾನಸಭಾ ಸದಸ್ಯರುಗಳು ಮತ್ತು ರಾಜ್ಯದ ವಿಧಾನ ಪರಿಷತ್ ಸದಸ್ಯರು ಗ್ರಾಮಗಳನ್ನು ಆಯ್ಕೆ ಮಾಡಲು ನಿಗಧಿಪಡಿಸಿದ ಗ್ರಾಮಗಳ ಗರಿಷ್ಠ ಸಂಖ್ಯೆ ಮತ್ತು ಅನುದಾನವನ್ನು ಕ್ರಮವಾಗಿ ಅನುಬಂಧ-1, 2, 2 (A), 3 ಮತ್ತು 4 ರಲ್ಲಿ ನೀಡಿರುವಂತೆ ಗ್ರಾಮೀಣ ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರು ಗ್ರಾಮಗಳನ್ನು ಆಯ್ಕೆ ಮಾಡಲು ಅನುಮೋದನೆ ನೀಡಲಾಗಿದೆ.

**ಗ್ರಾಮಗಳನ್ನು ಆಯ್ಕೆ ಮಾಡಲು ಮಾನದಂಡಗಳು :**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳು ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಆಯಾ ವಿಧಾನಸಬಾ ಕ್ಷೇತ್ರಕ್ಕೆ/ವಿಧಾನ ಪರಿಷತ್ ಸದಸ್ಯರಿಗೆ ಗ್ರಾಮಗಳನ್ನು ಆಯ್ಕೆ ಮಾಡಲು ನಿಗಧಿಪಡಿಸಿರುವ ಸಂಖ್ಯೆ/ಅನುದಾನದ ವಿವರಗಳನ್ನು ಸಂಬಂಧಪಟ್ಟ ವಿಧಾನಸಭಾ ಸದಸ್ಯರಿಗೆ/ವಿಧಾನ ಪರಿಷತ್ ಸದಸ್ಯರಿಗೆ ನೀಡುವುದು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳು ಈ ಹಿಂದೆ ವಿವಿಧ ಯೋಜನೆಗಳಡಿಯಲ್ಲಿ ಆಯ್ಕೆಯಾಗಿ ಈಗಾಗಲೇ ಅಭಿವೃದ್ಧಿ ಹೊಂದಿರುವ ಗ್ರಾಮಗಳ ಪಟ್ಟಿಯನ್ನು ಮತ್ತು ಅಭಿವೃದ್ಧಿಯಿಂದ ವಂಚಿತವಾಗಿರುವ ಗ್ರಾಮಗಳ ಪಟ್ಟಿಯನ್ನು ಮಾನ್ಯ ವಿಧಾನಸಭಾ ಸದಸ್ಯರಿಗೆ /ವಿಧಾನ ಪರಿಷತ್ ಸದಸ್ಯರಿಗೆ ನೀಡಿ ಅಭಿವೃದ್ಧಿಯಿಂದ ವಂಚಿತವಾಗಿರುವ ಗ್ರಾಮಗಳನ್ನು ಆಯ್ಕೆ ಮಾಡಲು ಸೂಚಿಸುವುದು ಹಾಗೂ

ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಾಂದ್ರತೆಯಿರುವ ಗ್ರಾಮಗಳ ಪಟ್ಟಿಗಳನ್ನು ಸಹ ಒದಗಿಸಿ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಪಡೆಯಲು ಕ್ರಮ ಕೈಗೊಳ್ಳುವುದು.

3. ಗ್ರಾಮೀಣ ವಿಧಾನ ಸಭಾ ಸದಸ್ಯರು ನಿಗಧಿಪಡಿದ ಸಂಖ್ಯೆಯಷ್ಟು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗರಿಷ್ಠ ಪರಿಶಿಷ್ಟ ಜಾತಿ ಇರುವ ಒಂದು ಗ್ರಾಮವನ್ನು ಮತ್ತು

4. ಗರಿಷ್ಠ ಪರಿಶಿಷ್ಟ ಪಂಗಡದ ಜನಸಂಖ್ಯೆ ಹೊಂದಿರುವ ಒಂದು ಗ್ರಾಮವನ್ನು ಸೇರಿ ನಿಗಧಿಪಡಿಸಿದ ಸಂಖ್ಯೆಯಷ್ಟು ಮಿತಿಯೊಳಗೆ ಗ್ರಾಮಗಳನ್ನು ಆಯ್ಕೆ ಮಾಡಲು ಸೂಚಿಸುವುದು.

5. ವಿಧಾನ ಪರಿಷತ್ ಸದಸ್ಯರು ರಾಜ್ಯದ ಗ್ರಾಮೀಣ ಭಾಗದ ತಾವು ಇಚ್ಛಿಸುವ ಯಾವುದೇ ಒಂದು ಗ್ರಾಮವನ್ನು ಆಯ್ಕೆ ಮಾಡುವಾಗ ಆ ಗ್ರಾಮದಲ್ಲಿ ಇತರೆ ಜನಾಂಗವು ಸೇರಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಯಿರುವ ಒಂದು ಗ್ರಾಮವನ್ನು ಆಯ್ಕೆ ಮಾಡುವುದು.

6. ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಲಾದ ಗರಿಷ್ಠ ಸಂಖ್ಯೆಗಿಂತ ಹೆಚ್ಚಿನ ಗ್ರಾಮಗಳನ್ನು ಆಯ್ಕೆ ಮಾಡಿ ಶಿಫಾರಸ್ಸು ಮಾಡಬಾರದು. ಒಂದು ವೇಳೆ ಗರಿಷ್ಠ ಸಂಖ್ಯೆಗಿಂತ ಹೆಚ್ಚಿನ ಗ್ರಾಮಗಳನ್ನು ಆಯ್ಕೆ ಮಾಡಿದಲ್ಲಿ ನಿಗದಿಪಡಿಸಲಾದ ಗರಿಷ್ಠ ಸಂಖ್ಯೆಯ ಗ್ರಾಮಗಳನ್ನು ಮಾತ್ರ ಪರಿಗಣಿಸಲಾಗುವುದು ಮತ್ತು ಹೆಚ್ಚಿನ ಯಾವುದೇ ಅನುದಾನವನ್ನು ನೀಡಲು ಅವಕಾಶವಿರುವುದಿಲ್ಲ.

7. ಒಂದೊಮ್ಮೆ ನಿಗದಿಪಡಿಸಿದ ಗರಿಷ್ಠ ಗ್ರಾಮಗಳ ಬದಲಾಗಿ ಕಡಿಮೆ ಸಂಖ್ಯೆಯ ಗ್ರಾಮಗಳನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿ ಆಯಾ ವಿಧಾನಸಭಾ ಕ್ಷೇತ್ರಗಳಿಗೆ ನಿಗದಿಪಡಿಸಿದ ಗರಿಷ್ಠ ಅನುದಾನವನ್ನು ನೀಡಲಾಗುವುದು.

8. ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರು ಗ್ರಾಮಗಳ ಆಯ್ಕೆ ಮಾಡಿ ಸರ್ಕಾರದ ಅನುಮೋದನೆ ಪಡೆದ ನಂತರ ಗ್ರಾಮಗಳ ಬದಲಾವಣೆಗೆ ಅವಕಾಶ ಕಲ್ಪಿಸಿರುವುದಿಲ್ಲ.

9. ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರು ಗ್ರಾಮಗಳನ್ನು ಆಯ್ಕೆ ಮಾಡುವಾಗ ಸರ್ಕಾರದ ಇತರೆ ಯೋಜನೆಗಳಡಿ ಈಗಾಗಲೇ ಆಯ್ಕೆಗೊಂಡ ಗ್ರಾಮಗಳು ಪುನರಾವರ್ತನೆಯಾಗದಂತೆ ಗಮನವಿರಿಸುವುದು.

10. ನಿಗಧಿ ಪಡಿಸಿದಂತೆ ಗ್ರಾಮಗಳ ಆಯ್ಕೆ ಮಾಡಿರುವ ಕುರಿತು ಪರಿಶೀಲಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆ ಪಡೆಯುವಾಗ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರು ಆಯ್ಕೆ ಮಾಡಿದ ಗ್ರಾಮಗಳ ಪಟ್ಟಿಯಲ್ಲಿ ಬದಲಾವಣೆ/ಸೇರ್ಪಡೆ ಮಾಡುವಾಗ ಸಂಬಂಧಪಟ್ಟ ಆಯಾ ಕ್ಷೇತ್ರದ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರ ಸಹಮತಿ ಪಡೆಯುವುದು.

11. ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರು ನಿಗಧಿಪಡಿಸಿದ ಹಾಗೂ ಮಾರ್ಗಸೂಚಿಯ ಮಾನದಂಡಗಳಿಗೆ ಅನುಗುಣವಾಗಿ ಗ್ರಾಮಗಳನ್ನು ಆಯ್ಕೆ ಮಾಡಲು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಂದ ಶಿಫಾರಸ್ಸು ಮಾಡಲು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಗತ್ಯ ಮಾಹಿತಿ/ಮಾರ್ಗದರ್ಶನ ನೀಡಿ ಜರೂರಾಗಿ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ. ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಅನುಬಂಧ - 1

**2017–18ನೇ ಸಾಲಿನಿಂದ ಆರಂಭವಾಗುವ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಗೆ ಗ್ರಾಮೀಣ ಮತಕ್ಷೇತ್ರವಾರು ಗ್ರಾಮೀಣ ವಿಧಾನಸಭಾ ಸದಸ್ಯರು ಆಯ್ಕೆ ಮಾಡಲು ನಿಗಧಿ ಮಾಡಿದ ಗ್ರಾಮಗಳ ಸಂಖ್ಯೆ ಮತ್ತು ಅನುದಾನ ನಿಗಧಿ**

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ಜಿಲ್ಲೆಗಳ ಹೆಸರು | ಗ್ರಾಮೀಣ ವಿಧಾನಸಭಾ ಕ್ಷೇತ್ರದ ಹೆಸರು | | ಗ್ರಾಮೀಣ ವಿಧಾನಸಭಾ ಮತಕ್ಷೇತ್ರಕ್ಕೆ ಹಂಚಿಕೆ ಮಾಡಿರುವ ಗರಿಷ್ಠ ಗ್ರಾಮಗಳ ಸಂಖ್ಯೆ | " ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿದ ಅನುದಾನ" |
|---|---|---|---|---|---|
| 1 | ಬೆಳಗಾವಿ | 1 | ನಿಪ್ಪಾಣಿ | 4 | 4.00 |
| | | 2 | ಚಿಕ್ಕೋಡಿ-ಸದಲಗ | 4 | 4.00 |
| | | 3 | ಅಥಣಿ | 4 | 4.00 |
| | | 4 | ಕಾಗವಾಡ | 4 | 4.00 |
| | | 5 | ಕುಡಚಿ (ಪ.ಜಾ) | 4 | 4.00 |
| | | 6 | ರಾಯಭಾಗ (ಪ.ಜಾ) | 4 | 4.00 |
| | | 7 | ಹುಕ್ಕೇರಿ | 4 | 4.00 |
| | | 8 | ಅರಬಾವಿ | 4 | 4.00 |
| | | 9 | ಗೋಕಾಕ್ | 4 | 4.00 |
| | | 10 | ಯಮಕನಮರಡಿ (ಪ.ಪಂ.) | 4 | 4.00 |
| | | 11 | ಬೆಳಗಾವಿ ದಕ್ಷಿಣ | 4 | 4.00 |
| | | 12 | ಬೆಳಗಾವಿ ಗ್ರಾಮಾಂತರ | 4 | 4.00 |
| | | 13 | ಖಾನಾಪುರ | 4 | 4.00 |
| | | 14 | ಕಿತ್ತೂರು | 4 | 4.00 |
| | | 15 | ಬೈಲಹೊಂಗಲ | 4 | 4.00 |
| | | 16 | ಸೌಂದತ್ತಿ ಯಲ್ಲಮ್ಮ | 4 | 4.00 |
| | | 17 | ರಾಮದುರ್ಗ | 4 | 4.00 |
| 2 | ಬಾಗಲಕೋಟೆ | 18 | ಮುಧೋಳ (ಪ.ಜಾ) | 4 | 4.00 |
| | | 19 | ತೇರದಾಳ | 4 | 4.00 |
| | | 20 | ಜಮಖಂಡಿ | 4 | 4.00 |
| | | 21 | ಬೀಳಗಿ | 4 | 4.00 |
| | | 22 | ಬಾದಾಮಿ | 4 | 4.00 |
| | | 23 | ಬಾಗಲಕೋಟೆ | 4 | 4.00 |
| | | 24 | ಹುನಗುಂದ | 4 | 4.00 |

| | | | | | |
|---|---|---|---|---|---|
| 3 | ಬಿಜಾಪುರ | 25 | ಮುದ್ದೇಬಿಹಾಳ | 4 | 4.00 |
| | | 26 | ದೇವರ ಹಿಪ್ಪರಗಿ | 4 | 4.00 |
| | | 27 | ಬ.ಬಾಗೇವಾಡಿ | 4 | 4.00 |
| | | 28 | ಬಬಲೇಶ್ವರ | 4 | 4.00 |
| | | 29 | ಬಿಜಾಪುರ ನಗರ | 4 | 4.00 |
| | | 30 | ನಾಗಠಾಣ (ಪ.ಜಾ) | 4 | 4.00 |
| | | 31 | ಇಂಡಿ | 4 | 4.00 |
| | | 32 | ಸಿಂಧಗಿ | 4 | 4.00 |
| 4 | ಗುಲಬರ್ಗಾ | 33 | ಅಫಜಲಪುರ | 4 | 4.00 |
| | | 34 | ಜೇವರ್ಗಿ | 4 | 4.00 |
| | | 35 | ಚಿತ್ತಾಪೂರ (ಪ.ಜಾ) | 4 | 4.00 |
| | | 36 | ಸೇಡಂ | 4 | 4.00 |
| | | 37 | ಚಿಂಚೋಳಿ (ಪ.ಜಾ) | 4 | 4.00 |
| | | 38 | ಗುಲ್ಬರ್ಗಾ-ಗ್ರಾ (ಪ.ಜಾ) | 4 | 4.00 |
| | | 39 | ಗುಲ್ಬರ್ಗಾ ದಕ್ಷಿಣ | 4 | 4.00 |
| | | 40 | ಆಳಂದ | 4 | 4.00 |
| 5 | ಬೀದರ್ | 41 | ಬಸವಕಲ್ಯಾಣ | 4 | 4.00 |
| | | 42 | ಹುಮನಾಬಾದ | 4 | 4.00 |
| | | 43 | ಬೀದರ್ ದಕ್ಷಿಣ | 4 | 4.00 |
| | | 44 | ಬೀದರ್ | 4 | 4.00 |
| | | 45 | ಬಾಲ್ಕಿ | 4 | 4.00 |
| | | 46 | ಔರಾದ್ (ಪ.ಜಾ) | 4 | 4.00 |
| 6 | ರಾಯಚೂರು | 47 | ರಾಯಚೂರು-ಗ್ರಾ (ಪ.ಪಂ.) | 4 | 4.00 |
| | | 48 | ಮಾನ್ವಿ (ಪ.ಪಂ.) | 4 | 4.00 |
| | | 49 | ದೇವದುರ್ಗ (ಪ.ಪಂ.) | 4 | 4.00 |
| | | 50 | ಲಿಂಗಸಗೂರ (ಪ.ಜಾ) | 4 | 4.00 |
| | | 51 | ಸಿಂಧನೂರು | 4 | 4.00 |
| | | 52 | ಮಸ್ಕಿ (ಪಾ.ಪಂ) | 4 | 4.00 |
| 7 | ಕೊಪ್ಪಳ | 53 | ಕುಷ್ಟಗಿ | 4 | 4.00 |
| | | 54 | ಕನಕಗಿರಿ (ಪ.ಜಾ) | 4 | 4.00 |
| | | 55 | ಗಂಗಾವತಿ | 4 | 4.00 |
| | | 56 | ಯಲಬುರ್ಗಾ | 4 | 4.00 |
| | | 57 | ಕೊಪ್ಪಳ | 4 | 4.00 |
| 8 | ಗದಗ | 58 | ಶಿರಹಟ್ಟಿ (ಪ.ಜಾ) | 4 | 4.00 |
| | | 59 | ಗದಗ | 4 | 4.00 |
| | | 60 | ರೋಣ | 4 | 4.00 |
| | | 61 | ನರಗುಂದ | 4 | 4.00 |

| | | | | | |
|---|---|---|---|---|---|
| 9 | ಧಾರವಾಡ | 62 | ನವಲಗುಂದ | 4 | 4.00 |
| | | 63 | ಕುಂದಗೋಳ | 4 | 4.00 |
| | | 64 | ಧಾರವಾಡ | 4 | 4.00 |
| | | 65 | ಕಲಘಟಗಿ | 4 | 4.00 |
| 10 | ಉತ್ತರ ಕನ್ನಡ | 66 | ಕುಮಟ | 4 | 4.00 |
| | | 67 | ಭಟ್ಕಳ | 4 | 4.00 |
| | | 68 | ಶಿರಸಿ | 4 | 4.00 |
| | | 69 | ಹಳಿಯಾಳ | 4 | 4.00 |
| | | 70 | ಕಾರವಾರ | 4 | 4.00 |
| | | 71 | ಯಲ್ಲಾಪುರ | 4 | 4.00 |
| 11 | ಹಾವೇರಿ | 72 | ಹಾನಗಲ್ | 4 | 4.00 |
| | | 73 | ಶಿಗ್ಗಾಂವ್ | 4 | 4.00 |
| | | 74 | ಹಾವೇರಿ (ಪ.ಜಾ) | 4 | 4.00 |
| | | 75 | ಬ್ಯಾಡಗಿ | 4 | 4.00 |
| | | 76 | ಹಿರೇಕೆರೂರು | 4 | 4.00 |
| | | 77 | ರಾಣೇಬೆನ್ನೂರು | 4 | 4.00 |
| 12 | ಬಳ್ಳಾರಿ | 78 | ಹಡಗಲಿ (ಪ.ಜಾ) | 4 | 4.00 |
| | | 79 | ಹ.ಬೊಮ್ಮನಹಳ್ಳಿ (ಪ.ಜಾ) | 4 | 4.00 |
| | | 80 | ವಿಜಯನಗರ | 4 | 4.00 |
| | | 81 | ಕಂಪ್ಲಿ (ಪ.ಪಂ) | 4 | 4.00 |
| | | 82 | ಸಿರಗುಪ್ಪ (ಪ.ಪಂ) | 4 | 4.00 |
| | | 83 | ಬಳ್ಳಾರಿ (ಪ.ಪಂ) | 4 | 4.00 |
| | | 84 | ಸಂಡೂರು (ಪ.ಪಂ) | 4 | 4.00 |
| | | 85 | ಕೂಡ್ಲಿಗಿ (ಪ.ಪಂ) | 4 | 4.00 |
| 13 | ಚಿತ್ರದುರ್ಗ | 86 | ಮೊಳಕಾಲ್ಮೂರು (ಪ.ಪಂ) | 4 | 4.00 |
| | | 87 | ಚಳ್ಳಕೆರೆ (ಪ.ಪಂ) | 4 | 4.00 |
| | | 88 | ಚಿತ್ರದುರ್ಗ | 4 | 4.00 |
| | | 89 | ಹಿರಿಯೂರು | 4 | 4.00 |
| | | 90 | ಹೊಸದುರ್ಗ | 4 | 4.00 |
| | | 91 | ಹೊಳಲ್ಕೆರೆ (ಪ.ಜಾ) | 4 | 4.00 |
| 14 | ದಾವಣಗೆರೆ | 92 | ಜಗಳೂರು (ಪ.ಪಂ) | 4 | 4.00 |
| | | 93 | ಹರಪನಹಳ್ಳಿ | 4 | 4.00 |
| | | 94 | ಹರಿಹರ | 4 | 4.00 |
| | | 95 | ದಾವಣಗೆರೆ ಉತ್ತರ | 4 | 4.00 |
| | | 96 | ದಾವಣಗೆರೆ ದಕ್ಷಿಣ | 4 | 4.00 |
| | | 97 | ಮಾಯಕೊಂಡ (ಪ.ಜಾ) | 4 | 4.00 |
| | | 98 | ಚನ್ನಗಿರಿ | 4 | 4.00 |
| | | 99 | ಹೊನ್ನಾಳಿ | 4 | 4.00 |

| | | | | | |
|---|---|---|---|---|---|
| 15 | ಶಿವಮೊಗ್ಗ | 100 | ಶಿವಮೊಗ್ಗ-ಗ್ರಾ (ಪ.ಜಾ) | 4 | 4.00 |
| | | 101 | ಭದ್ರಾವತಿ | 4 | 4.00 |
| | | 102 | ತೀರ್ಥಹಳ್ಳಿ | 4 | 4.00 |
| | | 103 | ಶಿಕಾರಿಪುರ | 4 | 4.00 |
| | | 104 | ಸೊರಬ | 4 | 4.00 |
| | | 105 | ಸಾಗರ | 4 | 4.00 |
| 16 | ಉಡುಪಿ | 106 | ಬೈಂಧೂರು | 4 | 4.00 |
| | | 107 | ಕುಂದಾಪುರ | 4 | 4.00 |
| | | 108 | ಉಡುಪಿ | 4 | 4.00 |
| | | 109 | ಕಾಪು | 4 | 4.00 |
| | | 110 | ಕಾರ್ಕಳ | 4 | 4.00 |
| 17 | ಚಿಕ್ಕಮಗಳೂರು | 111 | ಮೂಡಿಗೆರೆ (ಪ.ಜಾ) | 4 | 4.00 |
| | | 112 | ಚಿಕ್ಕಮಗಳೂರು | 4 | 4.00 |
| | | 113 | ತರೀಕೆರೆ | 4 | 4.00 |
| | | 114 | ಕಡೂರು | 4 | 4.00 |
| | | 115 | ಶೃಂಗೇರಿ | 4 | 4.00 |
| 18 | ತುಮಕೂರು | 116 | ಚಿಕ್ಕನಾಯಕನಹಳ್ಳಿ | 4 | 4.00 |
| | | 117 | ತಿಪಟೂರು | 4 | 4.00 |
| | | 118 | ತುರುವೇಕೆರೆ | 4 | 4.00 |
| | | 119 | ಕುಣಿಗಲ್ | 4 | 4.00 |
| | | 120 | ತುಮಕೂರು ಗ್ರಾಮಾಂತರ | 4 | 4.00 |
| | | 121 | ಕೊರಟಗೆರೆ (ಪ.ಜಾ) | 4 | 4.00 |
| | | 122 | ಗುಬ್ಬಿ | 4 | 4.00 |
| | | 123 | ಶಿರಾ | 4 | 4.00 |
| | | 124 | ಪಾವಗಡ (ಪ.ಜಾ) | 4 | 4.00 |
| | | 125 | ಮಧುಗಿರಿ | 4 | 4.00 |
| 19 | ಚಿಕ್ಕಬಳ್ಳಾಪುರ | 126 | ಗೌರಿಬಿದನೂರು | 4 | 4.00 |
| | | 127 | ಚಿಕ್ಕಬಳ್ಳಾಪುರ | 4 | 4.00 |
| | | 128 | ಶಿಡ್ಲಘಟ್ಟ | 4 | 4.00 |
| | | 129 | ಚಿಂತಾಮಣಿ | 4 | 4.00 |
| | | 130 | ಬಾಗೇಪಲ್ಲಿ | 4 | 4.00 |

| | | | | | |
|---|---|---|---|---|---|
| 20 | ಕೋಲಾರ | 131 | ಶ್ರೀನಿವಾಸಪುರ | 4 | 4.00 |
| | | 132 | ಮುಳಬಾಗಿಲು (ಪ.ಜಾ) | 4 | 4.00 |
| | | 133 | ಕೆಜಿಎಫ್ (ಪ.ಜಾ) | 4 | 4.00 |
| | | 134 | ಬಂಗಾರಪೇಟೆ (ಪ.ಜಾ) | 4 | 4.00 |
| | | 135 | ಕೋಲಾರ | 4 | 4.00 |
| | | 136 | ಮಾಲೂರು | 4 | 4.00 |
| 21 | ಬೆಂಗಳೂರು ನಗರ | 137 | ಆನೆಕಲ್ | 4 | 4.00 |
| | | 138 | ಬೆಂಗಳೂರು ದಕ್ಷಿಣ | 4 | 4.00 |
| | | 139 | ಬ್ಯಾಟರಾಯನಪುರ | 4 | 4.00 |
| | | 140 | ಮಹದೇವಪುರ | 4 | 4.00 |
| | | 141 | ಯಲಹಂಕ | 4 | 4.00 |
| | | 142 | ಯಶವಂತಪುರ | 4 | 4.00 |
| 22 | ಬೆಂಗಳೂರು ಗ್ರಾಮಾಂತರ | 143 | ದೇವನಹಳ್ಳಿ (ಪ.ಜಾ) | 4 | 4.00 |
| | | 144 | ದೊಡ್ಡಬಳ್ಳಾಪುರ | 4 | 4.00 |
| | | 145 | ಹೊಸಕೋಟೆ | 4 | 4.00 |
| | | 146 | ನೆಲಮಂಗಲ (ಪ.ಜಾ) | 4 | 4.00 |
| 23 | ರಾಮನಗರ | 147 | ಮಾಗಡಿ | 4 | 4.00 |
| | | 148 | ರಾಮನಗರ | 4 | 4.00 |
| | | 149 | ಕನಕಪುರ | 4 | 4.00 |
| | | 150 | ಚನ್ನಪಟ್ಟಣ | 4 | 4.00 |
| 24 | ಮಂಡ್ಯ | 151 | ಮಳವಳ್ಳಿ (ಪ.ಜಾ) | 4 | 4.00 |
| | | 152 | ಮದ್ದೂರು | 4 | 4.00 |
| | | 153 | ಮೇಲುಕೋಟೆ | 4 | 4.00 |
| | | 154 | ಮಂಡ್ಯ | 4 | 4.00 |
| | | 155 | ಶ್ರೀರಂಗಪಟ್ಟಣ | 4 | 4.00 |
| | | 156 | ನಾಗಮಂಗಲ | 4 | 4.00 |
| | | 157 | ಕೃಷ್ಣರಾಜಪೇಟೆ | 4 | 4.00 |
| 25 | ಹಾಸನ | 158 | ಶ್ರವಣಬೆಳಗೊಳ | 4 | 4.00 |
| | | 159 | ಅರಸೀಕೆರೆ | 4 | 4.00 |
| | | 160 | ಬೇಲೂರು | 4 | 4.00 |
| | | 161 | ಹಾಸನ | 4 | 4.00 |
| | | 162 | ಹೊಳೆನರಸೀಪುರ | 4 | 4.00 |
| | | 163 | ಅರಕಲಗೂಡು | 4 | 4.00 |
| | | 164 | ಸಕಲೇಶಪುರ (ಪ.ಜಾ) | 4 | 4.00 |

| | | | | | |
|---|---|---|---|---|---|
| 26 | ದಕ್ಷಿಣ ಕನ್ನಡ | 165 | ಬೆಳ್ತಂಗಡಿ | 4 | 4.00 |
| | | 166 | ಮೂಡಬಿದ್ರಿ | 4 | 4.00 |
| | | 167 | ಮಂಗಳೂರು ನಗರ ಉತ್ತರ | 4 | 4.00 |
| | | 168 | ಮಂಗಳೂರು ನಗರ ದಕ್ಷಣ | 4 | 4.00 |
| | | 169 | ಬಂಟ್ವಾಳ | 4 | 4.00 |
| | | 170 | ಪುತ್ತೂರು | 4 | 4.00 |
| | | 171 | ಸೂಳ್ಯ (ಪ.ಜಾ) | 4 | 4.00 |
| 27 | ಕೊಡಗು | 172 | ಮಡಿಕೇರಿ | 4 | 4.00 |
| | | 173 | ವಿರಾಜಪೇಟೆ | 4 | 4.00 |
| 28 | ಮೈಸೂರು | 174 | ಪಿರಿಯಾಪಟ್ಟಣ | 4 | 4.00 |
| | | 175 | ಕೃಷ್ಣರಾಜನಗರ | 4 | 4.00 |
| | | 176 | ಹುಣಸೂರು | 4 | 4.00 |
| | | 177 | ಹೆಚ್.ಡಿ.ಕೋಟೆ (ಪ.ಪಂ) | 4 | 4.00 |
| | | 178 | ನಂಜನಗೂಡು (ಪ.ಜಾ) | 4 | 4.00 |
| | | 179 | ಚಾಮುಂಡೇಶ್ವರಿ | 4 | 4.00 |
| | | 180 | ವರುಣ | 4 | 4.00 |
| | | 181 | ಟಿ.ನರಸೀಪುರ (ಪ.ಜಾ) | 4 | 4.00 |
| 29 | ಚಾಮರಾಜ ನಗರ | 182 | ಹನೂರು | 4 | 4.00 |
| | | 183 | ಕೊಳ್ಳೇಗಾಲ (ಪ.ಜಾ) | 4 | 4.00 |
| | | 184 | ಚಾಮರಾಜನಗರ | 4 | 4.00 |
| | | 185 | ಗುಂಡ್ಲುಪೇಟೆ | 4 | 4.00 |
| 30 | ಯಾದಗಿರ್ | 186 | ಗುರುಮಿಟ್ಕಲ್ | 4 | 4.00 |
| | | 187 | ಶಹಾಪುರ್ | 4 | 4.00 |
| | | 188 | ಶೋರಾಪುರ್ | 4 | 4.00 |
| | | 189 | ಯಾದಗಿರ್ | 4 | 4.00 |
| ಒಟ್ಟು | | | | 756 | 756.00 |

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಅನುಬಂಧ - 2

**2017–18ನೇ ಸಾಲಿನಿಂದ ಆರಂಭವಾಗುವ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಗೆ ಎರಡು ಪೂರ್ಣ ತಾಲ್ಲೂಕು ಹಾಗೂ ಒಂದು ಭಾಗಶಃ ತಾಲ್ಲೂಕು ಸೇರಿರುವ 6 ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳಿಗೆ ಗ್ರಾಮೀಣ ವಿಧಾನಸಭಾ ಸದಸ್ಯರು ಆಯ್ಕೆ ಮಾಡಲು ನಿಗಧಿ ಮಾಡಿದ ಗ್ರಾಮಗಳ ಸಂಖ್ಯೆ ಮತ್ತು ಅನುದಾನ ನಿಗಧಿ**

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ವಿಧಾನ ಸಭಾ ಕ್ಷೇತ್ರ | ಕ್ಷೇತ್ರ ವ್ಯಾಪ್ತಿ | ಆಯ್ಕೆ ಮಾಡಲು ನಿಗಧಿಪಡಿಸಿರುವ ಗ್ರಾಮಗಳ ಸಂಖ್ಯೆ | ನಿಗಧಿಪಡಿಸಿರುವ ಅನುದಾನ |
|---|---|---|---|---|
| 1 | ಶೃಂಗೇರಿ | ಶೃಂಗೇರಿ ತಾ: (ಪೂರ್ಣ) | 2 | 2.00 |
| | | ಕೊಪ್ಪ ತಾ: (ಪೂರ್ಣ) | | |
| | | ನರಸಿಂಹರಾಜಪುರ ತಾ: (ಪೂರ್ಣ) | | |
| | | ಚಿಕ್ಕಮಗಳೂರು ತಾ: (ಭಾಗ) | | |
| 2 | ಸಕಲೇಶಪುರ | ಸಕಲೇಶಪುರ ತಾ: (ಪೂರ್ಣ) | 2 | 2.00 |
| | | ಆಲೂರು ತಾ: (ಪೂರ್ಣ) | | |
| | | ಹಾಸನ ತಾ: (ಭಾಗ) | | |
| 3 | ಬಾಗೇಪಲ್ಲಿ | ಗುಡಿಬಂಡೆ ತಾ: (ಪೂರ್ಣ) | 2 | 2.00 |
| | | ಬಾಗೇಪಲ್ಲಿ ತಾ: (ಪೂರ್ಣ) | | |
| 4 | ಕಾರವಾರ | ಕಾರವಾರ ತಾ: (ಪೂರ್ಣ) | 2 | 2.00 |
| | | ಅಂಕೋಲಾ ತಾ: (ಪೂರ್ಣ) | | |
| 5 | ಹಳಿಯಾಳ | ಸೂಪಾ ತಾ: (ಪೂರ್ಣ) | 2 | 2.00 |
| | | ಹಳಿಯಾಳ ತಾ: (ಪೂರ್ಣ) | | |
| 6 | ಯಲ್ಲಾಪುರ | ಯಲ್ಲಾಪುರ ತಾ: (ಪೂರ್ಣ) | 2 | 2.00 |
| | | ಮುಂಡಗೋಡ ತಾ: (ಪೂರ್ಣ) | | |
| | | ಸಿರಸಿ ತಾ: (ಭಾಗ) | | |
| ಒಟ್ಟು | | | 12 | 12.00 |

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಅನುಬಂಧ - 2(A)

**2017–18ನೇ ಸಾಲಿನಿಂದ ಆರಂಭವಾಗುವ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಗೆ ಒಂದು ಪೂರ್ಣ ತಾಲ್ಲೂಕು ಹಾಗೂ ಎರಡು ಭಾಗಶಃ ತಾಲ್ಲೂಕು ಸೇರಿರುವ 6 ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳಿಗೆ ಗ್ರಾಮೀಣ ವಿಧಾನಸಭಾ ಸದಸ್ಯರು ಆಯ್ಕೆ ಮಾಡಲು ನಿಗಧಿ ಮಾಡಿದ ಗ್ರಾಮಗಳ ಸಂಖ್ಯೆ ಮತ್ತು ಅನುದಾನ ನಿಗಧಿ**

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ವಿಧಾನ ಸಭಾ ಕ್ಷೇತ್ರ | ಕ್ಷೇತ್ರ ವ್ಯಾಪ್ತಿ | ಆಯ್ಕೆ ಮಾಡಲು ನಿಗಧಿಪಡಿಸಿರುವ ಗ್ರಾಮಗಳ ಸಂಖ್ಯೆ | ನಿಗಧಿಪಡಿಸಿರುವ ಅನುದಾನ |
|---|---|---|---|---|
| 1 | ಬೀಳಗಿ | ಬೀಳಗಿ ತಾ: (ಪೂರ್ಣ)<br>ಬಾದಾಮಿ- ತಾ: (ಭಾಗ)<br>ಬಾಗಲಕೋಟೆ- ತಾ: (ಭಾಗ) | 2 | 2.00 |
| 2 | ಕೊಳ್ಳೇಗಾಲ | ಯಳಂದೂರು ತಾ: (ಪೂರ್ಣ)<br>ಕೊಳ್ಳೇಗಾಲ ತಾ: (ಭಾಗ)<br>ಚಾಮರಾಜನಗರ ತಾ: (ಭಾಗ) | 2 | 2.00 |
| 3 | ನರಗುಂದ | ನರಗುಂದ ತಾ: (ಪೂರ್ಣ)<br>ರೋಣ- ತಾ: (ಭಾಗ)<br>ಗದಗ- ತಾ: (ಭಾಗ) | 2 | 2.00 |
| 4 | ಬ್ಯಾಡಗಿ | ಬ್ಯಾಡಗಿ ತಾ: (ಪೂರ್ಣ)<br>ಹಾವೇರಿ ತಾ: (ಭಾಗ)<br>ರಾಣಿಬೆನ್ನೂರು ತಾ: (ಭಾಗ) | 2 | 2.00 |
| 5 | ಕೊರಟಗೆರೆ | ಕೊರಟಗೆರೆ ತಾ: (ಪೂರ್ಣ)<br>ಮಧುಗಿರಿ ತಾ: (ಭಾಗ)<br>ತುಮಕೂರು ತಾ: (ಭಾಗ) | 2 | 2.00 |
| 6 | ತೀರ್ಥಹಳ್ಳಿ | ತೀರ್ಥಹಳ್ಳಿ ತಾ: (ಪೂರ್ಣ)<br>ಹೊಸನಗರ ತಾ: (ಭಾಗ)<br>ಶಿವಮೊಗ್ಗ ತಾ: (ಭಾಗ) | 2 | 2.00 |
| ಒಟ್ಟು | | | 12 | 12.00 |

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಅನುಬಂಧ - 3

**2017–18ನೇ ಸಾಲಿನಿಂದ ಆರಂಭವಾಗುವ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಗೆ ಒಂದು ಪೂರ್ಣ ತಾಲ್ಲೂಕು ಹಾಗೂ ಒಂದು ಭಾಗಶಃ ತಾಲ್ಲೂಕು ಸೇರಿರುವ 33 ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳಿಗೆ ಗ್ರಾಮೀಣ ವಿಧಾನಸಭಾ ಸದಸ್ಯರು ಆಯ್ಕೆ ಮಾಡಲು ನಿಗಧಿ ಮಾಡಿದ ಗ್ರಾಮಗಳ ಸಂಖ್ಯೆ ಮತ್ತು ಅನುದಾನ ನಿಗಧಿ**

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ವಿಧಾನ ಸಭಾ ಕ್ಷೇತ್ರ | ಕ್ಷೇತ್ರ ವ್ಯಾಪ್ತಿ | ಆಯ್ಕೆ ಮಾಡಲು ನಿಗಧಿಪಡಿಸಿರುವ ಗ್ರಾಮಗಳ ಸಂಖ್ಯೆ | ನಿಗಧಿಪಡಿಸಿರುವ ಅನುದಾನ |
|---|---|---|---|---|
| 1 | ಅಫ್ಜಲ್‌ಪುರ | ಅಫ್ಜಲ್‌ಪುರ ತಾ: (ಪೂರ್ಣ)<br>ಗುಲ್ಬರ್ಗ ತಾ: (ಭಾಗ) | 1 | 1.00 |
| 2 | ಸೇಡಂ | ಸೇಡಂ ತಾ: (ಪೂರ್ಣ)<br>ಚಿಂಚೋಳಿ ತಾ: (ಭಾಗ) | 1 | 1.00 |
| 3 | ಶಿರಹಟ್ಟಿ | ಶಿರಹಟ್ಟಿ ತಾ: (ಪೂರ್ಣ)<br>ಮುಂಡರಗಿ ತಾ: (ಭಾಗ) | 1 | 1.00 |
| 4 | ನವಲಗುಂದ | ನವಲಗುಂದ ತಾ: (ಪೂರ್ಣ)<br>ಹುಬ್ಬಳ್ಳಿ ತಾ: (ಭಾಗ) | 1 | 1.00 |
| 5 | ಕುಂದಗೋಳ | ಕುಂದಗೋಳ ತಾ: (ಪೂರ್ಣ)<br>ಹುಬ್ಬಳ್ಳಿ ತಾ: (ಭಾಗ) | 1 | 1.00 |
| 6 | ಕಲಘಟಗಿ | ಕಲಘಟಗಿ ತಾ: (ಪೂರ್ಣ)<br>ಧಾರವಾಡ ತಾ: (ಭಾಗ) | 1 | 1.00 |
| 7 | ಕುಮಟಾ | ಕುಮಟಾ ತಾಲ್ಲೂಕು<br>ಹೊನ್ನಾವರ ತಾ: (ಭಾಗ) | 1 | 1.00 |
| 8 | ಭಟ್ಕಳ | ಭಟ್ಕಳ ತಾ: (ಪೂರ್ಣ)<br>ಹೊನ್ನಾವರ ತಾ: (ಭಾಗ) | 1 | 1.00 |
| 9 | ಶಿರಸಿ | ಸಿದ್ದಾಪುರ ತಾ: (ಪೂರ್ಣ)<br>ಶಿರಸಿ ತಾ: (ಭಾಗ) | 1 | 1.00 |
| 10 | ಶಿಗ್ಗಾಂವ್ | ಶಿಗ್ಗಾಂವ್ ತಾ: (ಪೂರ್ಣ)<br>ಸವಣೂರು ತಾ: (ಭಾಗ) | 1 | 1.00 |
| 11 | ಹಡಗಲಿ | ಹಡಗಲಿ ತಾ: (ಪೂರ್ಣ)<br>ಹಗರಿಬೊಮ್ಮನಹಳ್ಳಿ ತಾ: (ಭಾಗ) | 1 | 1.00 |
| 12 | ಸಂಡೂರು | ಸಚಿಡೂರು ತಾ: (ಪೂರ್ಣ)<br>ಬಳ್ಳಾರಿ ತಾ: (ಭಾಗ) | 1 | 1.00 |
| 13 | ಮೊಳಕಾಲ್ಮೂರು | ಮೊಳಕಾಲ್ಮೂರು ತಾ: (ಪೂರ್ಣ)<br>ಚಳ್ಳಕೆರೆ ತಾ: (ಭಾಗ) | 1 | 1.00 |
| 14 | ಜಗಳೂರು | ಜಗಳೂರು ತಾ: (ಪೂರ್ಣ)<br>ಹರಪನಹಳ್ಳಿ ತಾ: (ಭಾಗ) | 1 | 1.00 |
| 15 | ಸೊರಬ | ಸೊರಬ ತಾ: (ಪೂರ್ಣ)<br>ಸಾಗರ ತಾ: (ಭಾಗ) | 1 | 1.00 |
| 16 | ಮೂಡಿಗೆರೆ | ಮೂಡಿಗೆರೆ ತಾ: (ಪೂರ್ಣ)<br>ಚಿಕ್ಕಮಗಳೂರು ತಾ: (ಭಾಗ) | 1 | 1.00 |
| 17 | ಚಿಕ್ಕನಾಯಕನಹಳ್ಳಿ | ಚಿಕ್ಕನಾಯಕನಹಳ್ಳಿ ತಾ: (ಪೂರ್ಣ)<br>ಶಿರಾ ತಾ: (ಭಾಗ) | 1 | 1.00 |

| | | | | |
|---|---|---|---|---|
| 18 | ತುರುವೇಕೆರೆ | ತುರುವೇಕೆರೆ ತಾ: (ಪೂರ್ಣ)<br>ಗುಬ್ಬಿ ತಾ: (ಭಾಗ) | 1 | 1.00 |
| 19 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ತಾ: (ಪೂರ್ಣ)<br>ಗೌರಿಬಿದನೂರು ತಾ: (ಭಾಗ) | 1 | 1.00 |
| 20 | ಶಿಡ್ಲಘಟ್ಟ | ಶಿಡ್ಲಘಟ್ಟ ತಾ: (ಪೂರ್ಣ)<br>ಚಿಂತಾಮಣಿ ತಾ: (ಭಾಗ) | 1 | 1.00 |
| 21 | ಶ್ರೀನಿವಾಸಪುರ | ಶ್ರೀನಿವಾಸಪುರ ತಾ: (ಪೂರ್ಣ)<br>ಕೋಲಾರ ತಾ: (ಭಾಗ) | 1 | 1.00 |
| 22 | ದೇವನಹಳ್ಳಿ | ದೇವನಹಳ್ಳಿ ತಾ: (ಪೂರ್ಣ)<br>ದೊಡ್ಡಬಳ್ಳಾಪುರ ತಾ: (ಭಾಗ) | 1 | 1.00 |
| 23 | ನೆಲಮಂಗಲ | ನೆಲಮಂಗಲ ತಾ: (ಪೂರ್ಣ)<br>ಮಾಗಡಿ ತಾ: (ಭಾಗ) | 1 | 1.00 |
| 24 | ಮೇಲುಕೋಟೆ | ಪಾಂಡವಪುರ ತಾ: (ಪೂರ್ಣ)<br>ಮಂಡ್ಯ ತಾ: (ಭಾಗ) | 1 | 1.00 |
| 25 | ಶ್ರೀರಂಗಪಟ್ಟಣ | ಶ್ರೀರಂಗಪಟ್ಟಣ ತಾ: (ಪೂರ್ಣ)<br>ಮಂಡ್ಯ ತಾ: (ಭಾಗ) | 1 | 1.00 |
| 26 | ನಾಗಮಂಗಲ | ನಾಗಮಂಗಲ ತಾ: (ಪೂರ್ಣ)<br>ಮದ್ದೂರು ತಾ: (ಭಾಗ) | 1 | 1.00 |
| 27 | ಬೇಲೂರು | ಬೇಲೂರು ತಾ: (ಪೂರ್ಣ)<br>ಅರಸೀಕೆರೆ ತಾ: (ಭಾಗ) | 1 | 1.00 |
| 28 | ಅರಕಲಗೂಡು | ಅರಕಲಗೂಡು ತಾ: (ಪೂರ್ಣ)<br>ಹೊಳೆನರಸೀಪುರ ತಾ: (ಭಾಗ) | 1 | 1.00 |
| 29 | ಸುಳ್ಯ | ಸುಳ್ಯ ತಾ: (ಪೂರ್ಣ)<br>ಪುತ್ತೂರು ತಾ: (ಭಾಗ) | 1 | 1.00 |
| 30 | ಮಡಿಕೇರಿ | ಸೋಮವಾರಪೇಟೆ ತಾ: (ಪೂರ್ಣ)<br>ಮಡಿಕೇರಿ ತಾ:-ಭಾಗ | 1 | 1.00 |
| 31 | ವೀರಾಜಪೇಟೆ | ವೀರಾಜಪೇಟೆ ತಾ: (ಪೂರ್ಣ)<br>ಮಡಿಕೇರಿ ತಾ: (ಭಾಗ) | 1 | 1.00 |
| 32 | ಗುಂಡ್ಲಪೇಟೆ | ಗುಂಡ್ಲಪೇಟೆ ತಾ: (ಪೂರ್ಣ)<br>ಚಾಮರಾಜನಗರ ತಾ: (ಭಾಗ) | 1 | 1.00 |
| 33 | ಹೊಳಲ್ಕೆರೆ | ಹೊಳಲ್ಕೆರೆ ತಾ: (ಪೂರ್ಣ)<br>ಚಿತ್ರದುರ್ಗ ತಾ: (ಭಾಗ) | 1 | 1.00 |
| ಒಟ್ಟು | | | 33 | 33.00 |

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಅನುಬಂಧ - 4

**2017–18ನೇ ಸಾಲಿನಿಂದ ಆರಂಭವಾಗುವ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಗೆ ಮಾನ್ಯ ವಿಧಾನ ಪರಿಷತ್ ಸದಸ್ಯರು ಆಯ್ಕೆ ಮಾಡಲು ನಿಗಧಿ ಮಾಡಿದ ಗ್ರಾಮಗಳ ಸಂಖ್ಯೆ ಮತ್ತು ಅನುದಾನ ನಿಗಧಿ**

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ವಿಧಾನ ಪರಿಷತ್ ಸದಸ್ಯರ ಹೆಸರು | ಆಯ್ಕೆ ಮಾಡಲು ನಿಗಧಿಪಡಿಸಿರುವ ಗ್ರಾಮಗಳ ಸಂಖ್ಯೆ | ನಿಗಧಿಪಡಿಸಿರುವ ಅನುದಾನ |
|---|---|---|---|
| **ವಿಧಾನ ಸಭೆಯಿಂದ ಚುನಾಯಿತಗೊಂಡವರು** | | | |
| 1 | ಬಿ.ಎಸ್.ಸುರೇಶ್ | 1 | 1.00 |
| 2 | ಬಿ.ಜೆ.ಪುಟ್ಟಸ್ವಾಮಿ | 1 | 1.00 |
| 3 | ಎಂ.ಆರ್.ಸೀತಾರಾಂ | 1 | 1.00 |
| 4 | ಮೋಟಮ್ಮ | 1 | 1.00 |
| 5 | ಡಿ.ಎಸ್.ವೀರಯ್ಯ | 1 | 1.00 |
| 6 | ಸಯದ್ ಮುಧೀರ್ ಆಗಾ | 1 | 1.00 |
| 7 | ಸೋಮಣ್ಣ ಮ.ಬೇವಿನಮರದ | 1 | 1.00 |
| 8 | ರಘುನಾಥ ರಾವ್ ಮಲ್ಕಾಪೂರೆ | 1 | 1.00 |
| 9 | ಭಾನುಪ್ರಕಾಶ್ | 1 | 1.00 |
| 10 | ಕೆ.ಗೋವಿಂದರಾಜ್ | 1 | 1.00 |
| 11 | ಕೆ.ಎಸ್.ಈಶ್ವರಪ್ಪ | 1 | 1.00 |
| 12 | ಜಯಮ್ಮ | 1 | 1.00 |
| 13 | ಡಾ.ಜಿ. ಪರಮೇಶ್ವರ | 1 | 1.00 |
| 14 | ಎನ್.ಎಸ್.ಬೋಸ್‌ರಾಜು | 1 | 1.00 |
| 15 | ಹೆಚ್.ಎಂ.ರೇವಣ್ಣ | 1 | 1.00 |
| 16 | ಟಿ.ಎ.ಶರವಣ | 1 | 1.00 |
| 17 | ಡಿ.ಯು.ಮಲ್ಲಿಕಾರ್ಜುನ | 1 | 1.00 |
| 18 | ರಿಜ್ವಾನ್ ಅರ್ಷದ್ | 1 | 1.00 |
| 19 | ರಾಮಪ್ಪ ತಿಮ್ಮಾಪೂರ | 1 | 1.00 |
| 20 | ಅಲ್ಲಂ ವೀರಭದ್ರಪ್ಪ | 1 | 1.00 |
| 21 | ವಿ.ಸೋಮಣ್ಣ | 1 | 1.00 |
| 22 | ಎಸ್.ವೀಣಾ ಅಚ್ಚಯ್ಯ | 1 | 1.00 |
| 23 | ಕೆ.ವಿ.ನಾರಾಯಣಸ್ವಾಮಿ | 1 | 1.00 |
| 24 | ಲಹರ್ ಸಿಂಗ್ ಸಿರೋಯಾ | 1 | 1.00 |

| ಸ್ಥಳೀಯ ಸಂಸ್ಥೆಗಳ ಕ್ಷೇತ್ರ | | | |
|---|---|---|---|
| 25 | ವಿಜಯ ಸಿಂಗ್ | 1 | 1.00 |
| 26 | ಬಿ.ಜಿ.ಪಾಟೀಲ್ | 1 | 1.00 |
| 27 | ಎಸ್.ಆರ್.ಪಾಟೀಲ್ | 1 | 1.00 |
| 28 | ಬಸನಗೌಡ ಆರ್.ಪಾಟೀಲ್ (ಯತ್ನಾಳ್) | 1 | 1.00 |
| 29 | ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ | 1 | 1.00 |
| 30 | ವಿವೇಕ್‌ರಾವ್ ವಸಂತ್‌ರಾವ್ ಪಾಟೀಲ್ | 1 | 1.00 |
| 31 | ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ | 1 | 1.00 |
| 32 | ಪ್ರದೀಪ್ ಶೆಟ್ಟರ್ | 1 | 1.00 |
| 33 | ಮಾನೆ ಶ್ರೀನಿವಾಸ್ | 1 | 1.00 |
| 34 | ಬಸವರಾಜ್ ಪಾಟೀಲ್ ಇಟಗಿ | 1 | 1.00 |
| 35 | ಕೆ.ಸಿ.ಕೊಂಡಯ್ಯ | 1 | 1.00 |
| 36 | ಜಿ.ರಘು ಆಚಾರ್ | 1 | 1.00 |
| 37 | ಆರ್ ಪ್ರಸನ್ನ ಕುಮಾರ್ | 1 | 1.00 |
| 38 | ಕೆ.ಪ್ರತಾಪಚಂದ್ರ ಶೆಟ್ಟಿ | 1 | 1.00 |
| 39 | ಕೋಟ ಶ್ರೀನಿವಾಸ ಪೂಜಾರಿ | 1 | 1.00 |
| 40 | ಪ್ರಾಣೇಶ್ ಎಂ.ಕೆ | 1 | 1.00 |
| 41 | ಎಂ.ಎ.ಗೋಪಾಲಸ್ವಾಮಿ | 1 | 1.00 |
| 42 | ಕಾಂತರಾಜು (ಬಿಎಂಎಲ್) | 1 | 1.00 |
| 43 | ಎನ್.ಅಪ್ಪಾಜಿಗೌಡ | 1 | 1.00 |
| 44 | ಎಂ.ನಾರಾಯಣಸ್ವಾಮಿ | 1 | 1.00 |
| 45 | ಎಸ್.ರವಿ | 1 | 1.00 |
| 46 | ಸಿ.ಆರ್.ಮನೋಹರ್ | 1 | 1.00 |
| 47 | ಸುನೀಲ್ ಸುಬ್ರಮಣಿ ಎಂ.ಪಿ | 1 | 1.00 |
| 48 | ಆರ್.ದರ್ಮಸೇನ | 1 | 1.00 |
| 49 | ಎಸ್.ನಾಗರಾಜ್ (ಸಂದೇಶ್ ನಾಗರಾಜ್) | 1 | 1.00 |
| ಪದವೀಧರರ ಕ್ಷೇತ್ರ | | | |
| 50 | ಡಿ.ಹೆಚ್.ಶಂಕರಮೂರ್ತಿ | 1 | 1.00 |
| 51 | ರಾಮಚಂದ್ರಗೌಡ | 1 | 1.00 |
| 52 | ಅಮರನಾಥ್ ಪಾಟೀಲ್ | 1 | 1.00 |
| 53 | ಆರ್.ಚೌಡರೆಡ್ಡಿ ತೂಪಲ್ಲಿ | 1 | 1.00 |
| 54 | ಎಸ್.ವಿ.ಸಂಕನೂರ | 1 | 1.00 |
| 55 | ನಿರಾಣಿ ಹನಮಂತ್ ರುದ್ರಪ್ಪ | 1 | 1.00 |
| 56 | ಕೆ.ಟಿ.ಶ್ರೀಕಂಠೇಗೌಡ | 1 | 1.00 |

| | | | |
|---|---|---|---|
| **ಶಿಕ್ಷಕರ ಕ್ಷೇತ್ರ** | | | |
| 57 | ಕ್ಯಾಪ್ಟನ್ ಗಣೇಶ್ ಕಾರ್ಣಿಕ್ | 1 | 1.00 |
| 58 | ಮರಿತಿಬ್ಬೇಗೌಡ | 1 | 1.00 |
| 59 | ರಮೇಶ್ ಬಾಬು | 1 | 1.00 |
| 60 | ಪುಟ್ಟಣ್ಣ | 1 | 1.00 |
| 61 | ಶರಣಪ್ಪ ಮಟ್ಟೂರ | 1 | 1.00 |
| 62 | ಬಸವರಾಜ್ ಶಿವಲಿಂಗಪ್ಪ ಹೊರಟ್ಟಿ | 1 | 1.00 |
| 63 | ಅರುಣ ಶಹಾಪೂರ | 1 | 1.00 |
| **ನಾಮ ನಿರ್ದೇಶನ** | | | |
| 64 | ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) | 1 | 1.00 |
| 65 | ಕೆ.ಬಿ.ಶಾಣಪ್ಪ | 1 | 1.00 |
| 66 | ತಾರಾ ಅನೂರಾಧ | 1 | 1.00 |
| 67 | ವಿ.ಎಸ್.ಉಗ್ರಪ್ಪ | 1 | 1.00 |
| 68 | ಕೆ.ಅಬ್ದುಲ್ ಜಬ್ಬಾರ್ | 1 | 1.00 |
| 69 | ಡಾ.ಜಯಮಾಲಾ ರಾಮಚಂದ್ರ | 1 | 1.00 |
| 70 | ಐವನ್ ಡಿ'ಸೋಜಾ | 1 | 1.00 |
| 71 | ಇಕ್ಬಾಲ್ ಅಹ್ಮದ್ ಸರಡಗಿ | 1 | 1.00 |
| 72 | ಕೊಂಡಜ್ಜಿ ಮೋಹನ್ | 1 | 1.00 |
| 73 | ರಮೇಶ್ ಎನ್. ಆರ್ | 1 | 1.00 |
| 74 | ಸಿ.ಎಂ. ಲಿಂಗಪ್ಪ | 1 | 1.00 |
| ಒಟ್ಟು | | **74** | **74.00** |

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** **ರಾಜ್ಯದ ಎಲ್ಲಾ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯನ್ನು 2017-18ನೇ ಸಾಲಿನಿಂದ ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತು.**

ಓದಲಾಗಿದೆ: 1. 2017-18ನೇ ಆಯವ್ಯಯ ಭಾಷಣ ಕಂಡಿಕೆ ಸಂಖ್ಯೆ:296.
2. ಸಚಿವ ಸಂಪುಟದ ಸಂಖ್ಯೆ: 343/2017, ದಿ:30.05.2017.

## ಪ್ರಸ್ತಾವನೆ:

ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಪ್ರತಿ ಗ್ರಾಮಕ್ಕೆ ರೂ.1.00 ಕೋಟಿಗಳಂತೆ ನೀಡುವ ಅನುದಾನದ ಜೊತೆಗೆ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮವನ್ನು ಒಗ್ಗೂಡಿಸಿ ಒಂದು ಸಾವಿರ ಗ್ರಾಮಗಳನ್ನು ಸರ್ವತೋಮುಖವಾಗಿ ಎರಡು ವರ್ಷಗಳಲ್ಲಿ ಅಭಿವೃದ್ಧಿ ಪಡಿಸಲು 2017-18ನೇ ಸಾಲಿನ ಮೇಲೆ ಓದಲಾದ - (1) ರಂತೆ ಆಯವ್ಯಯದಲ್ಲಿ ಪ್ರಸ್ತಾಪಿಸಿದೆ.

ಪ್ರಸ್ತುತ ಸಾಲಿನಲ್ಲಿ (2017-18) ಎಲ್ಲಾ 1000 ಗ್ರಾಮಗಳನ್ನು ಆಯ್ಕೆ ಮಾಡಿ ಮುಖ್ಯಮಂತ್ರಿಗಳ ಗ್ರಾಮವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ಇದಕ್ಕೆ 2017-18 ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಬೇಕಾಗುವ ಅನುದಾನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಒಟ್ಟಾರೆ ಉಳಿತಾಯ ಹಾಗೂ ಆಂತರಿಕ ಸಂಪನ್ಮೂಲಗಳಿಂದ ಭರಿಸಬೇಕೆಂದು ಸಚಿವ ಸಂಪುಟವು ಮೇಲೆ ಓದಲಾದ-(2)ರಂತೆ ಅನುಮೋದಿಸಿರುತ್ತದೆ.

ಅದರಂತೆ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಪ್ರತಿ ಗ್ರಾಮಕ್ಕೆ ನೀಡುವ ರೂ.1.00 ಕೋಟಿ ಅನುದಾನದ ಜೊತೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು ಇತರೆ ಅಭಿವೃದ್ಧಿ ಯೋಜನೆಗಳ ಅನುದಾನದಲ್ಲಿ ಅನುಷ್ಠಾನಕ್ಕೆ ತರುತ್ತಿರುವ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಸಹ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅನುಷ್ಠಾನಕ್ಕೆ ತಂದು ಗ್ರಾಮಗಳನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು ಹಾಗೂ ಗ್ರಾಮಗಳ ಅಭಿವೃದ್ಧಿ ಮಾಡುವ ಅನುಷ್ಟಾನದ ಹೊಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಲು ನಿರ್ಧರಿಸಿದೆ.

ಯೋಜನೆಯ ಉದ್ದೇಶ, ಗ್ರಾಮಗಳ ಆಯ್ಕೆ, ಕೈಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳು, ಕಾರ್ಯಾನುಷ್ಠಾನದ ಕ್ರಮಗಳು, ಮಾರ್ಗಸೂಚಿ ಮತ್ತು ಸರ್ಕಾರಿ ಆದೇಶ / ಸುತ್ತೋಲೆಗಳಲ್ಲಿ ತಿಳಿಸಿದಂತೆ ಇರುತ್ತದೆ. ಆದ್ದರಿಂದ, ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯನ್ನು ರಾಜ್ಯಾದ್ಯಂತ 2017-18 ನೇ ಸಾಲಿನಿಂದ ಜಾರಿಗೆ ತರಲು ಸರ್ಕಾರ ತೀರ್ಮಾನಿಸಿರುತ್ತದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:09:ಗ್ರಾವಿಯೋ:2017, ಬೆಂಗಳೂರು, ದಿನಾಂಕ: 20.06.2017.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ "ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆ" ಯಡಿ ಆಯ್ಕೆಯಾಗುವ ಪ್ರತಿ ಗ್ರಾಮಕ್ಕೆ ಗರಿಷ್ಠ ರೂ.1.00 ಕೋಟಿ ಅನುದಾನದಂತೆ ಗರಿಷ್ಟ 1000 ಗ್ರಾಮಗಳನ್ನು 2017-18ನೇ ಸಾಲಿನಲ್ಲಿ ಆಯ್ಕೆ ಮಾಡಿ ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಗಳ ಗ್ರಾಮವಿಕಾಸ ಯೋಜನೆಯನ್ನು ಅನುಷ್ಠಾನವನ್ನು ಆರಂಭಿಸಲು ಹಾಗೂ

ಗ್ರಾಮಗಳ ಆಯ್ಕೆ, ಕೈಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳು, ಕಾರ್ಯಾನುಷ್ಠಾನದ ಕ್ರಮಗಳು, ಮಾರ್ಗಸೂಚಿ ಮತ್ತು ಸರ್ಕಾರಿ ಆದೇಶ / ಸುತ್ತೋಲೆಗಳಲ್ಲಿ ನಿಗದಿಪಡಿಸುವಂತೆ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳನ್ನು ಅಭಿವೃದ್ಧಿ ಮಾಡುವ ಅನುಷ್ಠಾನದ ಹೊಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಲು ಮತ್ತು ಸರ್ಕಾರವು ಅನುಮೋದಿಸುವ ಮಾರ್ಗಸೂಚಿಯಲ್ಲಿರುವಂತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ.

ಮುಖ್ಯಮಂತ್ರಿಗಳ ಗ್ರಾಮವಿಕಾಸ ಯೋಜನೆಗೆ 2017–18 ನೇ ಸಾಲಿನಲ್ಲಿ ರೂ.300.00 ಕೋಟಿಗಳನ್ನು ನಿಗದಿಪಡಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಯೋಜನೆಗೆ ಹೆಚ್ಚುವರಿಯಾಗಿ ಬೇಕಾಗುವ ಅನುದಾನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಒಟ್ಟಾರೆ ಉಳಿತಾಯ ಹಾಗೂ ಆಂತರಿಕ ಸಂಪನ್ಮೂಲಗಳಿಂದ ಭರಿಸಿ ಅನುಷ್ಠಾನಕ್ಕೆ ತರುವುದು.

ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಪ್ರತಿ ಗ್ರಾಮಕ್ಕೆ ನೀಡುವ ರೂ.1.00 ಕೋಟಿ ಅನುದಾನದ ಜೊತೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇತರೆ ಅಭಿವೃದ್ಧಿ ಯೋಜನೆಗಳ ಅನುದಾನದಲ್ಲಿ ಅನುಷ್ಠಾನಕ್ಕೆ ತರುತ್ತಿರುವ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಸಹ ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅನುಷ್ಠಾನಕ್ಕೆ ತಂದು ಗ್ರಾಮಗಳನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು ಮಂಜೂರಾತಿ ನೀಡಿದೆ.

ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಗಾಗಿ ಈ ಕೆಳಕಂಡ ಲೆಕ್ಕ ಶೀರ್ಷಿಕೆ ಗಳಡಿ ಬಿಡುಗಡೆ ಮಾಡುವ ಅನುದಾನದಲ್ಲಿ ವೆಚ್ಚವನ್ನು ಭರಿಸುವುದು.

1. 4215–02–800–0–02–132 (ಯೋಜನೆ)– ಬಂಡವಾಳ ವೆಚ್ಚಗಳು
2. 4215–02–800–0–02–422 (ಯೋಜನೆ)– ವಿಶೇಷ ಘಟಕ ಯೋಜನೆ
3. 4215–02–800–0–02–423 (ಯೋಜನೆ)– ಗಿರಿಜನ ಉಪ ಯೋಜನೆ

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಯೋಇ:14:ಜಿಯೋವಿ:2017 ದಿನಾಂಕ 28.04.2017 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ:263:ವೆಚ್ಚ–6/2017 ದಿನಾಂಕ 26.04.2017 ರಲ್ಲಿ ನೀಡಿದ ಸಹಮತಿಗಳನ್ನಾಧರಿಸಿ ಸಚಿವ ಸಂಪುಟವು ಸಂಖ್ಯೆ 343/2017, ದಿನಾಂಕ: 30.05.2017 ರಲ್ಲಿ ನೀಡಿದ ಅನುಮೋದನೆಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ. ಬೂವನಹಳ್ಳಿ ನಾಗರಾಜ್)**
ನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.



ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಯೋಜನೆಗಳ ಪ್ರಗತಿಯ ಕುರಿತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಜನಪ್ರತಿನಿಧಿಗಳು ಮತ್ತು ಇಲಾಖಾ ಮುಖ್ಯಸ್ಥರುಗಳೊಂದಿಗೆ ಚರ್ಚಿಸುತ್ತಿರುವ ಒಂದು ನೋಟ



ರಾಷ್ಟ್ರೀಯ ಸಿರಿಧಾನ್ಯ ಮೇಳದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಮಾನ್ಯ ಶ್ರೀ ಎಚ್.ಕೆ ಪಾಟೀಲ್, ಕೇಂದ್ರ ಮಂತ್ರಿಗಳಾದ ಅನಂತ ಕುಮಾರ್, ಡಿ.ವಿ.ಸದಾನಂದ ಗೌಡರವರು ಮತ್ತಿತರ ಗಣ್ಯರು ಭಾಗವಹಿಸಿದ್ದರು.

# KARNATAKA VIKAS : JULY 2017

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
Date of Publication : 8th of Every Month.
RNI No: KAR KAN / 28103 / 1974 Total No. Pages 52, Posted at Bengaluru PSO, Mysore Road, Bengaluru
on 9th, 10th, 11th of every month.

ರಾಷ್ಟ್ರೀಯ ಕೌಶಲ್ಯ ದಿನಾಚರಣೆ
ಜುಲೈ-15

"ಶಕ್ತಿಯೇ ಜೀವನ
ದೌರ್ಬಲ್ಯವೇ ಮರಣ
– ಸ್ವಾಮಿ ವಿವೇಕಾನಂದ



## ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ

'ಎಲ್ಲಾ ನಿರುದ್ಯೋಗಿ ಯುವಕ-ಯುವತಿಯರಿಗಾಗಿ'

Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Mubarak Ahmed**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00